ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ಜುಲೈ 19, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 66 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999




**ಫಸಲಿಗೆ ಶಕ್ತಿ** ಕೆಲ ದಿನಗಳಿಂದ ಜಿಲ್ಲಾದ್ಯಂತ ಉತ್ತಮ ಮಳೆ ಬೀಳುತ್ತಿದೆ. ಕೃಷಿ ಚಟುವಟಿಕೆಗಳು ಬರದಿಂದ ಸಾಗುತ್ತಿವೆ. ಹರಿಹರ ತಾಲ್ಲೂಕು ದೇವರಬೆಳಕೆರೆಯ ಬಳಿ ಮುಂಗಾರು ಹಂಗಾಮಿಗೆ ಬಿತ್ತಲಾಗಿರುವ ಮೆಕ್ಕೆಜೋಳದ ಬೆಳೆಗೆ ಗೊಬ್ಬರ ಹಾಕಲಾಗುತ್ತಿದೆ.

# ಇಂಡಿಯಾ V/S ಎನ್‌ಡಿಎ

## ಇಂಡಿಯಾ ಒಕ್ಕೂಟದಡಿ ಮಿತ್ರ ಪಕ್ಷಗಳ ಸ್ಪರ್ಧೆ ವಿಪಕ್ಷಗಳ ಸಭೆಯಲ್ಲಿ ನಿರ್ಧಾರ

ಬೆಂಗಳೂರು, ಜು. 18 - ಅಧಿಕಾರ ಅಥವಾ ಪ್ರಧಾನಿ ಹುದ್ದೆಯ ಮೇಲೆ ನಮಗೆ ಆಸಕ್ತಿ ಇಲ್ಲ ಎಂದು ಕಾಂಗ್ರೆಸ್ ಇಂದಿಲ್ಲಿ ಸ್ಪಷ್ಟಪಡಿಸುವ ಮೂಲಕ ಬಿಜೆಪಿ ವಿರೋಧಿಗಳನ್ನು ಒಗ್ಗೂಡಿಸಲು ಮೊದಲ ಹೆಜ್ಜೆ ಇಟ್ಟಿದೆ.

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ವಿರುದ್ಧವಾಗಿ ಪ್ರತಿಪಕ್ಷಗಳನ್ನು ಒಗ್ಗೂಡಿಸಲು ಮುಂಚೂಣಿಯಲ್ಲಿರುವ ಕಾಂಗ್ರೆಸ್ ಅಧಿಕಾರ ತ್ಯಾಗಕ್ಕೂ ಸಿದ್ಧ ಎಂದಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಹೋರಾಟ ನಡೆಸಲು ತೀರ್ಮಾನ ಕೈಗೊಂಡಿರುವ ಪ್ರತಿಪಕ್ಷಗಳು ಅಧಿಕಾರಕ್ಕೆ ಬಂದರೆ ನಾಯಕ ಯಾರೆಂಬುದರ ಬಗ್ಗೆ ಅಂತಿಮ ತೀರ್ಮಾನ ಮಾಡಿಲ್ಲ.

ಕಾಂಗ್ರೆಸ್ ಆತಿಥ್ಯ ವಹಿಸಿರುವ ಬಿಜೆಪಿ ವಿರುದ್ಧದ 26 ಪಕ್ಷಗಳ ಮುಖಂಡರು ಕಳೆದ ಎರಡು ದಿನಗಳಿಂದ ಸಭೆ ನಡೆಸಿ ಒಗ್ಗಟ್ಟಿನ ಮಂತ್ರ ಜಪಿಸಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆಗೆ 545 ಕ್ಷೇತ್ರಗಳಲ್ಲೂ ಮಿತ್ರ ಪಕ್ಷಗಳು ಹೊಂದಾಣಿಕೆ ಮಾಡಿಕೊಂಡು



**ಅಧಿಕಾರ ತ್ಯಾಗಕ್ಕೂ ಸಿದ್ಧ ಎಂದ ಒಕ್ಕೂಟದ ಮುಂಚೂಣಿಯಲ್ಲಿರುವ ಕಾಂಗ್ರೆಸ್**

ಕಣಕ್ಕಿಳಿಯಲು ನಿರ್ಧರಿಸಿವೆ.

ಇಂಡಿಯನ್ ನ್ಯಾಷನಲ್ ಡೆಮಾಕ್ರೆಟಿಕ್ ಇನ್‌ಕ್ಲೂಸಿವ್ ಅಲಿಯನ್ಸ್ (ಇಂಡಿಯಾ) ಎಂಬ ಒಕ್ಕೂಟದಡಿ ಮಿತ್ರ ಪಕ್ಷಗಳು ಸ್ಪರ್ಧಿಸಲಿವೆ. ಇದರ ರೂಪು-ರೇಷೆಗಳನ್ನು ಮುಂದಿನ ದಿನಗಳಲ್ಲಿ ನಿರ್ಧರಿಸಲಾಗುವುದು. ನಮ್ಮ ಒಗ್ಗಟ್ಟು ಬಲಿಷ್ಠವಾಗುತ್ತಿದ್ದಂತೆ ಬಿಜೆಪಿ ಎಚ್ಚೆತ್ತುಕೊಂಡು ತನ್ನ ಒಕ್ಕೂಟ ಉಳಿಸಿಕೊಳ್ಳುವ ಪ್ರಯತ್ನಕ್ಕೆ ಮುಂದಾಗಿದೆ.

ನಮ್ಮ ಒಗ್ಗಟ್ಟು ಎನ್‌ಡಿಎ ಸರ್ಕಾರವನ್ನು ಎಚ್ಚರಿಸಿದೆ. ಚುನಾವಣೆಯವರೆಗೂ ನಮ್ಮ ಶಕ್ತಿಯನ್ನು ಇದೇ ರೀತಿ ಮುಂದುವರೆಸಿ ಕೇಂದ್ರದ ವಿರುದ್ಧ ಹೋರಾಟ ನಡೆಸುವ ನಿರ್ಣಯ ಕೈಗೊಂಡಿವೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿಯನ್ನು ರಾಷ್ಟ್ರಾದ್ಯಂತ ಕಟ್ಟಿ ಹಾಕಲು ಏನೆಲ್ಲಾ ಕಾರ್ಯತಂತ್ರ ರೂಪಿಸಬೇಕು ಎಂಬ ಬಗ್ಗೆ ಹತ್ತು-ಹಲವು ಸಲಹೆ ಬಂದಿವೆ. ಲೋಕಸಭೆ ಚುನಾವಣೆಗೂ ಮುನ್ನ ತಿಂಗಳಿಗೊಮ್ಮೆ ಇಲ್ಲವೇ, 2 ತಿಂಗಳಿಗೊಮ್ಮೆ ಪ್ರತಿಪಕ್ಷಗಳ ಮುಖಂಡರು ಸಭೆ ಸೇರಿ ಚುನಾವಣೆ ಸಿದ್ಧತೆ ನಡೆಸುವ ತೀರ್ಮಾನಕ್ಕೆ ನಾಯಕರು ಬಂದಿದ್ದಾರೆ. ಅಧಿಕಾರಕ್ಕಾಗಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿರುವ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ಪ್ರಾದೇಶಿಕ ಪಕ್ಷಗಳನ್ನು ವಿಭಜಿಸುತ್ತಿರುವುದನ್ನು ಸಭೆ ಖಂಡಿಸಿದೆ.

ಮೋದಿ ಅವರ ವಿರುದ್ಧ ಒಗ್ಗಟ್ಟಿನಿಂದ ಹೋರಾಟ ನಡೆಸಿದರೆ, ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ ಎಂಬ ವಿಶ್ವಾಸ ಸಭೆಯಲ್ಲಿ ಮೂಡಿ ಬಂದಿದೆ.

ಕಳೆದ 9-10 ವರ್ಷಗಳ ಬಿಜೆಪಿ ಆಡಳಿತದಿಂದ ಅಗತ್ಯ ವಸ್ತುಗಳ ಬೆಲೆ ಏರಿಕೆ ಬಡ ಮತ್ತು ಮಧ್ಯಮ ವರ್ಗದವರನ್ನು ಅಲುಗಾಡಿಸಿದೆ.

ಸರ್ವಾಧಿಕಾರಿ ಧೋರಣೆಯಿಂದ ಸಂವಿಧಾನದ ಆಶೋತ್ತರಗಳಿಗೆ ಧಕ್ಕೆಯುಂಟಾಗುತ್ತಿದೆ. ಎನ್‌ಡಿಎ ಆಡಳಿತದ ಎಲ್ಲಾ ಲೋಪಗಳನ್ನು ಜನರ ಮುಂದಿಡಲು ಸಭೆ ನಿರ್ಧರಿಸಿದೆ.

ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಂದ ಬೃಹತ್ ಜಾಥಾ-ಸಭೆಗಳನ್ನು ನಡೆಸಿ ಕೇಂದ್ರದ ಜನವಿರೋಧಿ ನೀತಿಗಳ ಬಗ್ಗೆ ಜಾಗೃತಿ ಮೂಡಿಸುವುದು. ಇದನ್ನು ದೇಶದ ಉದ್ದಗಲಕ್ಕೂ ವಿಸ್ತರಣೆ ಮಾಡಿ, ಆಂದೋಲನದ ರೂಪದಲ್ಲಿ ಜನರಿಗೆ ಅರಿವು ಮೂಡಿಸಲು ನಿರ್ಣಯ ಕೈಗೊಂಡಿದ್ದಾರೆ.

# ಎಪಿಎಂಸಿ ತಿದ್ದುಪಡಿ ಕಾಯ್ದೆ ವಾಪಸ್‌ಗೆ ಹಿನ್ನಡೆ

**ಪ್ರತಿಪಕ್ಷಗಳ ವಿರೋಧದ ನಂತರ ಮಸೂದೆ ಸದನ ಸಮಿತಿಗೆ**

ಬೆಂಗಳೂರು, ಜು. 18 - ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ರೂಪಿಸಲಾಗಿದ್ದ ವಿವಾದಿತ ಎ.ಪಿ.ಎಂ.ಸಿ. ಕಾಯ್ದೆ ತಿದ್ದುಪಡಿ ಹಿಂಪಡೆಯಲು ಮುಂದಾದ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿದ್ದು, ಪರಿಷತ್‌ನಲ್ಲಿ ವಿಧೇಯಕವನ್ನು ಸದನ ಪರಿಶೀಲನಾ ಸಮಿತಿಗೆ ವಹಿಸಲಾಗಿದೆ.

ರಾಜ್ಯ ಸರ್ಕಾರ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿತ್ತು. ಬಿಜೆಪಿ ಶಾಸಕರ ತೀವ್ರ ವಿರೋಧದ ನಡುವೆಯೂ ವಿಧಾನಸಭೆಯಲ್ಲಿ ತಿದ್ದುಪಡಿ ವಿಧೇಯಕಕ್ಕೆ ಅನುಮೋದನೆಯನ್ನೂ ಪಡೆದಿತ್ತು.

ಆದರೆ, ಎಪಿಎಂಸಿ ತಿದ್ದುಪಡಿ ವಿಧೇಯಕಕ್ಕೆ ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯರು ಒಪ್ಪಿಗೆ ನೀಡಿಲ್ಲ. ಜೆಡಿಎಸ್ ಕೂಡ (3ನೇ ಪುಟಕ್ಕೆ)

# ಪಡಿತರ ಹಣ : ಹಿಂಬಾಕಿ ಪಡೆಯಲು ಇಲ್ಲ ಅವಕಾಶ

## ಜಿಲ್ಲೆಯ 42 ಸಾವಿರ ಪಡಿತರದಾರರ ಖಾತೆಗೆ ಹಣ ಜಮಾ ಮಾಡಲು ಖಾತೆಗಳ ತೊಡಕು

ದಾವಣಗೆರೆ, ಜು. 18 - ನಿಮ್ಮ ಆದ್ಯತಾ (ಬಿ.ಪಿ.ಎಲ್.) ಇಲ್ಲವೇ ಅಂತ್ಯೋದಯ ಅನ್ನ ಯೋಜನೆಯ (ಎ.ಎ.ವೈ.) ಪಡಿತರ ಚೀಟಿಯು ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಯಡಿ ಹಣ ಪಡೆಯಲು ಅರ್ಹವಾಗಿದ್ದರೂ, ಯಾವುದೋ ತೊಡಕಿನಿಂದ ಹಣ ಬಂದಿಲ್ಲವೇ? ತಕ್ಷಣ ಸಮಸ್ಯೆ ಬಗೆಹರಿಸಿಕೊಳ್ಳಿ. ಏಕೆಂದರೆ ಒಂದು ತಿಂಗಳು ಸಿಗದೇ ಇರುವ ಹಣವನ್ನು ಮುಂದಿನ ತಿಂಗಳು ಪಡೆಯಲು ಅವಕಾಶವಿಲ್ಲ!

ರಾಜ್ಯ ಸರ್ಕಾರದಿಂದ ವ್ಯಕ್ತಿಯೊಬ್ಬರಿಗೆ ನೀಡಬೇಕಿದ್ದ ಐದು ಕೆ.ಜಿ. ಅಕ್ಕಿಯ ಬದಲು ತಲಾ 170 ರೂ. ಹಣವನ್ನು ಜಮಾ ಮಾಡುವುದಾಗಿ ತಿಳಿಸಲಾಗಿತ್ತು. ಅದರಂತೆ, ಜಿಲ್ಲೆಯಲ್ಲಿ 16.67 ಕೋಟಿ ರೂ. ಹಣವನ್ನು 2.88 ಲಕ್ಷ ಪಡಿತರ ಚೀಟಿದಾರರಿಗೆ ಜಮಾ ಮಾಡಲಾಗಿದೆ.

ಆದರೂ, 42,258 ಪಡಿತರ ಚೀಟಿಗಳ ಯಜಮಾನ/ಯಜಮಾನಿಗೆ ಹಲವಾರು ತೊಡಕುಗಳು ಕಾರಣದಿಂದ ತಮ್ಮ ಖಾತೆಗಳಿಗೆ ಹಣ ಪಡೆಯಲು ಸಾಧ್ಯವಾಗಿಲ್ಲ. ಇವರು ಈ ತೊಡಕುಗಳನ್ನು ಬಗೆಹರಿಸಿಕೊಂಡರೆ ಮಾತ್ರ




ಮುಂದಿನ ತಿಂಗಳು ತಮ್ಮ ಖಾತೆಗಳಿಗೆ ಹಣ ಪಡೆದುಕೊಳ್ಳಲಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 3.30 ಲಕ್ಷ ಪಡಿತರ ಚೀಟಿದಾರರಿಗೆ 21.09 ಕೋಟಿ ರೂ. ಹಣವನ್ನು ಜುಲೈ ತಿಂಗಳಲ್ಲಿ ಜಮಾ ಮಾಡಬೇಕಿತ್ತು. ಆದರೆ, 42 ಸಾವಿರದಷ್ಟು ಪಡಿತರದಾರರಿಗೆ 4.42 ಕೋಟಿ ರೂ.ಗಳನ್ನು ನಾನಾ ಕಾರಣದಿಂದ ಜಮಾ ಮಾಡಲು ಸಾಧ್ಯವಾಗಿಲ್ಲ.

ಕುಟುಂಬದ ಮುಖ್ಯಸ್ಥರು ಬ್ಯಾಂಕ್ ಖಾತೆಯನ್ನೇ ಹೊಂದಿಲ್ಲ. ಕೆಲವರು ಖಾತೆ ಹೊಂದಿದ್ದರೂ ಆಧಾರ್ ಜೋಡಣೆ ಮಾಡಿಲ್ಲ. ಇನ್ನು ಕೆಲವರು ಜೋಡಣೆ ಮಾಡಿದರೂ ಬಹಳ ದಿನಗಳಿಂದ ಬಳಕೆಯಾಗದೇ ನಿಷ್ಕ್ರಿಯವಾಗಿದೆ. ಇನ್ನು ಕೆಲವರು ಇ-ಕೆವೈಸಿ ಮಾಡಿಸಿಲ್ಲ.

ಜಿಲ್ಲೆಯಲ್ಲಿ ಈ ರೀತಿಯ ಸಮಸ್ಯೆ ಎದುರಿಸುತ್ತಿರುವವರ ಸಂಖ್ಯೆ ದಾವಣಗೆರೆ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ 16,533ರಷ್ಟಿದೆ. ಚನ್ನಗಿರಿಯಲ್ಲಿ 10,370, ಹರಿಹರದಲ್ಲಿ 6,723, ಹೊನ್ನಾಳಿಯಲ್ಲಿ 3,505, (3ನೇ ಪುಟಕ್ಕೆ)

> **ಬ್ಯಾಂಕ್ ಖಾತೆ ಇಲ್ಲದವರು ಇಂಡಿಯನ್ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (ಐ.ಪಿ.ಪಿ.ಬಿ.) ಮೂಲಕ ತಕ್ಷಣವೇ ಖಾತೆ ಸೌಲಭ್ಯ ಪಡೆಯಬಹುದು. ಇದಕ್ಕಾಗಿ ನಾವು ಅಂಚೆ ಇಲಾಖೆ ಸಹಕಾರ ಪಡೆಯುತ್ತಿದ್ದೇವೆ. ನ್ಯಾಯ ಬೆಲೆ ಅಂಗಡಿಗಳ ಸಮೀಪದಲ್ಲಿ ಇದಕ್ಕಾಗಿ ಶಿಬಿರಗಳನ್ನೂ ಮಾಡುತ್ತಿದ್ದೇವೆ. ಪಡಿತರ ಚೀಟಿದಾರರು ಈ ಸೌಲಭ್ಯ ಪಡೆಯುತ್ತಿದ್ದಾರೆ.**
>
> **- ಶಿದ್ದರಾಮ ಮಾಡಿಹಾಳ,**
> **ಆಹಾರ ಇಲಾಖೆ ಉಪ ನಿರ್ದೇಶಕ**

# ಇ-ಸಿಗರೇಟು ಮಾರಾಟ ವೆಬ್‌ಸೈಟ್ಸ್‌ಗೆ ನೋಟಿಸ್

ನವದೆಹಲಿ, ಜು. 18 - ಭಾರತದಲ್ಲಿ ನಿಷೇಧಿತವಾಗಿರುವ ಇ - ಸಿಗರೇಟುಗಳನ್ನು ಮಾರುತ್ತಿದ್ದ 15 ವೆಬ್‌ಸೈಟ್‌ಗಳಿಗೆ ಕೇಂದ್ರ ಆರೋಗ್ಯ ಸಚಿವಾಲಯ ನೋಟಿಸ್ ಕಳಿಸಿದೆ. ಇ - ಸಿಗರೇಟುಗಳ ಜಾಹೀರಾತು ಹಾಗೂ ಮಾರಾಟ ನಿಲ್ಲಿಸುವಂತೆ ತಿಳಿಸಲಾಗಿದೆ.

ಇನ್ನೂ ಆರು ವೆಬ್ ತಾಣಗಳ ಮೇಲೆ ನಿಗಾ ಇರಿಸಲಾಗಿದೆ. ಸಾಮಾಜಿಕ ಜಾಲ ತಾಣಗಳಲ್ಲಿ ಇ-ಸಿಗರೇಟುಗಳ ಜಾಹೀರಾತು ಹಾಗೂ ಮಾರಾಟ ಮಾಡುತ್ತಿರುವುದರ ಬಗ್ಗೆಯೂ ಗಮನ ಹರಿಸಲಾಗುತ್ತಿದೆ. ಅವುಗಳಿಗೂ ನೋಟಿಸ್ ಕಳಿಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ನೋಟಿಸ್ ಪಡೆದ 15 ವೆಬ್ ತಾಣಗಳ ಪೈಕಿ 4 ಕಾರ್ಯನಿರ್ವಹಣೆ ನಿಲ್ಲಿಸಿವೆ. ಉಳಿದವು ಇನ್ನೂ ಪ್ರತಿಕ್ರಿಯೆ ನೀಡಿಲ್ಲ. ಅವು ಪ್ರತಿಕ್ರಿಯೆ ನೀಡದೇ ಹೋದರೆ ಕಾನೂನು ರೀತಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ಹೇಳಿವೆ.

# ಮುರುಘಾಮಠದ ಆಡಳಿತಾಧಿಕಾರಿ ನೇಮಕದ ಆದೇಶ ವಿಸ್ತರಣೆ

ಬೆಂಗಳೂರು, ಜು. 18 - ಚಿತ್ರದುರ್ಗದ ಮುರುಘಾ ಮಠಕ್ಕೆ ಶ್ರೀ ಬಸವ ಪ್ರಭು ಸ್ವಾಮೀಜಿ ಅವರನ್ನು ತಾತ್ಕಾಲಿಕ ಉಸ್ತುವಾರಿ ಸ್ವಾಮೀಜಿ ಆಗಿ ನೇಮಿಸಿರುವ ಪ್ರಕ್ರಿಯೆ ಪ್ರಜಾಪ್ರಭುತ್ವದ ಚೌಕಟ್ಟುಗಳಿಗೆ ಒಳಪಟ್ಟಿರುವ ಬಗ್ಗೆ ಕೂಲಂಕುಶ ಪರಿಶೀಲನೆ ಅಗತ್ಯವಿದೆ ಎಂದಿರುವ ಹೈಕೋರ್ಟ್, ಮಠದ ತಾತ್ಕಾಲಿಕ ಆಡಳಿತಾಧಿಕಾರಿಯಾಗಿ ಚಿತ್ರದುರ್ಗ ಜಿಲ್ಲಾ ಪ್ರಧಾನ ನ್ಯಾಯಾಧೀಶರ ನೇಮಕದ ಆದೇಶವನ್ನು ವಿಸ್ತರಿಸಿದೆ.

ಬಿಜೆಪಿ ಸರ್ಕಾರ ಇದ್ದ ಸಮಯದಲ್ಲಿ ಮಠಕ್ಕೆ ಆಡಳಿತಾಧಿಕಾರಿ ನೇಮಿಸಿದ್ದನ್ನು ಏಕಸದಸ್ಯ ಪೀಠವು ರದ್ದುಗೊಳಿಸಿತ್ತು. ಜಿಲ್ಲಾ ನ್ಯಾಯಮೂರ್ತಿಯನ್ನು ಮಠದ ತಾತ್ಕಾಲಿಕ ಆಡಳಿತಾಧಿಕಾರಿಯಾಗಿ ನೇಮಿಸಲಾಗಿತ್ತು.

ಇದನ್ನು ಪ್ರಶ್ನಿಸಿ ದಾಖಲಿಸಿದ ಮೇಲ್ಮನವಿಯನ್ನು ವಿಚಾರಣೆಗೆ ಒಳಪಡಿಸಿರುವ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ



ನೇತೃತ್ವದ ವಿಭಾಗೀಯ ಪೀಠ, ಜಿಲ್ಲಾ ನ್ಯಾಯಮೂರ್ತಿಯನ್ನು ತಾತ್ಕಾಲಿಕ ಆಡಳಿತಾಧಿಕಾರಿಯಾಗಿ ಮುಂದುವರೆಸಲು ಆದೇಶಿಸಿದೆ.

ವಿಚಾರಣೆ ವೇಳೆ ಮಠದ ಪರವಾಗಿ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ್ ವಾದ ಮಂಡಿಸಿ, ಶಾಖಾ ಮಠದ ಸ್ವಾಮೀಜಿಯಾಗಿರುವ ಶ್ರೀ ಬಸವಪ್ರಭು ಸ್ವಾಮೀಜಿ ಉಸ್ತುವಾರಿಯಾಗಿ ಕಾರ್ಯಭಾರ ಮುಂದುವರೆಸಿದ್ದಾರೆ. ಇದಕ್ಕೆ ಜೈಲಿನಲ್ಲಿರುವ ಶ್ರೀ ಶಿವಮೂರ್ತಿ ಶರಣರಿಂದ ಪವರ್ ಆಫ್ ಅಟಾರ್ನಿ (4ನೇ ಪುಟಕ್ಕೆ)


# 3 ಜ್ಯೋತಿಗಳು ಗೃಹ ಜ್ಯೋತಿಗೆ ವಿಲೀನ

ಬೆಂಗಳೂರು, ಜು.18 - ಈ ಹಿಂದೆ ಜಾರಿಯಲ್ಲಿದ್ದ ಮೂರು ಜ್ಯೋತಿ ಯೋಜನೆಗಳನ್ನು ಗೃಹ ಜ್ಯೋತಿ ಯೋಜನೆಯಲ್ಲಿ ವಿಲೀನ ಮಾಡಲಾಗಿದೆ. ಇದರೊಂದಿಗೆ 50 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಗೃಹಜ್ಯೋತಿಯ ಲಾಭ ದಕ್ಕಲಿದೆ.

ಈ ಹಿಂದೆ ಭಾಗ್ಯಜ್ಯೋತಿ, ಕುಟೀರ ಜ್ಯೋತಿ, ಅಮೃತ ಜ್ಯೋತಿ ಯೋಜನೆಗಳು ಜಾರಿಯಲ್ಲಿದ್ದವು. ಅವುಗಳನ್ನು ಈಗ ಗೃಹ ಜ್ಯೋತಿಯಲ್ಲಿ ವಿಲೀನ ಮಾಡಲಾಗಿದೆ. ಭಾಗ್ಯ ಜ್ಯೋತಿ ಕುಟುಂಬ ಜ್ಯೋತಿಗೆ ಈವರೆಗೆ 40 ಯೂನಿಟ್ ಉಚಿತವಿತ್ತು. ಈಗ ಅದನ್ನು 53 ಯೂನಿಟ್ ಹಾಗೂ ಶೇ.10ರಷ್ಟು ಹೆಚ್ಚುವರಿ ಉಚಿತ (4ನೇ ಪುಟಕ್ಕೆ)

| ಭದ್ರಾ ಡ್ಯಾಮ್ | ಇಂದಿನ ಮಟ್ಟ : | ಒಳ ಹರಿವು : 835 ಕ್ಯೂಸೆಕ್ಸ್ |
|---|---|---|
| | 141 ಅಡಿ | ಹೊರ ಹರಿವು : 164 ಕ್ಯೂಸೆಕ್ಸ್ |
| | 4 ಇಂಚು | ಹಿಂದಿನ ವರ್ಷದ್ದು : 182.3 ಅಡಿ |

40 ವರ್ಷ ಅಥವಾ ಮೇಲ್ಪಟ್ಟ ಪುರುಷರು ಮೂತ್ರದ ತೊಂದರೆಯಿಂದ ಬಳಲುತ್ತಿದ್ದೀರಾ?
ಹಾಗಾದರೆ ನಮ್ಮ ಉಚಿತ
ಯುರೋಫ್ಲೋಮೆಟ್ರಿ ಶಿಬಿರಕ್ಕೆ
ಭೇಟಿ ನೀಡಿ...
ನಡೆಸಿ ಕೊಡುವವರು:
ಡಾ|| ಅಭಿಜಿತ್ ಎಸ್. ಎಂ
MBBS.MS.MCH urology
ದಿನಾಂಕ : 22.07.2023ರ ಶನಿವಾರ
ಸಮಯ : ಬೆಳಿಗ್ಗೆ 11 : 00 ರಿಂದ ಮಧ್ಯಾಹ್ನ 3 : 00 ಗಂಟೆ
ಸ್ಥಳ : ಆಶ್ರಯ ಆಸ್ಪತ್ರೆ
#1977/1/2, ಎಂ ಸಿ ಸಿ "ಎ" ಬ್ಲಾಕ್, ಶಾಮನೂರು ರಸ್ತೆ
ದಾವಣಗೆರೆ - 577004.
ಮಾಹಿತಿಗಾಗಿ ಸಂಪರ್ಕಿಸಿ :
ಮೊ. : 08192 224679, 91412 12120


ಶ್ರೀ ಕನ್ನಿಕಾ ಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ.,
ಪ್ರಧಾನ ಕಛೇರಿ, #165/1-2, ಶ್ರೀ ವಾಸವಿ ರಸ್ತೆ, 3ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-02
ಪ್ರಕಟಣೆ
ಸದಸ್ಯ ಬಾಂಧವರ ಗಮನಕ್ಕೆ
ದಿನಾಂಕ 08.07.2023 ರ ಶನಿವಾರದಂದು ನಡೆದ ಬ್ಯಾಂಕಿನ 57ನೇ ವಾರ್ಷಿಕ ಮಹಾಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಣಕಾಸು ವರ್ಷ 2022-23ನೇ ಸಾಲಿನ ಡಿವಿಡೆಂಡನ್ನು ಸದಸ್ಯರ ಉಳಿತಾಯ ಖಾತೆಗೆ ದಿನಾಂಕ 14.07.2023 ರಂದು ಜಮಾ ಮಾಡಲಾಗಿದೆ. ಸದಸ್ಯರ ಉಳಿತಾಯ ಖಾತೆಗೆ ಡಿವಿಡೆಂಡ್ ಜಮಾ ಆಗದೇ ಇದ್ದಲ್ಲಿ ಅಂತಹ ಸದಸ್ಯರು ಪ್ರಧಾನ ಕಛೇರಿಗೆ ಭೇಟಿ ನೀಡಿ ಡಿವಿಡೆಂಡ್ ಹಣವನ್ನು ಪಡೆಯಲು ತಿಳಿಸಿದೆ.
ಬ್ಯಾಂಕು 2019-20, 2020-21 ಮತ್ತು 2021-22ನೇ ಸಾಲಿಗೆ ಘೋಷಿಸಿದ ಡಿವಿಡೆಂಡ್ ಮೊತ್ತವನ್ನು ಸದಸ್ಯನು ಪಡೆಯದೇ ಇದ್ದಲ್ಲಿ ಅಂತಹ ಡಿವಿಡೆಂಡ್ ಮೊತ್ತವನ್ನು ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಬ್ಯಾಂಕಿನ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಿಕೊಳ್ಳಲಾಗುವುದು. ಆದ್ದರಿಂದ ಮಾನ್ಯ ಸದಸ್ಯರು ಬ್ಯಾಂಕು ಘೋಷಿಸಿದ ಡಿವಿಡೆಂಡನ್ನು ಉಳಿತಾಯ ಖಾತೆಯ ಮೂಲಕ ಪಡೆಯಲು ವಿನಂತಿಸಲಾಗಿದೆ.
ದಿನಾಂಕ : 14.07.2023
ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/-
(ಪಡಗಲ್ ಪ್ರಶಾಂತ್)
ಪ್ರಧಾನ ವ್ಯವಸ್ಥಾಪಕರು

ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ
#79/2, ರಜತ ಮಹೋತ್ಸವ ಕಟ್ಟಡ, ಪಿ. ಬಿ. ರಸ್ತೆ, ದಾವಣಗೆರೆ
ಚುನಾವಣಾ ಫಲಿತಾಂಶ ಪ್ರಕಟಣೆ
ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ ದಾವಣಗೆರೆ ಇದರ ಆಡಳಿತ ಮಂಡಳಿಗೆ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ), ಬೆಂಗಳೂರು ಪ್ರಾಂತ, ಬೆಂಗಳೂರು ಇವರ ಆದೇಶ ಸಂಖ್ಯೆ ಹೆಚ್‌ಎಸ್‌ಜಿ-3/154/ಹೆಚ್‌ಹೆಚ್‌ಎಸ್/2022-23 ದಿನಾಂಕ : 06-05-2023 ಮೇರೆಗೆ ಬ್ಯಾಂಕಿನ ಚುನಾವಣೆಯನ್ನು ದಿನಾಂಕ : 23-07-2023ರಂದು ನಿಗದಿಪಡಿಸಿದ್ದು, ಸದರಿ ಚುನಾವಣೆಗೆ ಸಂಬಂಧಪಟ್ಟಂತೆ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14ಜಿ ನಲ್ಲಿನ ಉಪಬಂಧ ಅನುಸಾರ ಸಂಘದ ರಿಟರ್ನಿಂಗ್ ಅಧಿಕಾರಿಯಾದ ಶ್ರೀ ಸತೀಶ್ ನಾಯ್ಕ ಎಲ್., ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ದಾವಣಗೆರೆ ಉಪವಿಭಾಗ, ದಾವಣಗೆರೆ ಆದ ನಾನು ಈ ಕೆಳಕಂಡ ಅಭ್ಯರ್ಥಿಗಳ ಹೆಸರಿನ ಎದುರಿನಲ್ಲಿ ತೋರಿಸಿರುವ ಮತ ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಎಂದು ಘೋಷಿಸಿರುತ್ತೇನೆ.
ಒಟ್ಟು ಸ್ಥಾನಗಳ ಸಂಖ್ಯೆ-15, ಈ ಪೈಕಿ ಸಾಮಾನ್ಯ-09, ಪರಿಶಿಷ್ಟ ಜಾತಿ-01, ಪರಿಶಿಷ್ಟ ಪಂಗಡ-01, ಮಹಿಳೆ-02 ಹಾಗೂ ಹಿಂದುಳಿದ ವರ್ಗ ಪ್ರವರ್ಗ ಎ/ಬಿ - 1/1

ಶ್ರೀ ಮುರುಗೇಶ್ ಎನ್. ಎ.
ಸಾಮಾನ್ಯ ಸ್ಥಾನ

ಶ್ರೀ ಕಿರುವಾಡಿ ವಿ. ಸೋಮಶೇಖರ್
ಸಾಮಾನ್ಯ ಸ್ಥಾನ

ಶ್ರೀಮತಿ ಜಯಮ್ಮ ಪಿ.
ಸಾಮಾನ್ಯ ಸ್ಥಾನ

ಶ್ರೀ ಶಂಕರ್‌ರಾವ್ ಕೆ.
ಸಾಮಾನ್ಯ ಸ್ಥಾನ

ಶ್ರೀ ಪ್ರಭು ಪ್ರಸಾದ್ ಎಸ್. ಕೆ.
ಸಾಮಾನ್ಯ ಸ್ಥಾನ

ಶ್ರೀ ಜ್ಯೋತಿ ಪ್ರಕಾಶ್ ಕೆ.ಎಂ.
ಸಾಮಾನ್ಯ ಸ್ಥಾನ

ಶ್ರೀ ಕೊಟ್ರೇಶ್ ಎ.
ಸಾಮಾನ್ಯ ಸ್ಥಾನ

ಶ್ರೀ ಚಿದಾನಂದಪ್ಪ ಬಿ.
ಸಾಮಾನ್ಯ ಸ್ಥಾನ

ಶ್ರೀ ವಿಶಾಲ್‌ಕುಮಾರ್ ಆರ್.
ಸಾಮಾನ್ಯ ಸ್ಥಾನ

ಶ್ರೀ ವೆಂಕಪ್ಪ ಪಿ.ಹೆಚ್.
ಪರಿಶಿಷ್ಟ ಜಾತಿ ಮೀಸಲು ಸ್ಥಾನ

ಶ್ರೀ ಕುಬೇರಪ್ಪ ಎ.ಹೆಚ್.
ಪರಿಶಿಷ್ಟ ಪಂಗಡ ಮೀಸಲು ಸ್ಥಾನ

ಶ್ರೀ ನಾಗೇಂದ್ರಚಾರಿ ಬಿ.
ಹಿಂದುಳಿದ ವರ್ಗ 'ಎ' ಮೀಸಲು ಸ್ಥಾನ

ಶ್ರೀಮತಿ ಉಮಾ
ಹಿಂದುಳಿದ ವರ್ಗ 'ಬಿ' ಮೀಸಲು ಸ್ಥಾನ

ಶ್ರೀಮತಿ ಅನಿತಾ ಕೆ.ಪಿ.
ಮಹಿಳಾ ಮೀಸಲು ಸ್ಥಾನ

ಶ್ರೀಮತಿ ಅನುಪಾ ವೀರೇಂದ್ರಸ್ವಾಮಿ
ಮಹಿಳಾ ಮೀಸಲು ಸ್ಥಾನ
ದಿನಾಂಕ : 17-07-2023
ಸ್ಥಳ : ದಾವಣಗೆರೆ

(ಸತೀಶ್‌ನಾಯ್ಕ ಎಲ್.)
ರಿಟರ್ನಿಂಗ್ ಅಧಿಕಾರಿ
ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ., ದಾವಣಗೆರೆ
ಹಾಗೂ ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ
ನಿಬಂಧಕರ ಕಛೇರಿ, ದಾವಣಗೆರೆ ಉಪವಿಭಾಗ, ದಾವಣಗೆರೆ

# ಸಮಸ್ಯೆಯ ಆಗರ ಹರಿಹರ ಬಸ್ ನಿಲ್ದಾಣ



ಹರಿಹರ, ಜು. 18 - ನಗರದ ಕೆ.ಎಸ್.ಆರ್.ಟಿ.ಸಿ. ನಿಲ್ದಾಣಕ್ಕೆ ಪ್ರತಿದಿನ 1,400ಕ್ಕೂ ಹೆಚ್ಚು ಬಸ್‌ಗಳು ಬರುತ್ತಿವೆ. ಆದರೆ, ನಿಲ್ದಾಣ ಚಿಕ್ಕದಾಗಿರುವ ಕಾರಣ ಪ್ರಯಾಣಿಕರು ಹರ ಸಾಹಸ ಪಡುವಂತಾಗಿದೆ.

ರಾಜ್ಯದ ನಾಲ್ಕು ಭಾಗದ ರಸ್ತೆಗಳು ನಗರವನ್ನು ಸಂಪರ್ಕಿಸುತ್ತವೆ. ಐತಿಹಾಸಿಕ ಸ್ಥಳ ಶ್ರೀ ಹರಿಹರೇಶ್ವರ ದೇವಾಲಯ , ರಾಘವೇಂದ್ರ ಸ್ವಾಮಿ ಮಠ, ಅಯ್ಯಪ್ಪ ಸ್ವಾಮಿ ಮಠ, ರಾಜ್ಯದ ಪ್ರತಿಷ್ಠಿತ ಸಮಾಜದ ಮಠಗಳಾದ ಪಂಚಮಸಾಲಿ ಮಠ, ವಾಲ್ಮೀಕಿ ಮಠ, ಕನಕ ಮಠ, ವೇಮನಾನಂದ ಮಠ, ನಂದಿಗುಡಿ ಮಠ, ಉಕ್ಕಡಗಾತ್ರಿ ಮಠ ಸೇರಿದಂತೆ ಹಲವಾರು ಪ್ರಮುಖ ಮಠಗಳು ತಾಲ್ಲೂಕಿನಲ್ಲಿವೆ. ಹೀಗಾಗಿ ಬಸ್ ನಿಲ್ದಾಣ 24 ಗಂಟೆಯೂ ಜನಸಂದಣಿಯಿಂದ ಕೂಡಿರುತ್ತದೆ.

ನಿಲ್ದಾಣದಲ್ಲಿ ಸೌಲಭ್ಯಗಳ ಕೊರತೆ ಇದೆ. ಕೆಲವೇ ಆಸನಗಳಿವೆ. ಶೌಚಾಲಯ ಹಳೆಯದಾಗಿದೆ. ಬೈಕ್ ಹಾಗೂ ಆಟೋ ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಬಸ್ ಸಂಚರಿಸುವ ರಸ್ತೆ ಕಿರಿದಾಗಿದೆ. ಕ್ಯಾಂಟೀನ್ ಇದ್ದೂ ಇಲ್ಲದ ಸ್ಥಿತಿ ಇದೆ. ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲ. ಸಿಬ್ಬಂದಿಗೆ ಕೊಠಡಿ ಇಲ್ಲ. ಹೈಮಾಸ್ಟ್ ದೀಪ ಕೆಟ್ಟಿದ್ದು ರಾತ್ರಿ ಕತ್ತಲು ಆವರಿಸುತ್ತದೆ. ಮಳೆ ಬಂದಾಗ ನಿಲ್ದಾಣದಲ್ಲಿ ನೀರು ಆವರಿಸುತ್ತದೆ. ಹೀಗೆ ಪಟ್ಟಿಯನ್ನು ಮಾಡುತ್ತಾ ಹೋದರೆ ಸಮಸ್ಯೆಗಳ ಸರಮಾಲೆಯೇ ಉದ್ಭವ ಆಗುತ್ತದೆ.

ಮಹಿಳಾ ಉಚಿತ ಪ್ರಯಾಣ ಯೋಜನೆ ನಂತರವಂತೂ ಪ್ರಯಾಣಿಕರ ಸಂಖ್ಯೆ ಇನ್ನಷ್ಟು ಹೆಚ್ಚಾಗಿದೆ. ಶಾಲಾ - ಕಾಲೇಜುಗಳ ವಿದ್ಯಾರ್ಥಿಗಳು ಹೆಚ್ಚಾಗಿರುವ ಸಂದರ್ಭದಲ್ಲಿ ಸಮಸ್ಯೆ ಮತ್ತಷ್ಟು ಬಿಗಡಾಯಿಸುತ್ತದೆ.

ಹೊಸ ಬಸ್ ನಿಲ್ದಾಣ ಕಾಣುವ ನಿರೀಕ್ಷೆ ಸಾಕಷ್ಟು ವರ್ಷಗಳಿಂದ ಇದ್ದರೂ, ಅದು ಸಾಕಾರವಾಗಿಲ್ಲ. ಇನ್ನು ಮುಂದಿನ ದಿನಗಳಲ್ಲಾದರೂ ಸಮಸ್ಯೆ ಬಗೆಹರಿದು ಹೊಸ ನಿಲ್ದಾಣ ಬರಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.



## ಜಾತಿ ಗಣತಿಗೆ ವಿಪಕ್ಷಗಳ ಒತ್ತಾಯ

ಬೆಂಗಳೂರು, ಜು. 18 - ಕೇಂದ್ರ ಸರ್ಕಾರ ಜಾತಿ ಗಣತಿ ನಡೆಸಬೇಕೆಂದು ಬೆಂಗಳೂರಿನಲ್ಲಿ ಸಭೆ ನಡೆಸಿದ 26 ಪ್ರತಿಪಕ್ಷಗಳು ಒತ್ತಾಯಿಸಿವೆ. ಪಕ್ಷಗಳ ಸಭೆಯ ನಂತರ ಸಾಮೂಹಿಕ ಸಂಕಲ್ಪ ಎಂಬ ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ಈ ಒತ್ತಾಯ ಮಾಡಲಾಗಿದೆ.

# ಮುಂಗಾರು ಬೆಳೆಗಳ ತುರ್ತು ನಿರ್ವಹಣೆ ಪದ್ಧತಿಗಳು

**ಮೆಕ್ಕೆಜೋಳ**

➡ ಕೆಲವು ಭಾಗದಲ್ಲಿ ಉತ್ತಮ ಮಳೆಯಾಗಿ ಮೆಕ್ಕೆಜೋಳ ಬಿತ್ತನೆಯಾಗಿ 20 ದಿವಸದ ನಂತರ ಲದ್ದಿ ಉಳುವಿನ ಬಾಧೆ ಕಂಡು ಬಂದಲ್ಲಿ ಜೈವಿಕ ಪೀಡೆ ನಾಶಕವಾದ Metarhizium rileyi 10 ಗ್ರಾಂ/ಲೀಟರ್ ಮಿಶ್ರಣವನ್ನು ಸುಳಿ ಮತ್ತು ಎಲೆಗಳಿಗೆ ಮೇಲೆ ಸಿಂಪರಣೆ ಮಾಡಬಹುದು. ಇದು ಹೆಚ್ಚು ಪರಿಣಾಮಕಾರಿಯಾಗಿ ತುಂತುರು ಮಳೆ ಮತ್ತು ಮೋಡ ಮುಸುಕಿದ ವಾತಾವರಣವಿದ್ದಲ್ಲಿ ಲದ್ದಿ ಹುಳುವನ್ನು ಯಶಸ್ವಿಯಾಗಿ ನಿರ್ವಹಣೆ ಮಾಡುತ್ತದೆ.ನಂತರದಲ್ಲಿ Emmactin benzoate 0.4ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ, ಸುಳಿ ತುಂಬುವ ರೀತಿಯಲ್ಲಿ ಸಿಂಪರಣೆ ಮಾಡಬೇಕು.

ಮೆಕ್ಕೆಜೋಳದಲ್ಲಿ ಸಾಮಾನ್ಯವಾಗಿ ಬಿತ್ತನೆಯಾದ 20 ದಿವಸಗಳ ನಂತರ ಕಳೆ ನಿರ್ವಹಣೆಗಾಗಿ ಅಂತರ ಬೇಸಾಯವನ್ನು ಕೈಗೊಳ್ಳುವುದು ಸೂಕ್ತ. ಅಂತರ ಬೇಸಾಯ ಮಾಡುವುದರಿಂದ ಮೆಕ್ಕೆಜೋಳದ ಬುಡಕ್ಕೆ ಮಣ್ಣು ಬೀಳುವುದರ ಜೊತೆಗೆ ಉತ್ತಮವಾಗಿ ಬೇರು ಬಿಡಲು ಸಹಕಾರಿಯಾಗುತ್ತದೆ. ಬಿತ್ತನೆಯಾಗಿ ಮೂರು ದಿವಸಗಳ ಒಳಗೆ ಕಳೆನಾಶಕ ಬಳಸಿದರೆ ಕಳೆ ನಿರ್ವಹಣೆ ಉತ್ತಮವಾಗಿರುತ್ತದೆ. ಈ ಸಮಯದಲ್ಲಿ ಉದಯಪೂರ್ವ ಕಳೆ ನಾಶಕವಾದ Topramezone 33.6% SC ಪ್ರತಿ ಎಕರೆಗೆ 30 ಎಂಎಲ್ ಬಳಸಬೇಕು. ಕಳೆಯು ಎರಡು ಅಥವಾ ಮೂರು ಎಲೆಗಳಿದ್ದಾಗ ಸಿಂಪರಣೆ ಮಾಡಿದರೆ ಕಳೆ ನಿರ್ವಹಣೆಯಾಗುತ್ತದೆ.

**ಹತ್ತಿ**

➡ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಹತ್ತಿ ಬೆಳೆಯ ವಿಸ್ತರಣೆ ಕಡಿಮೆಯಾಗಿದೆ. ನೀರಾವರಿ ಇರುವ ರೈತ ಬಾಂಧವರು ಹತ್ತಿಯನ್ನು ಜೂನ್ ಮೊದಲ ವಾರದಲ್ಲಿ ಬಿತ್ತನೆ ಮಾಡಿರುವ ರೈತರ ಗಮನಕ್ಕೆ. ಸಾಮಾನ್ಯವಾಗಿ ಹತ್ತಿಯಲ್ಲಿ ಮೊಗ್ಗು ಅಥವಾ ಹೂ ಉದುರುತ್ತದೆ. ಇದಕ್ಕೆ ಪ್ರಮುಖ ಕಾರಣಗಳೇನೆಂದರೆ, ಅತಿಯಾದ ತೇವಾಂಶ ಅಥವಾ ತೇವಾಂಶದ ಕೊರತೆ, ಈ ಸಂದರ್ಭದಲ್ಲಿ Planofix 0.3ml ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪರಣೆ ಮಾಡಬೇಕು. ಲಘು ಪೋಷಕಾಂಶಗಳ ಮಿಶ್ರಣವನ್ನು 10 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪರಣೆ ಮಾಡುವುದರಿಂದ ಎಲೆ ಕೆಂಪಾಗುವುದನ್ನು ತಡೆಯಬಹುದು. ಬಿತ್ತನೆಯಾದ 70 ದಿನಗಳ ನಂತರ ಪೊಟಾಸಿಯಂ ನೈಟ್ರೇಟ್ ದಿವಸಗಳ (13:00:45) 10 ಗ್ರಾಂ ಒಂದು ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಿಂಪರಣೆ ಮಾಡುವುದರಿಂದ ಹತ್ತಿಕಾಯಿಗಳ ಗಾತ್ರ ಉತ್ತಮವಾಗಿ, ಸಾಮಾನ್ಯವಾಗಿ ರೈತರು ಹೇಳುವ ಪಿಕ್ಕ ಕಡಿಮೆಯಾಗುತ್ತದೆ. ಹತ್ತಿಯಲ್ಲಿ ರಸ ಹೀರುವ ಕೀಟಗಳು ಕಂಡು ಬಂದಲ್ಲಿ ಇಮ್ಮಿಡಾಕ್ಲೋಪಿಡ್ 30.5 ಗ್ರಾಂ, 0.3 ಮಿಲೀ ಪ್ರತಿ ಲೀಟರ್‌ನಂತೆ ಸಿಂಪರಣೆ ಮಾಡಬೇಕು. ಕಾಂಡ ಕೊರೆಯುವ ಉಳಿವಿನ ಬಾಧೆ ಕಂಡುಬಂದಲ್ಲಿ ಕ್ಲೋರೋಪೈರಿಫಾಸ್ 2 ಮಿಲೀ ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಿಂಪರಣೆ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಹತ್ತಿಯಲ್ಲಿ ಪ್ರಮುಖವಾಗಿ ಗುಲಾಬಿ ಕಾಯಿ ಕೊರಕದ ಬಾಧೆ ಕಂಡು ಬಂದಲ್ಲಿ Emmactin benzoate 0.40.profenefos 50%. EC 2.5 ಮಿಲೀ ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಿಂಪರಣೆ ಕೈಗೊಳ್ಳಬೇಕು.



- ಮಲ್ಲಿಕಾರ್ಜುನ ಬಿ. ಓ., ಬೇಸಾಯ ತಜ್ಞರು ಮತ್ತು
- ಡಾ. ದೇವರಾಜ ಟಿ.ಎನ್. ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು. ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ದಾವಣಗೆರೆ.

ಈ ಗುಲಾಬಿ ಕಾಯಿ ಕೊರಕದ ನಿರ್ವಹಣೆಗಾಗಿ ಪ್ರತಿ ಎಕರೆಗೆ ಐದರಿಂದ ಆರು ಮೋಹಕ ಬಲೆಗಳನ್ನು ಅಳವಡಿಸುವುದರಿಂದ ಈ ಹುಳುವಿನ ಸಂತಾನೋತ್ಪತ್ತಿಯನ್ನು ನಿಯಂತ್ರಿಸಬಹುದು.

**ಶೇಂಗಾ**

➡ ಶೇಂಗಾ ಬೆಳೆ ಬಿತ್ತನೆಯಾಗಿ 30 ದಿವಸಗಳಾದ ನಂತರ ಜಿಪ್ಸಂ ಇನ್ನೂರು ಕೆಜಿ ಪ್ರತಿ ಎಕರೆಗೆ ಬಳಸಬೇಕು. ಜಿಪ್ಸಂ ಬಳಸುವುದರಿಂದ ಶೇಂಗಾ ಕಾಯಿಯ ಗಾತ್ರ ಎಣ್ಣೆ ಅಂಶ ಹೆಚ್ಚು ಆಗುವುದರ ಜೊತೆಗೆ ಭೂಮಿ ಮೃದುವಾಗುತ್ತದೆ.

**ಸಿರಿಧಾನ್ಯಗಳು**

➡ ಜುಲೈ ಕೊನೆಯ ವಾರ ಮತ್ತು ಆಗಸ್ಟ್ ಮೊದಲನೇ ವಾರದಲ್ಲಿ ಸಿರಿ ಧಾನ್ಯಗಳನ್ನು ಬಿತ್ತನೆ ಮಾಡಲು ಅವಕಾಶವಿದೆ. ರಾಗಿ ಬೆಳೆಯಲ್ಲಿ ತಳಿಗಳಾದ ಜಿಪಿಯು-28, ಎಂಎಲ್ 365, ಕೆಎಂಆರ್-630, ಜಿಪಿಯು-66 ಮಧ್ಯಮ ಅವಧಿ ತಳಿಗಳಾಗಿದ್ದು ಜೈವಿಕ ಗೊಬ್ಬರಗಳೊಂದಿಗೆ (Azosprilluim, PSB) 200 ಗ್ರಾಂ ಪ್ರತಿ ಎಕರೆ ಬೀಜಕ್ಕೆ ಬಳಕೆ ಮಾಡಬೇಕು. ಪ್ರತಿ ಎಕರೆಗೆ 5 ಕೆಜಿ ಸುಧಾರಿತ ತಳಿಗಳನ್ನು ಬಿತ್ತನೆ ಮಾಡಬೇಕು, ನವಣೆಯ ಬೆಳೆಯಲ್ಲಿ ಅಧಿಕ ಇಳುವರಿ ಕೊಡುವ ತಳಿಗಳಾದ DI-HF1-09-3,HMT-100-1 ಪ್ರತಿ ಎಕರೆಗೆ 4 ಕೆ.ಜಿ ಸುಧಾರಿತ ಬಿತ್ತನೆ ಬೀಜವನ್ನು ಬಳಸಬೇಕು.

## ರಾಣೇಬೆನ್ನೂರು : ಹುಟ್ಟುಹಬ್ಬದ ಸವಿನೆನಪಿಗೆ ಪ್ರತಿಭಾ ಪುರಸ್ಕಾರ, ನಿಸ್ವಾರ್ಥಿಗಳಿಗೆ ಗೌರವ



ರಾಣೇಬೆನ್ನೂರು, ಜು.18- ತಮ್ಮ 46ನೇ ವರ್ಷದ ಹುಟ್ಟುಹಬ್ಬದ ನೆನಪಿಗೆ ಪ್ರಸಕ್ತ ಸಾಲಿನ ಎಸ್.ಎಸ್ ಎಲ್.ಸಿ ಪರೀಕ್ಷೆಯಲ್ಲಿ ಶೇಕಡ 90ರಷ್ಟು ಅಂಕ ಪಡೆದ ವಿದ್ಯಾರ್ಥಿಗಳು, ಸಾರ್ವಜನಿಕ ಸೇವಾ ಸಂಘ-ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ನೌಕರರನ್ನು ಗುರುತಿಸಿ ಗೌರವಿಸಲಾಗುವುದು ಎಂದು ಎಪಿಎಂಸಿ ಮಾಜಿ ನಿರ್ದೇಶಕ ಪರಮೇಶ ಗೂಳಣ್ಣನವರ ತಿಳಿಸಿದ್ದಾರೆ. ಲಿಂಗನಾಯ್ಕನಹಳ್ಳಿ ಚನ್ನವೀರ ಶಿವಯೋಗಿ ಶ್ರೀಗಳು ಹಾಗೂ ಹುಕ್ಕೇರಿ ಮಠದ ಸದಾಶಿವ ಶ್ರೀಗಳ ಸಾನಿಧ್ಯದಲ್ಲಿ ಇಲ್ಲಿನ ಶ್ರೀ ಸಿದ್ದೇಶ್ವರ ಸಮುದಾಯ ಭವನದಲ್ಲಿ ನಡೆಯುವ ಕಾರ್ಯಕ್ರಮದ ಉದ್ಘಾಟನೆಯನ್ನು ಶಾಸಕ ಪ್ರಕಾಶ ಕೋಳಿವಾಡ ನೆರವೇರಿಸಲಿದ್ದು, ನಗರಸಭೆ ಸದಸ್ಯೆ ಹೊನ್ನವ್ವ ಕಾಟಿ, ಮಾಜಿ ಶಾಸಕ ಅರುಣಕುಮಾರ ಪೂಜಾರ, ಆರ್. ಶಂಕರ್, ವಿರುಪಾಕ್ಷಪ್ಪ ಬಳ್ಳಾರಿ, ಬಿಜೆಪಿ ಮುಖಂಡರಾದ ಕಾಂತೇಶ ಈಶ್ವರಪ್ಪ, ಕರಬಸಪ್ಪ ಮಾಕನೂರ, ರೂಪಾ ಬಾಕಳೆ ಮತ್ತಿತರರು ಭಾಗವಹಿಸುವರು, ಅಧ್ಯಕ್ಷತೆಯನ್ನು ಗೌರಮ್ಮ ಗೂಳಣ್ಣನವರ ವಹಿಸುವರು.

ಪ್ರವಾಸಿ ಮಂದಿರದಲ್ಲಿಂದು ನಡೆದ ಪತ್ರಿಕಾ ಗೋಷ್ಠಿಯಲ್ಲಿ ನಗರಸಭೆ ಸದಸ್ಯರಾದ ಶೇಖಪ್ಪ ಹೊಸಗೌಡ್ರ, ಮಲ್ಲಣ್ಣ ಅಂಗಡಿ, ನಾಗರಾಜ ಅಡ್ಮನಿ, ಪ್ರಾಧಿಕಾರದ ಮಾಜಿ ಅಧ್ಯಕ್ಷ ರಾಜು ಅಡಿವೆಪ್ಪನವರ, ಚೋಳಪ್ಪ ಕಸವಾಳ, ಸೋಮು ಗೌಡಶಿವಣ್ಣನವರ, ಸಿದ್ದು ಚಿಕ್ಕಬಿದರಿ, ಮಂಜುನಾಥ ದುಗ್ಗತ್ತಿ ಮತ್ತಿತರರಿದ್ದರು.

## ಬೈಕ್ ಕಳ್ಳತನದ ಆರೋಪಿತನ ಬಂಧನ: 5 ಬೈಕ್ ಗಳು ವಶ



ದಾವಣಗೆರೆ, ಜು. 18- ಬೈಕ್ ಕಳ್ಳತನದ ಆರೋಪಿಯನ್ನು ಬಂಧಿಸಿರುವ ಪೊಲೀಸರು ಆತನಿಂದ 1.30 ಲಕ್ಷ ರೂ. ಮೌಲ್ಯದ ಐದು ಬೈಕುಗಳನ್ನು ವಶಪಡಿಸಿಕೊಂಡಿದ್ದಾರೆ.

ಶಾಹೀದ್ ಬಂಧಿತ ವ್ಯಕ್ತಿ. ಜುಲೈ 7ರಂದು ನಗರದ ರಾಮ ಮಂದಿರದ ಪಾರ್ಕ್ ಬಳಿ ಬೈಕ್ ಕಳ್ಳತನವಾಗಿರುವ ಕುರಿತು ಬಡಾವಣೆ ಠಾಣೆಯಲ್ಲಿ ದೂರು ದಾಖಲಾಗಿತ್ತು. ಈ ಹಿನ್ನೆಲೆಯಲ್ಲಿ ತನಿಖೆ ನಡೆಸಿದ ಪೊಲೀಸರು ಆರೋಪಿಯನ್ನು ಬಂಧಿಸಿದ್ದು, ಈತ ಬಡಾವಣೆ ಠಾಣಾ ವ್ಯಾಪ್ತಿಯಲ್ಲಿ ಐದು ಬೈಕುಗಳನ್ನು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಬಡಾವಣೆ ಪೊಲೀಸ್ ಠಾಣೆಯ ಪಿಎಸ್ಐ ಲತಾ ವಿ.ತಾಳೇಕರ್ ಸಿಬ್ಬಂದಿ ಗಳಾದ ಧನಂಜಯ, ರಾಜು, ಅರಸು, ವಿಶ್ವಕುಮಾರ, ಸಿದ್ದೇಶ್, ಅರುಣ ಕುಮಾರ್, ಸೈಯದ್ ಅಲಿ, ಹನುಮಂತಪ್ಪ, ಗೀತಾ ಹೆಚ್. ಇವರುಗಳು ಆರೋಪಿ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದು, ಎಸ್ಪಿ ಡಾ.ಅರುಣ್ ಕೆ ಇವರನ್ನು ಶ್ಲಾಘಿಸಿದ್ದಾರೆ.


**ಮೂರನೇ ವರ್ಷದ ಪುಣ್ಯಸ್ಮರಣೆ**



**ದಿ. ಎ.ಎಂ. ಅಜ್ಜಪ್ಪ**

ನಿಧನ: 19.07.2020

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು

ಸದಾ ನಿಮ್ಮ ಸ್ಮರಣೆಯಲ್ಲಿರುವ...

ಮಕ್ಕಳಾದ : ಅಂಕಿತ್ ಕುಮಾರ್, ಸಂಕೇತ್ ಹಾಗೂ ಕುಟುಂಬಸ್ಥರು.



## ಮಕ್ಕಳ ಸ್ನೇಹಿತ ಗ್ರಂಥಾಲಯ ಕುರಿತು ತರಬೇತಿ



ಹರಿಹರ

ಹರಿಹರ, ಜು. 18 - ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಹಾಗೂ ತಾಲ್ಲೂಕು ಪಂಚಾಯಿತಿ ಹರಿಹರ ಇವರ ಸಹಯೋಗದೊಂದಿಗೆ ತಾಲ್ಲೂಕು ಪಂಚಾಯಿತಿ ಸಾಮರ್ಥ್ಯ ಸೌಧದಲ್ಲಿ ಮೂರು ದಿನಗಳ ಮಕ್ಕಳ ಸ್ನೇಹಿ ಗ್ರಾಮೀಣ ಗ್ರಂಥಾಲಯ ಕುರಿತು ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರುಗಳಿಗೆ ಮುಖಾಮುಖಿ ತರಬೇತಿಯನ್ನು ಆಯೋಜನೆ ಮಾಡಲಾಗಿತ್ತು. ತರಬೇತಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ರವಿ ಎನ್., ಸಹಾಯಕ ನಿರ್ದೇಶಕಿ ವಿದ್ಯಾವತಿ ಎಲ್. ಸಿ. ಹಾಗೂ ವ್ಯವಸ್ಥಾಪಕಿ ಪೂಜಾ ಆರ್.ಜಿ. ಹಾಗೂ ತರಬೇತಿ ಸಂಯೋಜಕಿ ಶೋಭಾ ಹೆಚ್. ಕೆ. ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ



ಮಲೇಬೆನ್ನೂರು, ಜು. 18- ಇಲ್ಲಿನ ಶ್ರೀ ಬೀರಲಿಂಗೇಶ್ವರ ಹಿರಿಯ ಪ್ರಾಥಮಿಕ ಶಾಲೆಗೆ ಬೆಂಗಳೂರಿನ ಮಾರುತಿ ಮೆಡಿಕಲ್ ಮತ್ತು ಕರ್ನಾಟಕ ಅಗ್ರ ಔಷಧಿ ಮಳಿಗೆ ಇವರು ಉಚಿತವಾಗಿ ನೀಡಿದ ನೋಟ್ ಪುಸ್ತಕಗಳನ್ನು ವಿದ್ಯಾ ಸಂಸ್ಥೆಯ ಅಧ್ಯಕ್ಷ ಪಿ. ಬಸಪ್ಪ, ಗೌರವ ಅಧ್ಯಕ್ಷ ಪಿ. ರೇವಣಪ್ಪ, ಕಾರ್ಯದರ್ಶಿ ಬಿ. ಕರಿಯಪ್ಪ ವಿತರಿಸಿದರು.

ಶಾಲೆಯ ಮುಖ್ಯ ಶಿಕ್ಷಕ ಡಿ.ಕೆ. ಕರಿಬಸಪ್ಪ, ಶಿಕ್ಷಕರಾದ ಹಾಲಿವಾಣ ಭೀಮಪ್ಪ, ಕುಂಬಳೂರು ಭೀಮಪ್ಪ, ಕೊಮಾರನಹಳ್ಳಿ ಕರಿಬಸಯ್ಯ, ಬಸವನಗೌಡ, ಮಂಜವ್ವ ಛಲವಾದಿ ಈ ವೇಳೆ ಹಾಜರಿದ್ದರು.

## 'ತುಮ್ಹಾರೆ ಸಿವಾ ಔರ್ ಕೋಯಿ ನಹೀ' ಸಾಂಸ್ಕೃತಿಕ ಲೋಕದ ದಿಗ್ಗಜರ ಪ್ರಶಂಸೆ



ಸಾಣೇಹಳ್ಳಿ, ಜು. 18- ಇಲ್ಲಿನ ಶ್ರೀ ಪಂಡಿತಾರಾಧ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ಶ್ರೀ ಶಿವಕುಮಾರ ಕಲಾ ಸಂಘ ಆಯೋಜಿಸಿರುವ ದೇಶದ ಪ್ರಥಮ ವಚನ ಸಂಸ್ಕೃತಿ ಅಭಿಯಾನ 'ತುಮ್ಹಾರೆ ಸಿವಾ ಔರ್ ಕೋಯಿ ನಹೀ' ಬಸವಣ್ಣನವರ 44 ವಚನಗಳಿಗೆ ನೃತ್ಯರೂಪಕ- ಹಿಂದಿ ಮತ್ತು ಕನ್ನಡ ಅವತರಣಿಕೆ ಈಚೆಗೆ ಬೆಂಗಳೂರಿನಲ್ಲಿ ಉದ್ಘಾಟನೆಗೊಂಡು ಆಂಧ್ರಪ್ರದೇಶ, ತೆಲಂಗಾಣ, ಒಡಿಸ್ಸಾ ರಾಜ್ಯದ ಪ್ರಮುಖ ಸ್ಥಳಗಳಲ್ಲಿ ಯಶಸ್ವೀ ಪ್ರದರ್ಶನಗಳನ್ನು ನೀಡಿದೆ.

ಭುವನೇಶ್ವರ ಭಾರತೀಯ ವಿದ್ಯಾಭವನದಲ್ಲಿ ಮೊನ್ನೆ ನಡೆದ ಪ್ರದರ್ಶನ ಕುರಿತಂತೆ ಸಾಂಸ್ಕೃತಿಕ ಲೋಕದ ದಿಗ್ಗಜರು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ.

ಸ್ನೇಹಾ ಕಪ್ಪಣ್ಣ ನಿರ್ದೇಶನ, ಸಂಚಾಲಕ ಶ್ರೀನಿವಾಸ ಜಿ. ಕಪ್ಪಣ್ಣ ಹಾಗೂ ವೈ.ಡಿ. ಬದಾಮಿ ಪ್ರವಾಸ ವ್ಯವಸ್ಥಾಪಕರಾಗಿದ್ದಾರೆ.

ಈವರೆಗೂ ಒಟ್ಟು 3445 ಕಿ.ಮೀ. ಪ್ರಯಾಣ ಬೆಳೆಸಿರುವ 24 ಕಲಾವಿದೆಯರು ಮತ್ತು 6 ಜನ ತಂತ್ರಜ್ಞರ ತಂಡ ಶಿವಸಂಚಾರದ ಬಸ್ಸಿನಲ್ಲಿ 400 ಕಿ.ಮೀ. ದೂರದಲ್ಲಿರುವ ಪಶ್ಚಿಮ ಬಂಗಾಳದ ಖರಗ್ ಪುರದೆಡೆಗೆ ಪ್ರಯಾಣ ಬೆಳೆಸಿದೆ.

## ಆರ್. ಮಂಜುನಾಥ್ ಕಾಮತ್ ನಿಧನ



ದಾವಣಗೆರೆ ಚಂದ್ರೋದಯ ಮಿಲ್ ಹತ್ತಿರ, ಚೈತನ್ಯ ಟೆಕ್ನೋ ಸ್ಕೂಲ್ ಎದುರುಗಡೆ ನಿವಾಸಿ ಕಾಮತ್ ಹೋಟೆಲ್ ಮಂಜಣ್ಣ (73) ಅವರು ದಿನಾಂಕ 18.07.2023ರ ಮಂಗಳವಾರ ಸಂಜೆ 4.20ಕ್ಕೆ ನಿಧನರಾಗಿರುತ್ತಾರೆ. ನಾಲ್ವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.07.2023ರ ಬುಧವಾರ ಮಧ್ಯಾಹ್ನ 11ಕ್ಕೆ ಪಿಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

## ಶಾರದಮ್ಮ ನಿಧನ



ದಾವಣಗೆರೆ ಸಿಟಿ ಕೆ.ಟಿ.ಜೆ ನಗರ 1ನೇ ಮೇನ್, 15ನೇ ಕ್ರಾಸ್ ನಿವಾಸಿ ಶಾರದಮ್ಮ ಅವರು ದಿನಾಂಕ 18.07.2023ರ ಮಂಗಳವಾರ ಸಂಜೆ 7 ಕ್ಕೆ ನಿಧನರಾದರು. ನಾಲ್ವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.07.2023ರ ಬುಧವಾರ ಮಧ್ಯಾಹ್ನ 2.30ಕ್ಕೆ ಭಗತ್ ಸಿಂಗ್ ನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

# ಎನ್.ಡಿ.ಎ. ಜನರ ಆಶಯ, ಅಧಿಕಾರದ ಅನಿವಾರ್ಯತೆಯಲ್ಲ



ನವದೆಹಲಿ, ಜು. 18 - ದೇಶಕ್ಕೆ ಹಾಗೂ ದೇಶದ ಪ್ರಗತಿಗೆ ಎನ್.ಡಿ.ಎ. ಮೊದಲ ಆದ್ಯತೆ ನೀಡಿದೆ ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈತ್ರಿಕೂಟ ಶೇ.50ಕ್ಕೂ ಹೆಚ್ಚು ಮತ ಗಳಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎನ್.ಡಿ.ಎ. ಸಭೆಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್.ಡಿ.ಎ.) ಪ್ರಾಂತೀಯ ಪಕ್ಷಗಳ ಆಶಯವಾಗಿದೆ. ನೂತನ ಭಾರತ, ಅಭಿವೃದ್ಧಿ ಹೊಂದಿದ ದೇಶ ಹಾಗೂ ಜನರ ಆಶಯಗಳು ಇದರಲ್ಲಿವೆ ಎಂದಿದ್ದಾರೆ.

'ಇಂಡಿಯಾ' ಎಂಬ ಹೆಸರಿನ ಮೈತ್ರಿಕೂಟ ರಚಿಸಿಕೊಂಡಿರುವ ಪ್ರತಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡ ಪ್ರಧಾನಿ, ನಕಾರಾತ್ಮಕತೆಯ ಆಧಾರದ ಮೇಲೆ ರಚಿಸಿಕೊಳ್ಳುವ ಯಾವುದೇ ಮೈತ್ರಿಕೂಟ ಯಶಸ್ವಿಯಾಗುವುದಿಲ್ಲ ಎಂದರು.

ಜಾತಿವಾದ, ಪ್ರಾಂತೀಯತೆ ಹಾಗೂ ಭ್ರಷ್ಟಾಚಾರದ ಮೇಲೆ ರಚನೆಯಾಗುವ ಮೈತ್ರಿಕೂಟಗಳು ದೇಶಕ್ಕೆ ಹಾನಿ ತರುತ್ತವೆ ಎಂದು ಹೇಳಿದರು.

2014ಕ್ಕೆ ಮುಂಚೆ ಆಡಳಿತ ನಡೆಸಿದ ಮೈತ್ರಿಕೂಟ ದೇಶಕ್ಕೆ ಭ್ರಷ್ಟಾಚಾರ ಹಾಗೂ ಹಗರಣಗಳನ್ನು ನೀಡಿತು. ಆ ವೇಳೆ ನೀತಿಯ ನಿಷ್ಕ್ರಿಯತೆ ಉಂಟಾಗಿತ್ತು ಮತ್ತು ಹಲವಾರು ಅಧಿಕಾರ ಕೇಂದ್ರಗಳಿದ್ದವು ಎಂದು ಮೋದಿ ಹೇಳಿದರು.

ಆಡಳಿತದಲ್ಲಿ ಉಂಟಾಗಿದ್ದ ಕೆಡಕುಗಳಿಗೆ ಮೈತ್ರಿಕೂಟದ ಅನಿವಾರ್ಯತೆ ಕಾರಣ ಎಂದು ಸಮರ್ಥನೆ ನೀಡಲಾಯಿತು. ಆದರೆ, ಎನ್.ಡಿ.ಎ. ಅದಕ್ಕೆ ವಿರುದ್ಧವಾದ ಮೈತ್ರಿಕೂಟವಾಗಿದೆ. ಇದು ಅನಿವಾರ್ಯತೆಯದ್ದಲ್ಲ, ಈ ಮೈತ್ರಿಕೂಟ ಸಶಕ್ತ ಹಾಗೂ ಕೊಡುಗೆ ನೀಡುವಂಥದ್ದು ಎಂದು ಪ್ರಧಾನಿ ಹೇಳಿದರು.

ಅಧಿಕಾರಕ್ಕಾಗಿ ಎನ್.ಡಿ.ಎ. ರಚಿಸಿಲ್ಲ. ಯಾರದೋ ವಿರುದ್ಧ ರಚಿಸಿದ್ದೂ ಅಲ್ಲ. ದೇಶಕ್ಕೆ ಸ್ಥಿರ ಸರ್ಕಾರ ನೀಡಲು ಈ ಮೈತ್ರಿಕೂಟ ರಚನೆಯಾಗಿದೆ. ಸ್ಥಿರ ಸರ್ಕಾರದಿಂದ ದೇಶದ ದಿಕ್ಕು ಬದಲಾಗುತ್ತದೆ. ಅದನ್ನು ಅಟಲ್ ಬಿಹಾರಿ ವಾಜಪೇಯಿ ಅವರ ಆಡಳಿತ ಅವಧಿಯಲ್ಲಿ ನೋಡಿದ್ದೇವೆ ಮತ್ತು ಕಳೆದ 9 ವರ್ಷಗಳ ಅವಧಿಯಲ್ಲೂ ನೋಡಿದ್ದೇವೆ ಎಂದರು.

## ನಗರದಲ್ಲಿ ಇಂದು ಅಧ್ಯಾಪಕರು - ವಿದ್ಯಾರ್ಥಿಗಳೊಡನೆ ಸಂವಾದ

ಯಜಮಾನ್ ಮೋತಿ ಸೋಮಶೇಖರಪ್ಪ ಗೌರಮ್ಮ ಪ್ರೌಢಶಾಲೆಯಲ್ಲಿ ತುಂಬಾಕು ಮುಕ್ತ ಸಮಾಜ ನಿರ್ಮಾಣಕ್ಕಾಗಿ ಮುಂದಿನ ಪೀಳಿಗೆಗೆ ಆಧಾರ ಬೇಕು, ತಂಬಾಕು ಬೇಡ ವಿಷಯವಾಗಿ ವಿದ್ಯಾರ್ಥಿಗಳೊಂದಿಗೆ ಇಂದು ಬೆಳಿಗ್ಗೆ 10 ಗಂಟೆಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಅವರು ಸಂವಾದ ನಡೆಸಲಿದ್ದಾರೆ. ಶಾಲಾ ಮುಖ್ಯೋಪಾಧ್ಯಾಯ ಎಂ.ವಿ. ಮಹೇಶ್ವರಪ್ಪ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನಾಡುವರು. ಮುಖ್ಯ ಅತಿಥಿಗಳಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ. ರಾಘವನ್ ಉಪಸ್ಥಿತರಿರುವರು.

ಶ್ರೀ ಸಿದ್ಧಿವಿನಾಯಕ ಸಾಂಸ್ಕೃತಿಕ ಸಂಘದ ಕಾರ್ಯದರ್ಶಿ ಜಿ.ಕೆ. ಪಂಚಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

## ಚಂದ್ರಯಾನ ಕಕ್ಷೆ ಏರಿಕೆ ಕಸರತ್ತು ಯಶಸ್ಸು

ಬೆಂಗಳೂರು, ಜು. 18 - ಚಂದ್ರಯಾನ - 3ರ ಕಕ್ಷೆ ಏರಿಸುವ ಮೂರನೇ ಕಸರತ್ತು ಯಶಸ್ವಿಯಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ತಿಳಿಸಿದೆ. ನಾಳೆ ಗುರುವಾರ ಮಧ್ಯಾಹ್ನ 2ರಿಂದ 3 ಗಂಟೆಯ ನಡುವೆ ಮುಂದಿನ ಹಂತದ ಕಕ್ಷೆ ಏರಿಸುವ ಪ್ರಕ್ರಿಯೆ ನಡೆಯಲಿದೆ ಎಂದು ಇಸ್ರೋ ತಿಳಿಸಿದೆ. ಕಳೆದ ಜುಲೈ 14ರಂದು ಚಂದ್ರಯಾನ ಉಡಾವಣೆ ಮಾಡಲಾಗಿತ್ತು.

## ನಗರದಲ್ಲಿ ಇಂದು ಜಿಲ್ಲಾಮಟ್ಟದ ಕವಿಗೋಷ್ಠಿಗೆ ಕವನಗಳ ಆಹ್ವಾನ

ಭಾರತೀಯ ಸಾಹಿತ್ಯ ಪರಿಷತ್ ಜಿಲ್ಲಾ ಸಮಿತಿ ವತಿಯಿಂದ 'ತುಂಗಭದ್ರೆ' ವಿಷಯ ಕುರಿತು ಜಿಲ್ಲಾಮಟ್ಟದ ಕವಿಗೋಷ್ಠಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಕಿರಿಯ ಮತ್ತು ಹಿರಿಯ ವಿಭಾಗಗಳಲ್ಲಿ ಕವಿಗೋಷ್ಠಿ ನಡೆಯಲಿದ್ದು, ಸ್ವರಚಿತ ಕವನಗಳನ್ನು ಕಳಿಸಿಕೊಡಲು ಇದೇ ದಿನಾಂಕ 25 ಕೊನೆಯ ದಿನವಾಗಿದೆ.

ಕವನವು ಸ್ವರಚಿತವಾಗಿದ್ದು, ಇದುವರೆಗೂ ಎಲ್ಲಿಯೂ ಪ್ರಕಟವಾಗಿರಬಾರದು. ತುಂಗಭದ್ರೆ ಈ ವಿಷಯಕ್ಕೆ ಸಂಬಂಧಿಸಿದ್ದಾಗಿರಬೇಕು, ಉತ್ತಮ ಕವನಕ್ಕೆ ಬಹುಮಾನವಿರುತ್ತದೆ. ಕವಿಗೋಷ್ಠಿಯನ್ನು ಆಗಸ್ಟ್‌ನಲ್ಲಿ ನಡೆಸಲಾಗುವ ಬಗ್ಗೆ ಕವನ ಕಳಿಸಿದವರಿಗೆ ಮಾಹಿತಿ ನೀಡಲಾಗುವುದು. ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕಿನವರು ಪಂಚಾಕ್ಷರಯ್ಯ ಮೊ:9916646805, ಹರಿಹರ ಸುನೀಲ್ ಮೊ: 9060311822, ದಾವಣಗೆರೆ ವೀಣಾ ಕೃಷ್ಣಮೂರ್ತಿ ಮೊ: 9483481491, ಚನ್ನಗಿರಿ ಪ್ರಶಾಂತ್ ಕೋಲ್ಕುಂಟೆ ಮೊ:9742547792 ಜಗಳೂರು ಅಮರೇಶ್ ಮೊ:96630 59636 ಗೆ ಕವನಗಳನ್ನುಕಳುಹಿಸಿಕೊಡುವಂತೆ ತಿಳಿಸಲಾಗಿದೆ.

## ಲೈಂಗಿಕ ಕಿರುಕುಳ ನೀಡಿದ್ದ ಆರೋಪಿಗೆ 5 ವರ್ಷ ಕಠಿಣ ಶಿಕ್ಷೆ

ದಾವಣಗೆರೆ, ಜು. 18- 8 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದ ನಂದಿತಾವರೆ ಗ್ರಾಮದ ಆರೋಪಿ ನಾಗರಾಜ ಕೆ.ಎನ್. ಎಂಬಾತನಿಗೆ ಐದು ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ ನ್ಯಾಯಾಲಯ ಆದೇಶಿಸಿದೆ.

2021ರ ಸೆಪ್ಟೆಂಬರ್ 19ರಂದು ಮಧ್ಯಾಹ್ನದ ವೇಳೆ ನಂದಿತಾವರೆ ಗ್ರಾಮದಲ್ಲಿ ನಾಗರಾಜ ಸಂತ್ರಸ್ಥೆಗೆ ಲೈಂಗಿಕ ಕಿರುಕುಳ ನೀಡಿದ್ದೇನೆಂದು ಆರೋಪಿಸಲಾಗಿತ್ತು. ಈ ಬಗ್ಗೆ ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಕರಣದ ವಿಚಾರಣೆ ನಡೆಸಿದ ದಾವಣಗೆರೆ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಎಫ್.ಟಿ.ಎಸ್.ಸಿ.-1 ನ್ಯಾಯಾಲಯದ ನ್ಯಾಯಧೀಶರಾದ ಶ್ರೀಪಾದ ಎನ್. ಅವರು ಆರೋಪಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಸಂತ್ರಸ್ಥೆಗೆ 2 ಲಕ್ಷ ರೂ. ಪರಿಹಾರ ಧನವನ್ನು ಸರ್ಕಾರದಿಂದ ನೀಡುವಂತೆ ಆದೇಶಿಸಿದ್ದಾರೆ.

ಮಲೇಬೆನ್ನೂರು ಪೊಲೀಸ್ ಠಾಣೆಯ ಪಿಎಸ್ಐ ರವಿಕುಮಾರ್ ಡಿ. ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರ ಸಲ್ಲಿಸಿದ್ದರು. ಸರ್ಕಾರದ ಪರ ಸುನಂದ, ಈಶ್ವರಪ್ಪ ಮಡಿವಾಳರ ವಾದ ಮಂಡಿಸಿದ್ದರು.

## ಓದೋ ಗಂಗಪ್ಪ ಜನ್ಮದಿನಾಚರಣೆ

ಹೂವಿನಹಡಗಲಿ, ಜು. 18- ಬಿಜೆಪಿ ಮುಖಂಡ, ನಿವೃತ್ತ ಇಂಜಿನಿಯರ್ ಓದೋ ಗಂಗಪ್ಪನವರ ಹುಟ್ಟಹಬ್ಬವನ್ನು ಆಚರಿಸಲು ಅಭಿಮಾನಿಗಳು ಸಿದ್ಧತೆಯಲ್ಲಿ ತೊಡಗಿದ್ದಾರೆ ಎಂದು ಕೆ. ಶಂಕ್ರಪ್ಪ ತಿಳಿಸಿದ್ದಾರೆ.

ಬರುವ ಆಗಸ್ಟ್ 1 ರಂದು ಹಮ್ಮಿಕೊಂಡಿರುವ ಗಂಗಪ್ಪನವರ 67ನೇ ಹುಟ್ಟುಹಬ್ಬದ ಪ್ರಯುಕ್ತ 67 ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್, 67 ಸಸಿಗಳ ವಿತರಣೆ, ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ವಿತರಣೆ ಮಾಡಲಾಗುವುದು.

ದ್ರಾಕ್ಷಾಯಿಣಿ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿರುವ ಈ ಸಮಾರಂಭದಲ್ಲಿ ಶಾಸಕ ಕೃಷ್ಣ ನಾಯಕ್ ಹಾಗೂ ಸ್ಥಳೀಯ ಗವಿ ಮಠದ ಡಾ. ಹಿರಿ ಶಾಂತವೀರ ಸ್ವಾಮಿ, ಮಲ್ಲನಕೇರಿ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಮೊದಲಾದವರು ಪಾಲ್ಗೊಳ್ಳಲಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಎಸ್‌ಸಿಪಿ-ಟಿಎಸ್‌ಪಿ ಅನುದಾನ ಸಮರ್ಪಕ ಬಳಕೆಯಾಗಲಿ: ಡಿಸಿ



ದಾವಣಗೆರೆ, ಜು. 18 - ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ಪ್ರತಿ ಇಲಾಖಾವಾರು ವಿವಿಧ ಯೋಜನೆಗಳಡಿ ಬಿಡುಗಡೆಯಾಗುವ ಅನುದಾನವನ್ನು ಶೇ. 100 ರಷ್ಟು ಸಮರ್ಪಕವಾಗಿ ಸದ್ಬಳಕೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದರು.

ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜರುಗಿದ ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆ - ಪರಿಶಿಷ್ಟ ಪಂಗಡದ ಗಿರಿಜನ ಉಪಯೋಜ ನೆಯಡಿ ಅನುಷ್ಠಾನಗೊಳಿಸುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪರಿಶಿಷ್ಟರ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಯು ಶೇ.40 ಕ್ಕಿಂತ ಹೆಚ್ಚು ಇರುವ ಗ್ರಾಮಗಳ ಕಾಲೋನಿಗಳಲ್ಲಿ ವ್ಯವಸ್ಥಿತ ರಸ್ತೆ ನಿರ್ಮಾಣ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಗ್ರಾಮಾಂತರ ಕೈಗಾರಿಕಾ ಕೇಂದ್ರಗಳಿಂದ ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿನ ನಿರುದ್ಯೋಗಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಉತ್ತಮ ಗುಣಮಟ್ಟದ ವಿದ್ಯುತ್ ಚಾಲಿತ ಹೊಲಿಗೆ ಯಂತ್ರಗಳನ್ನು ನೀಡಬೇಕು ಎಂದವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣನಾಯ್ಕ್, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಕೆ. ನಾಗರಾಜ್, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ವಾಸಂತಿ ಉಪ್ಪಾರ್, ಡಿ.ಡಿ.ಪಿ.ಐ ತಿಪ್ಪೇಶಪ್ಪ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ ಮತ್ತಿತರರು ಉಪಸ್ಥಿತರಿದ್ದರು.

# ಐಎಎಸ್ ಅಧಿಕಾರಿಗಳಿಂದ ರಾಜಕಾರಣಿಗಳಿಗೆ ಆತಿಥ್ಯ



**ಐಎಎಸ್ ಜೀತ ಪದ್ಧತಿ ಎಂದು ಕುಮಾರಸ್ವಾಮಿ ತರಾಟೆ**

ಬೆಂಗಳೂರು, ಜು.18- ಘಟಬಂಧನ್ ಸಭೆಗೆ ಆಗಮಿಸಿರುವ ಹೊರರಾಜ್ಯದ ರಾಜಕೀಯ ನಾಯಕರ ಆತಿಥ್ಯಕ್ಕೆ ಐಎಎಸ್ ನಿಯೋಜನೆ ಮಾಡಿರುವ ರಾಜ್ಯ ಸರ್ಕಾರ ಹಾಗೂ ಆಡಳಿತ ಪಕ್ಷ ಕಾಂಗ್ರೆಸ್ ವಿರುದ್ಧ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತೀವ್ರ ಟೀಕಾಪ್ರಹಾರ ನಡೆಸಿದ್ದಾರೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಅವರು, ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಐಎಎಸ್ ಜೀತ ಪದ್ಧತಿಯನ್ನು ಜಾರಿಗೆ ತಂದು ಕರ್ನಾಟಕದ ಹೆಮ್ಮೆ, ಪರಂಪರೆಗೆ ಘಟಶ್ರಾದ್ಧ ಮಾಡಿದೆ ಎಂದು ಕಿಡಿಕಾರಿದೆ.

ಅಧಿಕಾರ ಬಂಧನಕ್ಕಾಗಿ ಘಟಬಂಧನಕ್ಕೆ ಒಳಗಾದ ಕಾಂಗ್ರೆಸ್ ಪಕ್ಷವು ಕರ್ನಾಟಕದ ಹೆಮ್ಮೆ, ಪರಂಪರೆ,ಸ್ವಾಭಿಮಾನಕ್ಕೆ ಘಟಶ್ರಾದ್ಧ ಮಾಡಿದೆ.

ಘಟಬಂಧನಕ್ಕೆ ಬಂದ ಹೊರರಾಜ್ಯದ ರಾಜಕಾರಣಿಗಳ ಸೇವೆಗೆ ರಾಜ್ಯದ ಹೆಮ್ಮೆಯ ಐಎಎಸ್ ಅಧಿಕಾರಿಗಳನ್ನು ಕಳಿಸಿದ ಕಾಂಗ್ರೆಸ್ ಸರ್ಕಾರದ ನಡೆ ತಪ್ಪು. ನುಡಿದಂತೆ ನಡೆಯುವುದು ಎಂದರೆ ಇದೇನಾ? ಎಂದು ಅವರು ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ.

ಇದು ರಾಜ್ಯ ಸರ್ಕಾರಿ ಕಾರ್ಯಕ್ರಮ ಅಲ್ಲ, ಹೊಸ ಸರ್ಕಾರದ ಪ್ರಮಾಣ ಸ್ವೀಕಾರವೂ ಅಲ್ಲ. ಕೇವಲ ರಾಜಕೀಯ ಸಭೆಯಷ್ಟೇ. ಇಂಥ ಸಭೆಗೆ ಬಂದ ರಾಜಕೀಯ ನಾಯಕರಿಗೆ ಆತಿಥ್ಯ ನೀಡಲು ಜವಾಬ್ದಾರಿಯುತ ಅಧಿಕಾರಿಗಳನ್ನು ಕಳಿಸಿದ್ದು ಆರೂವರೆ ಕೋಟಿ ಕನ್ನಡಿಗರಿಗೆ ಎಸಗಿದ ಘೋರ ಅಪಚಾರ ಹಾಗೂ ರಾಜ್ಯದ ಪಾಲಿಗೆ ಮಹಾ ದುರಂತ ಎಂದು ಮಾಜಿ ಮುಖ್ಯಮಂತ್ರಿ ಅವರು ಹೇಳಿದ್ದಾರೆ.

ಯಾವುದೇ ಒಂದು ರಾಜ್ಯದ ಅಭಿವೃದ್ಧಿ, ಆಡಳಿತ, ಮುನ್ನಡೆಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ಐಎಎಸ್ ಅಧಿಕಾರಿಗಳು ಕೇವಲ ಅಧಿಕಾರಿಗಳಷ್ಟೇ ಅಲ್ಲ; ಆಯಾ ರಾಜ್ಯಗಳ ಕ್ಷಮತೆ, ದಕ್ಷತೆಯ ಪ್ರತೀಕ.

ಅಂಥವರನ್ನು ಇನ್ನೊಬ್ಬರ ಆಜ್ಞಾಪಾಲಕರನ್ನಾಗಿ ಮಾಡಿ, ಬಾಗಿಲು ಕಾಯುವ ಕೆಲಸ ಹಚ್ಚಿದ್ದು ಆಡಳಿತ ಪಕ್ಷದ ಅಹಂಕಾರದ ಪರಮಾವಧಿ ಎಂದು ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇದು ನಿಶ್ಚಿತವಾಗಿಯೂ ಐಎಎಸ್ ಸೇವಾ ನೀತಿ ಸಂಹಿತೆಯ ಉಲ್ಲಂಘನೆ. ಇದು ತಮ್ಮ ಸ್ವಾಭಿಮಾನ, ಗೌರವಕ್ಕೆ ಧಕ್ಕೆ ತರುವಂತಹದ್ದು ಎಂದು ಗೊತ್ತಿದ್ದರೂ ಅಧಿಕಾರಿಗಳು ಈ ಕೆಲಸಕ್ಕೆ ಒಪ್ಪಿದ್ದು ನನಗೆ ಅತೀವ ಅಚ್ಚರಿ, ಆಘಾತ ಉಂಟು ಮಾಡಿದೆ. ಇಂಥ ವಿವಾದಾಸ್ಪದ ಆದೇಶ ಹೊರಡಿಸಿದ ಮುಖ್ಯ ಕಾರ್ಯದರ್ಶಿಗಳು ಜನತೆಗೆ ಉತ್ತರ ಕೊಡಲೇಬೇಕಿದೆ ಎಂದು ಅವರು ಒತ್ತಾಯ ಮಾಡಿದ್ದಾರೆ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ನಂಬಿಕೆ ಹೊಂದಿರುವ ಕಾಂಗ್ರೆಸ್ ಪಕ್ಷ, ರಾಜ್ಯದಲ್ಲಿ 'ಐಎಎಸ್ ಜೀತ ಪದ್ಧತಿ'ಯನ್ನು ಜಾರಿಗೆ ತರುವ ಮೂಲಕ ಹೊಸ ನಮೂನೆಯ 'ರಾಜಕೀಯ, ಆಡಳಿತ ವಸಾಹತುಶಾಹಿ'ಯನ್ನು ದೇಶಕ್ಕೆ ಪರಿಚಯ ಮಾಡಿದೆ.

135 ಸೀಟು ಕೊಟ್ಟ ತಪ್ಪಿಗೆ ಕನ್ನಡಿಗರಿಗೆ ವಿಪರೀತ ದರ್ಪ ತೋರಿದೆ ಕಾಂಗ್ರೆಸ್. ಸತ್ಯಯುಗದಲ್ಲಿ ಹಿರಣ್ಯಕಶ್ಯಪು ಅಷ್ಟ ದಿಕ್ಪಾಲಕರನ್ನು ಸೆರೆಹಿಡಿದು ಮೆಟ್ಟಿಲು ಮಾಡಿಕೊಂಡ ಪಾಪಕ್ಕೆ ಸರ್ವನಾಶವಾದ. ಕಾಂಗ್ರೆಸ್ ಕೂಡ 30 ಐಎಎಸ್ ಅಧಿಕಾರಿಗಳನ್ನು ರಾಜಕಾರಣಿಗಳ ದ್ವಾರಪಾಲಕರನ್ನಾಗಿ ಮಾಡುವ ಮೂಲಕ ತನ್ನ ನಾಶಕ್ಕೆ ತಾನೇ ನಾಂದಿ ಹಾಡಿದೆ ಎಂದು ಅವರು ಹೇಳಿದ್ದಾರೆ.

# ಕನ್ನಡ ಪ್ರವೇಶ, ಕನ್ನಡ ಕಾವ, ಕನ್ನಡ ಜಾಣ, ಕನ್ನಡ ರತ್ನ ಪರೀಕ್ಷೆಗಳಿಗೆ ಅರ್ಜಿ ಆಹ್ವಾನ

ದಾವಣಗೆರೆ, ಜು.18- ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಪ್ರವೇಶ, ಕನ್ನಡ ಕಾವ, ಕನ್ನಡ ಜಾಣ, ಕನ್ನಡ ರತ್ನ ಪರೀಕ್ಷೆಗಳಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಪರೀಕ್ಷೆಗಳ ನಿಯಮಾವಳಿ ಪಠ್ಯಪುಸ್ತಕಗಳ ವಿವರ ಮತ್ತು ಅರ್ಜಿ ಇವುಗಳ ಕುರಿತು ಇಲಾಖೆಯ ವೆಬ್‌ಸೈಟ್‌ನಲ್ಲಿ ನಿಯಮಾವಳಿಗಳನ್ನು ತಿಳಿಸಲಾಗಿದೆ. ಪರೀಕ್ಷೆಯನ್ನು ಬರೆಯಲಿಚ್ಚಿಸುವವರು 31 ಆಗಸ್ಟ್ 2023 ರ ಒಳಗಾಗಿ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ಶಾಲಾ- ಕಾಲೇಜುಗಳಲ್ಲಿ ಕನ್ನಡವನ್ನು ಪ್ರಥಮ ಭಾಷೆಯಾಗಿ ಅಭ್ಯಾಸ ಮಾಡದೇ ಇರುವ ವಿದ್ಯಾರ್ಥಿಗಳು, ಮುಂದಿನ ದಿನಗಳಲ್ಲಿ ವಿದ್ಯಾಭ್ಯಾಸಕ್ಕಾಗಿ ಹಾಗೂ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸುವಾಗ ಪ್ರತ್ಯೇಕವಾಗಿ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯನ್ನು ಬರೆಯಬೇಕಾಗುತ್ತದೆ. ಆದಕಾರಣ ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಪ್ರಮಾಣ ಪತ್ರವನ್ನು ಪಡೆದವರು, ಮುಂದಿನ ದಿನಗಳಲ್ಲಿ ಅರ್ಜಿ ಸಲ್ಲಿಸುವಾಗ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಪಡೆಯುತ್ತಾರೆ.

ವಿಶೇಷವಾಗಿ ಸಿಬಿಎಸ್‌ಇ ಐಸಿಎಸ್‌ಇ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು, ಕನ್ನಡ ಭಾಷೆಯನ್ನು ಪ್ರಥಮ ಭಾಷೆಯಾಗಿ ಓದದೇ ಇರುವ ವಿದ್ಯಾರ್ಥಿಗಳಿಗೆ ಈ ಪರೀಕ್ಷೆಯು ಕಡ್ಡಾಯವಾಗಿರುತ್ತದೆ ಮತ್ತು ಸರ್ಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸುವವರು ಇಲಾಖೆಯಲ್ಲಿ ತಮ್ಮ ವೃತ್ತಿ ಪದೋನ್ನತಿಗಾಗಿ ಈ ಪರೀಕ್ಷೆ ಕಡ್ಡಾಯವಾಗಿರುತ್ತದೆ. ಆದಕಾರಣ ಪರೀಕ್ಷೆಯನ್ನು ಬರೆಯಲು ಇಚ್ಛಿಸುವ ಉದ್ಯೋಗಸ್ಥರು, ವಿದಾರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಲು ತಿಳಿಸಿದೆ.

ಜಿಲ್ಲೆಯಲ್ಲಿ ಶ್ರೀ ತರಳಬಾಳು ಜಗದ್ಗುರು ಸಂಯುಕ್ತ ಪದವಿ ಪೂರ್ವ ಕಾಲೇಜು, ಅನುಭವ ಮಂಟಪ, ಪರೀಕ್ಷಾ ಕೇಂದ್ರವಾಗಿರುತ್ತದೆ. ಕಳೆದ ಎರಡು ವರ್ಷಗಳಿಂದ ಈ ಪರೀಕ್ಷಾ ಕೇಂದ್ರದಲ್ಲಿಯೇ ಕನ್ನಡ ಸಾಹಿತ್ಯ ಪರಿಷತ್ತಿನ ನಿಯಮಾನುಸಾರವಾಗಿ ಪರೀಕ್ಷೆಗಳು ಡಿಸೆಂಬರ್ ತಿಂಗಳ ಅಂತ್ಯದಲ್ಲಿ ನಡೆಯುತ್ತವೆ.

ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಕನ್ನಡ ಉಪನ್ಯಾಸಕ ಆನಂದ ಬಿ. (99866 56060) ಅವರನ್ನು ಸಂಪರ್ಕಿಸುವಂತೆ ಪ್ರಾಚಾರ್ಯ ಡಾ.ಹೆಚ್. ಎನ್.ಪ್ರದೀಪ್ ತಿಳಿಸಿದ್ದಾರೆ.

## ಎಪಿಎಂಸಿ ತಿದ್ದುಪಡಿ ಕಾಯ್ದೆ ವಾಪಸ್‌ಗೆ ಹಿನ್ನಡೆ

(1ನೇ ಪುಟದಿಂದ) ವಿರೋಧಿಸಿತು. ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಜತೆಗೂಡಿ ವಿಧೇಯಕಕ್ಕೆ ಅನುಮೋದನೆ ಪಡೆಯುವುದನ್ನು ತಡೆಯುವಲ್ಲಿ ಯಶಸ್ವಿಯಾದರು. ಕೊನೆಗೆ ಸಭಾಪತಿ ಬಸವರಾಜ ಹೊರಟ್ಟಿ ಅವರು ಮಸೂದೆಯನ್ನು ಸಮಿತಿಗೆ ವಹಿಸುವ ನಿಲುವಳಿಯನ್ನು ಮತಕ್ಕೆ ಹಾಕಿದರು.

ವಿಧೇಯಕವನ್ನು ಸದನ ಪರಿಶೀಲನಾ ಸಮಿತಿಗೆ ವಹಿಸುವುದರ ಪರವಾಗಿ 31 ಮತಗಳು ಚಲಾವಣೆಯಾದರೆ, ವಿರೋಧಿಸಿ 21 ಮತಗಳು ಚಲಾವಣೆಗೊಂಡವು. ಬಳಿಕ ಸಭಾಪತಿ ಅವರು ವಿಧೇಯಕವನ್ನು ಸದನದ ಪರಿಶೀಲನಾ ಸಮಿತಿಗೆ ಒಪ್ಪಿಸಿದರು.

# 'ಆರ್ಟಿಫಿಷಿಯಲ್ ಇಂಟೆಲಿಜೆನ್ಸ್' ತಂತ್ರಜ್ಞಾನದ ಮಹತ್ವ ಹೆಚ್ಚಲಿದೆ

## ಜಿಎಂಐಟಿ 'ಎಐ ಇನ್ ಐಓಟಿ' ತರಬೇತಿ ಕಾರ್ಯಕ್ರಮದಲ್ಲಿ ನಿಕ್ಕಿ ಬಿಲ್ಡ್ ಸಿಇಓ ಅರುಣ್



ದಾವಣಗೆರೆ,ಜು.18- ಇಂದಿನ ಆಧುನಿಕ ಯುಗದಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಐಓಟಿ ತಂತ್ರಜ್ಞಾನವು ಹೆಚ್ಚು ಬಳಕೆಯಲ್ಲಿ ಬರಲಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಾಮುಖ್ಯತೆ ಪಡೆಯಲಿದೆ ಎಂದು ಬೆಂಗಳೂರಿನ ನಿಕ್ಕಿ ಬಿಲ್ಡ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸಿಇಓ ಅರುಣ್ ಅಭಿಪ್ರಾಯಿಸಿದರು.

ಜಿ.ಎಂ ತಾಂತ್ರಿಕ ಮಹಾವಿದ್ಯಾಲಯದ ಇನ್ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದಲ್ಲಿ ನಿನ್ನೆ ಹಮ್ಮಿಕೊಳ್ಳಲಾಗಿದ್ದ 'ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಇನ್ ಐಓಟಿ' ಕುರಿತ ಒಂದು ದಿನದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿದ ಅವರು, ಆರ್ಟಿಫಿಷಿಯಲ್ ಇಂಟೆ ಲಿಜೆನ್ಸ್ ವಿಷಯದ ಮಹತ್ವ ಹಾಗು ಅದರ ವಿಶೇಷ ತೆಯನ್ನು ವಿದ್ಯಾರ್ಥಿಗಳಿಗೆ ವಿವರವಾಗಿ ತಿಳಿಸಿದರು.

ಇನ್ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಬಿ.ಎಸ್. ಸುನೀಲ್ ಕುಮಾರ್ ಮಾತನಾಡಿ, 'ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಇನ್ ಐಓಟಿ'ನ ವಿಶೇಷತೆಗಳು ಮತ್ತು ಅದರ ಪ್ರಾಮುಖ್ಯತೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿದರು. ಈ ತರಬೇತಿ ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳಲು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಬಿ. ಸಂಜಯ್ ಪಾಂಡೆ ಮಾತನಾಡಿ, ಇಂಜಿನಿ ಯರಿಂಗ್ ವಿದ್ಯಾರ್ಥಿಗಳು ಕೇವಲ ಹೆಚ್ಚು ಅಂಕಗಳನ್ನು ಪಡೆದು ಪಾಸಾದರೆ ಸಾಲದು, ಅದರ ಜೊತೆಗೆ ಇಂದಿನ ಆಧುನಿಕ ತಂತ್ರಜ್ಞಾನ ಮತ್ತು ವಿಷಯಗಳ ಜ್ಞಾನವು ಅತ್ಯಗತ್ಯ, ವಿದ್ಯಾರ್ಥಿಗಳಿಗೆ ಒಳ್ಳೆಯ ಹುದ್ದೆಯನ್ನು ಪಡೆಯಲು ಇಂತಹ ವಿಷಯಗಳ ಜ್ಞಾನವು ಬಹಳ ಮುಖ್ಯವಾದ ಪಾತ್ರ ವಹಿಸಲಿದೆ ಎಂದು ತಿಳಿಸಿದರು.

ನಿರ್ವಹಣಾ ಪ್ರತಿನಿಧಿಗಳಾದ ವೈ. ಯು. ಸುಭಾಶ್ ಚಂದ್ರ, ಕಾರ್ಯಕ್ರಮದ ಸಂಯೋಜಕರಾದ ಪ್ರೊ. ಫೈರೋಜ್ ಖಾನ್, ಪ್ರೊ. ಮಂಜುನಾಥ ಕೆ.ಜಿ ಹಾಗು ಐಎಸ್‌ಇ ವಿಭಾಗದ ಎಲ್ಲಾ ಪ್ರಾಧ್ಯಾಪಕರು ಹಾಗು 4ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ವೇ ಸುರಕ್ಷತಾ ಪರಿಶೀಲನೆ

ನವದೆಹಲಿ, ಜು. 18 - ಕರ್ನಾಟಕದ ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ವೇ ಸುರಕ್ಷತೆಯ ಪರಿಶೀಲನೆಗಾಗಿ ಸಮಿತಿಯೊಂದನ್ನು ರಚಿಸಲಾಗಿದೆ. ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಈ ಸಮಿತಿ ರಚಿಸಿದೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಮಿತಿ ಸ್ಥಳಕ್ಕೆ ಭೇಟಿ ನೀಡಿದ್ದು, ಜುಲೈ 20ರ ಒಳಗೆ ಅಧ್ಯಯನ ಪೂರ್ಣಗೊಳಿಸಲಿದೆ. ಸಮಿತಿ ಸ್ಥಳ ಭೇಟಿಯ ಹತ್ತು ದಿನಗಳ ಒಳಗೆ ತನ್ನ ವರದಿ ಸಲ್ಲಿಸಲಿದೆ.

ಈ ವರ್ಷ ಮಾರ್ಚ್ ತಿಂಗಳಲ್ಲಿ ಹೆದ್ದಾರಿ ಆರಂಭಿಸಲಾಗಿತ್ತು. ನಂತರ ಹಲವಾರು ಅಪಘಾತಗಳು ಸಂಭವಿಸಿದ ವರದಿಗಳು ಬಂದಿದ್ದವು. ಈ ಹಿನ್ನೆಲೆಯಲ್ಲಿ ಹೆದ್ದಾರಿ ಸುರಕ್ಷತೆ ಕುರಿತು ಕಳವಳ ಉಂಟಾಗಿತ್ತು.

# ಸ್ಪೇನ್ : ಆಪಲ್, ಅಮೆಜಾನ್‌ಗಳಿಗೆ 218 ದಶಲಕ್ಷ ಡಾಲರ್ ದಂಡ

ಮಾಡ್ರಿಡ್, ಜು. 18 - ಆಪಲ್ ಉತ್ಪನ್ನಗಳನ್ನು ಆನ್‌ಲೈನ್ ಮೂಲಕ ಮಾರಾಟ ಮಾಡುವ ಸಲುವಾಗಿ ಪ್ರತಿಸ್ಪರ್ಧಿಗಳನ್ನು ಹಿಮ್ಮೆಟ್ಟಿಸಲು ಕೈ ಜೋಡಿಸಿದ ಆಪಲ್ ಹಾಗೂ ಅಮೆಜಾನ್ ಕಂಪನಿಗಳಿಗೆ ಸ್ಪೇನ್‌ನ ಏಕಸ್ವಾಮ್ಯ ವಿರೋಧಿ ಆಯೋಗ 218 ದಶಲಕ್ಷ ಡಾಲರ್ ದಂಡ ವಿಧಿಸಿದೆ.

ಅಮೆಜಾನ್ ಹಾಗೂ ಆಪಲ್ ಕಂಪನಿಗಳು 2018ರಲ್ಲಿ ಒಪ್ಪಂದ ಮಾಡಿಕೊಂಡಿದ್ದವು. ಆ ಮೂಲಕ ಅಮೆಜಾನ್ ವೆಬ್ ತಾಣದಲ್ಲಿ ಮೂರನೇ ಪಾರ್ಟಿಗಳು ಆಪಲ್ ಉತ್ಪನ್ನಗಳನ್ನು ಮಾರುವುದಕ್ಕೆ ಕಡಿವಾಣ ಹಾಕಲಾಗಿತ್ತು ಎಂದು ಸ್ಪೇನ್ ಸ್ಪರ್ಧಾ ಆಯೋಗ ತಿಳಿಸಿದೆ.

ಈ ಒಪ್ಪಂದದ ನಂತರ ಮೂರನೇ ಪಾರ್ಟಿಗಳು ಆಪಲ್ ಉತ್ಪನ್ನಗಳನ್ನು ಮಾರುವುದಕ್ಕೆ ಹಿನ್ನಡೆಯಾಗಿತ್ತು. ಶೇ.90ರಷ್ಟು ಮೂರನೇ ಪಾರ್ಟಿಗಳು ಅಮೆಜಾನ್ ವೇದಿಕೆಯಿಂದ ಹೊರ ಬಿದ್ದಿದ್ದವು ಎಂದು ಆಯೋಗ ಹೇಳಿದೆ. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಉಭಯ ಕಂಪನಿಗಳು ನಿರ್ಧರಿಸಿವೆ.

# ಪಡಿತರ ಹಣ : ಹಿಂಬಾಕಿ ಪಡೆಯಲು ಇಲ್ಲ ಅವಕಾಶ

**(1ನೇ ಪುಟದಿಂದ)** ಜಗಳೂರಿನಲ್ಲಿ 2,959 ಹಾಗೂ ನ್ಯಾಮತಿಯಲ್ಲಿ 2,168 ಜನರ ಖಾತೆಗಳಿಗೆ ಹಣ ಜಮಾ ಆಗಿಲ್ಲ.

ಇಂಥವರ ಪಟ್ಟಿಯನ್ನು ಪಡಿತರ ಅಂಗಡಿಗಳ ಎದುರು ಪ್ರಕಟಿಸಲು ಆಹಾರ ಇಲಾಖೆ ಸೂಚಿಸಿದೆ. ಇದರ ಜೊತೆಗೆ https://ahara.kar.nic.in/status1/ ವೆಬ್ ತಾಣಕ್ಕೆ ಭೇಟಿ ತಮ್ಮ ಪಡಿತರ ಚೀಟಿಗೆ ಹಣ ಪಾವತಿಯ ಸ್ಥಿತಿಗತಿಯನ್ನು ತಿಳಿಯಬಹುದು.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿರುವ ಆಹಾರ ಇಲಾಖೆಯ ಉಪ ನಿರ್ದೇಶಕ ಶಿದ್ದರಾಮ ಮಾಡಿಹಾಳ, ಇದುವರೆಗೂ ನಗದು ವರ್ಗಾವಣೆ ಸೌಲಭ್ಯ (ಡಿ.ಬಿ.ಟಿ.) ದ ಪ್ರಥಮ ಹಂತದ ಪಟ್ಟಿಗೆ ಸೇರ್ಪಡೆಗೊಳ್ಳದೇ ಇರುವುದಕ್ಕೆ ಬ್ಯಾಂಕ್ ಖಾತೆ ವಿವರಗಳೇ ಪ್ರಮುಖ ಕಾರಣ ಎಂದಿದ್ದಾರೆ.


ಸಂಬಂಧಿಸಿದ ಬ್ಯಾಂಕ್ ಶಾಖೆಯಲ್ಲಿ ಆಧಾರ್, ಇ-ಕೆವೈಸಿ, ಖಾತೆ ನಿಷ್ಕ್ರಿಯ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಬ್ಯಾಂಕ್ ಖಾತೆ ಇಲ್ಲದ ಪಡಿತರ ಚೀಟಿದಾರರು ಅಂಚೆ ಕಚೇರಿಗಳಲ್ಲಿ ಐ.ಪಿ.ಪಿ.ಬಿ. ಖಾತೆ ತೆರೆಯುವ ಮೂಲಕ ಅತಿ ಸರಳವಾಗಿ ನಗದು ವರ್ಗಾವಣೆ ಸೌಲಭ್ಯ ಪಡೆಯಬಹುದು ಎಂದು ತಿಳಿಸಿದರು.

**ಮೂರು ತಿಂಗಳು ಪಡಿತರ ಪಡೆಯದವರಿಗೆ ಧನಭಾಗ್ಯವಿಲ್ಲ**

ಸರ್ಕಾರದ ಮಾರ್ಗಸೂಚಿಯ ಅನ್ವಯ ಕಳೆದ ಮೂರು ತಿಂಗಳಲ್ಲಿ ಪಡಿತರ ಆಹಾರ ಧಾನ್ಯ ಪಡೆಯದ ಬಿ.ಪಿ.ಎಲ್. ಹಾಗೂ ಎ.ಎ.ವೈ. ಪಡಿತರದಾರರ ಖಾತೆಗೆ ಹಣ ಜಮಾ ಮಾಡುವುದಿಲ್ಲ.

ಇವರು ನಗದು ವರ್ಗಾವಣೆ ಸೌಲಭ್ಯಕ್ಕೆ (ಡಿ.ಬಿ.ಟಿ.) ಅರ್ಹರಾಗುವುದಿಲ್ಲ ಎಂದು ರಾಜ್ಯ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

# ಕೊಮಾರನಹಳ್ಳಿಯಲ್ಲಿ ಮದ್ಯವರ್ಜನೆ ಶಿಬಿರ



ಮಲೇಬೆನ್ನೂರು, ಜು. 18 - ಕೊಮಾರನಹಳ್ಳಿ ಗ್ರಾಮದ ಶ್ರೀ ಲಕ್ಷ್ಮಿ ರಂಗನಾಥಸ್ವಾಮಿ ಸಮುದಾಯ ಭವನದಲ್ಲಿ ಬರುವ ಆಗಸ್ಟ್ 11 ರಿಂದ 19 ರವರೆಗೆ ಮದ್ಯವರ್ಜನೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಜನಜಾಗೃತಿ ವೇದಿಕೆಯ ಯೋಜನಾಧಿಕಾರಿ ನಾಗರಾಜ್ ತಿಳಿಸಿದರು.

ಅವರು ಗುರುವಾರ ಕೊಮಾರನಹಳ್ಳಿಯ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ಸಮುದಾಯ ಭವನದಲ್ಲಿ ಕರೆದಿದ್ದ ಮದ್ಯವರ್ಜನೆ ಶಿಬಿರದ ಪೂರ್ವಭಾವಿ ಸಭೆಯಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ದುಶ್ಚಟಗಳಿಗೆ ಒಳಗಾಗಿ ಬದುಕನ್ನು ಹಾಳು ಮಾಡಿಕೊಂಡಿರುವವರ ಮನಸ್ಸನ್ನು ಪರಿವರ್ತಿಸಿ ಅವರನ್ನು ಕುಡಿತದಿಂದ ಮುಕ್ತಗೊಳಿಸಿ ಹೊಸ ಜೀವನಕ್ಕೆ ಕಾಲಿಡುವಂತೆ ಮಾಡುವುದೇ ಮದ್ಯವರ್ಜನೆ ಶಿಬಿರದ ಮುಖ್ಯ ಉದ್ದೇಶವಾಗಿದೆ ಎಂದು ಅವರು ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರಾರಂಭಿಸಿ ಯಶಸ್ಸು ಕಂಡ ನಂತರ ಡಾ. ವೀರೇಂದ್ರ ಹೆಗ್ಗಡೆ ಅವರು ಜನಜಾಗೃತಿ ವೇದಿಕೆ ಹುಟ್ಟಿಹಾಕಿ, ಇದರ ಮೂಲಕ ಮದ್ಯವರ್ಜನೆ ಶಿಬಿರಗಳನ್ನು ಆಯೋಜಿಸಿ, ದಾಸರಾಗಿರುವ ಗ್ರಾಮೀಣ ಜನರನ್ನು ಅದರಿಂದ ಹೊರತಂದು ಹೊಸ ಬದುಕು ಕಟ್ಟಿಕೊಡುವ ಕನಸುಕಂಡು ಸಫಲರಾಗಿದ್ದಾರೆ. ರಾಜ್ಯದಲ್ಲಿ ಸುಮಾರು 12,500 ವೈನ್ ಶಾಪ್‌ಗಳಿವೆ. ಆದರೆ ಕುಡಿತ ಬಿಡಿಸುವ ಯಾವುದೇ ಕೇಂದ್ರಗಳನ್ನು ಸರ್ಕಾರ ಇದುವರೆಗೂ ಪ್ರಾರಂಭಿಸಿಲ್ಲ. ಒಬ್ಬ ವ್ಯಕ್ತಿಯ ಅಂತರಂಗ ಭೇದಿಸದ ಹೊರತು ಕುಡಿತ ಬಿಡಿಸಲು ಸಾಧ್ಯವಿಲ್ಲ ಎಂಬುದನ್ನು ಅರಿತು ಡಾ. ವೀರೇಂದ್ರ ಹೆಗ್ಗಡೆ ಅವರು ರಾಜ್ಯದಲ್ಲಿ ಇದುವರೆಗೆ 1686 ಮದ್ಯವರ್ಜನೆ ಶಿಬಿರಗಳನ್ನು ಆಯೋಜಿಸಿದ್ದರ ಪರಿಣಾಮವಾಗಿ 1,20,000 ಜನರು ಕುಡಿತ ಬಿಟ್ಟು ಹೊಸ ಜೀವನ ನಡೆಸುತ್ತಿದ್ದಾರೆ ಎಂದು ನಾಗರಾಜ್ ಹೇಳಿದರು.

ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಜಿ. ಮಂಜುನಾಥ್ ಪಟೇಲ್ ಮಾತನಾಡಿ, ಶಿಬಿರದಲ್ಲಿ 80 ಜನ ಶಿಬಿರಾರ್ಥಿಗಳು ಆಗಮಿಸಲಿದ್ದು, ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಜನರ ಸಹಕಾರ ಮುಖ್ಯವಾಗಿದೆ ಎಂದರು.

ಡಿ.ಸಿ.ಸಿ. ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ ಮಾತನಾಡಿದರು. ಈ ವೇಳೆ ಮದ್ಯವರ್ಜನೆ ಶಿಬಿರದ ಸಮಿತಿಯನ್ನು ರಚಿಸಲಾಯಿತು. ಜಿ. ಮಂಜುನಾಥ್ ಪಟೇಲ್ ಅವರನ್ನು ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಹಾಲಿವಾಣ ಗ್ರಾ.ಪಂ. ಅಧ್ಯಕ್ಷ ಡಿ.ಡಿ. ಚಿಕ್ಕಣ್ಣ, ಕೊಮಾರನಹಳ್ಳಿಯ ದಾನಪ್ಪ ಹನುಮಂತಪ್ಪ, ಹುಗ್ಗಿ ರಂಗನಾಥ್, ಎಸ್. ರಂಗನಾಥ್, ಪರಮೇಶ್ವರನಾಯ್ಕ್, ಎಸ್. ಮಂಜುನಾಥ್, ಮಲೇಬೆನ್ನೂರಿನ ಬಿ.ಸುರೇಶ್, ಬೆಣ್ಣೆಹಳ್ಳಿ ಬಸವರಾಜ್, ಆನಂದಚಾರ್, ದಿನೇಶ್ ಚಾರ್, ಕೊಕ್ಕನೂರಿನ ಡಿ. ಸೋಮಶೇಖರ್, ಅರ್ಚಕ ಹನುಮಂತರಾಯ, ನಿರಂಜನ ಪಾಟೀಲ್, ಹಾಲಿವಾಣದ ಶಿವಕ್ಕ ಆಂಜನೇಯ, ನಿಟ್ಟೂರಿನ ಕೆ.ಎಸ್. ತಿಮ್ಮಣ್ಣ, ಜಿಗಳಿಯ ಎನ್. ಬಸವರಾಜ್, ಚಂದ್ರಮ್ಮ, ಶೋಭಾರಾಣಿ, ಹುಚ್ಚೆಂಗೆಮ್ಮ, ಯಲವಟ್ಟಿಯ ಮಂಜುಳಾ, ಯೋಜನೆಯ ಮೇಲ್ವಿಚಾರಕರಾದ ರಕ್ಷಿತಾ, ಚಂದ್ರಪ್ಪ, ಹರೀಶ್, ಮಾರುತಿ, ಸಂಪತ್ ಲಕ್ಷ್ಮಿ, ಶಾರದ, ಆಶಾ, ರಂಗಸ್ವಾಮಿ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸವಿತಾ, ಕೃಷಿ ಮೇಲ್ವಿಚಾರಕ ಗಂಗಾಧರ್ ಸಭೆಯಲ್ಲಿದ್ದರು.


# ಸಾರ್ವಜನಿಕರ ಗಮನಕ್ಕೆ

ದಾವಣಗೆರೆ ತಾಲ್ಲೂಕು ಶಾಬನೂರು ಗ್ರಾಮದ ರಿ.ಸರ್ವೆ ನಂಬರ್ 220ರಲ್ಲಿ 30 ಎಕರೆ 30 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನು ಶಾಬನೂರು ಗ್ರಾಮದ ಹನುಮಂತ ದೇವರ ದೇವಸ್ಥಾನಕ್ಕೆ ಸೇರಿದ ಜಮೀನು ಆಗಿರುತ್ತದೆ. ಸದರಿ ಜಮೀನಿನಲ್ಲಿ ಪೂರ್ವ ಭಾಗದ 15 ಎಕರೆ 15 ಗುಂಟೆಯಲ್ಲಿ 05 ಎಕರೆ 05 ಗುಂಟೆ ಜಮೀನು ಫಕ್ಕೀರಪ್ಪ ತಂದೆ ಬಸಪ್ಪ ಮತ್ತು ಶಿವಾನಂದಪ್ಪ ತಂದೆ ಬಸಪ್ಪ ಇವರಿಗೆ ಜಂಟಿಯಾಗಿ, 05 ಎಕರೆ 05 ಗುಂಟೆ ಲಿಂಗಪ್ಪ ತಂದೆ ಹನುಮಪ್ಪ ಮತ್ತು ಭೀಮಪ್ಪ ತಂದೆ ಹನುಮಪ್ಪ ಇವರಿಗೆ ಜಂಟಿಯಾಗಿ, 05 ಎಕರೆ 05 ಗುಂಟೆ ದಂಡಿಹನುಮಪ್ಪ ತಂದೆ ಹನುಮಪ್ಪ ಇವರಿಗೆ ಹಾಗೂ ಪಶ್ಚಿಮ ಭಾಗದ 15 ಎಕರೆ 15 ಗುಂಟೆಯಲ್ಲಿ 02 ಎಕರೆ ಜಮೀನು ಶ್ರೀಮತಿ ಬಸಮ್ಮ ಗಂಡ ಬಡಕ ಹನುಮಪ್ಪ ಮತ್ತು 13 ಎಕರೆ 15 ಗುಂಟೆ ಜಮೀನು ಪೂಜಾರಿ ಬಸಪ್ಪ ತಂದೆ ಬಡಕ ಹನುಮಪ್ಪ @ ಹನುಮಂತಪ್ಪ ಇವರಿಗೆ ದಾವಣಗೆರೆ ಭೂ ನ್ಯಾಯಮಂಡಳಿಯಲ್ಲಿ ದಿನಾಂಕ 05-11-1979ರಲ್ಲಿ ಮಂಜೂರಾಗಿರುತ್ತದೆ. ಅದರಂತೆ ಪಹಣಿ ಮತ್ತು ಮ್ಯುಟೇಶನ್ ಸಹ ಆಗಿರುತ್ತದೆ.

ಸದರಿ ಬಸಮ್ಮ ಗಂಡ ಪೂಜಾರಿ ಹನುಮಪ್ಪ ಇವರ ಎರಡನೆಯ ಹೆಂಡತಿಯ ಮಗಳಾದ ಶ್ರೀಮತಿ ಪೂಜಾರಿ ಗಂಗಮ್ಮ ಇವರು ಅಸಲು ದಾವೆ ಸಂಖ್ಯೆ 98/2014ರಲ್ಲಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ದಾವಣಗೆರೆ ಇವರಲ್ಲಿ ಪಾಲು ವಿಭಾಗಕ್ಕಾಗಿ ಬಸಪ್ಪ @ ಪೂಜಾರಿ ಬಸಪ್ಪ ಇವರಿಗೆ 05-11-1987ರಲ್ಲಿ ರಿ.ಸರ್ವೆ ನಂ 220ರಲ್ಲಿ ಪಶ್ಚಿಮ ಭಾಗದಲ್ಲಿ ಮಂಜೂರಾದ ಜಮೀನಿನಲ್ಲಿ ಪಾಲು ಕೇಳಿ ದಾವೆಯನ್ನು ಸಲ್ಲಿಸಿದ್ದಳು. ಸದರಿ ದಾವೆಯಲ್ಲಿ ಶ್ರೀಮತಿ ರಾಮಕ್ಕ ಗಂಡ ಪೂಜಾರಿ ಹೆಗ್ಗಪ್ಪ, ಅವರ ಮಕ್ಕಳು, ಗಂಗಮ್ಮ ಗಂಡ ನಿಂಗಪ್ಪ, ಭೀಮನಗೌಡ ತಂದೆ ಬಸವನಗೌಡ ಮತ್ತು ಅವರ ಮಕ್ಕಳು, ಪೂಜಾರಿ ಭೀಮಪ್ಪ ತಂದೆ ಹನುಮಪ್ಪ ಮತ್ತು ಅವರ ಮಕ್ಕಳು, ಶಾಂತಮ್ಮ ಗಂಡ ಹನುಮಂತಪ್ಪ, ಸಂತೋಷ ತಂದೆ ಬಿಂದಪ್ಪಳ ರಾಮಚಂದ್ರಪ್ಪ, ಪಪಾಟ್ ಲಾಲ್ ಜೈನ್ ಮತ್ತು ಅವರ ಮಕ್ಕಳು, ಬೆಳಗಾವಿ ಬಸವರಾಜಪ್ಪ ತಂದೆ ಷಣ್ಮುಖಪ್ಪ, ತಿಪ್ಪಮ್ಮ ಗಂಡ ಸಂಗಪ್ಪ, ರವಿ ತಂದೆ ಸೋಮಶೇಖರಪ್ಪ, ರೇವಣಸಿದ್ದಪ್ಪ ತಂದೆ ಸೋಮಶೇಖರಪ್ಪ, ಬಸವರಾಜಪ್ಪ ತಂದೆ ಬಿಂದಪ್ಪಳ ಮಹಾದೇವಪ್ಪ, ರೇಣುಕಮ್ಮ ತಂದೆ ಭೀಮಪ್ಪ, ನಾಗರಾಜ ತಂದೆ ಭೀಮಪ್ಪ, ಮಂಜಮ್ಮ ಗಂಡ ನಾಗರಾಜ, ಶಂಕುತಲಮ್ಮ ತಂದೆ ಭೀಮಪ್ಪ, ಮಾರುತಿ ತಂದೆ ಭೀಮಪ್ಪ, ರುದ್ರಮ್ಮ ಗಂಡ ಮಾರುತಿ, ಸಾವಿತ್ರಮ್ಮ ಗಂಡ ಹುಚ್ಚಂಗಪ್ಪ, ಸುಧಾ ಗಂಡ ಲಿಂಗರಾಜು, ಶ್ರೀಮತಿ ದೇವೀರಮ್ಮ ಗಂಡ ಹನುಮಪ್ಪ, ರಾಮಚಂದ್ರಪ್ಪ ತಂದೆ ಹನುಮಪ್ಪ, ಲಿಂಗರಾಜಪ್ಪ ತಂದೆ ಹನುಮಪ್ಪ, ಸಿದ್ದಮ್ಮ ಗಂಡ ಬಸವರಾಜಪ್ಪ, ಸುರೇಶ ತಂದೆ ಬಸವರಾಜಪ್ಪ, ರಾಜಶೇಖರಪ್ಪ ತಂದೆ ಸಂಗಪ್ಪ, ಅಮರನಾಥ ತಂದೆ ವಿಠ್ಠಲ, ಅರುಣ್ ಕುಮಾರ ತಂದೆ ಮಹೇಶ್ವರಪ್ಪ, ಮಹೇಂದ್ರ ತಂದೆ ಬಿಂದಪ್ಪಳ ಬಸವರಾಜಪ್ಪ ಇವರುಗಳೆಲ್ಲರೂ ಸದರಿ ಪೂಜಾರಿ ಬಸಪ್ಪನ ವಾರಸುದಾರರಿಂದ ಪಶ್ಚಿಮ ಭಾಗದ 13 ಎಕರೆ 15 ಗುಂಟೆ ಜಮೀನನ್ನು ಖರೀದಿ ಮಾಡಿದ್ದಾರೆ ಎಂದು ಸದರಿ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದಳು. ಸದರಿ ಅಸಲು ದಾವೆ 98/2014 ಪೂರ್ಣ ವಿಚಾರಣೆಯಾದ ನಂತರ ಪೂಜಾರಿ ಗಂಗಮ್ಮನಿಗೆ ಹಕ್ಕು ಇರುವುದಿಲ್ಲ ಎಂದು ದಾವೆಯು ವಜಾ ಆಗಿರುತ್ತದೆ. ಸದರಿ ತೀರ್ಪಿನ ವಿರುದ್ಧ ಪೂಜಾರಿ ಗಂಗಮ್ಮ ಇವರು ಯಾವುದೇ ಅಪೀಲನ್ನು ಸಲ್ಲಿಸಿರುವುದಿಲ್ಲ.

ಮೇಲ್ಕಂಡ ನಮ್ಮಗಳಿಗೆ ಇತ್ತೀಚಿಗೆ ತಿಳಿದು ಬಂದ ವಿಷಯವೇನೆಂದರೆ, ಶ್ರೀಮತಿ ಪಾರ್ವತಮ್ಮ ಗಂಡ ಪ್ರಭಾಕರ್ ಶಿವಮೊಗ್ಗ ಮತ್ತು ಇತರರು ದಾವಣಗೆರೆಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 207/2016ರನ್ನು ಪಾಲು ವಿಭಾಗಕ್ಕಾಗಿ ಸಲ್ಲಿಸಿ, ಶಾಮನೂರು ಗ್ರಾಮದ ರಿ.ಸರ್ವೆ.ನಂ. 220ರ ಪಶ್ಚಿಮ ಭಾಗದ 13 ಎಕರೆ 15 ಗುಂಟೆ ಜಮೀನಿಗೆ ತೀರ್ಪನ್ನು ಪಡೆದಿರುತ್ತಾರೆ ಮತ್ತು ಅಂತಿಮ ತೀರ್ಪನ್ನೂ ಸಹ ಪಡೆದಿರುತ್ತಾರೆ. ಸದರಿ ದಾವೆಯನ್ನು ಮೇಲ್ಕಂಡ ನಮ್ಮಗಳನ್ನು ಪಾರ್ಟಿಗಳನ್ನಾಗಿ ಮಾಡದೆ ನ್ಯಾಯಾಲಯಕ್ಕೆ ಮೋಸ ಮಾಡಿ ಪಡೆದ ತೀರ್ಪಾಗಿರುತ್ತದೆ. ಸದರಿ ತೀರ್ಪಿನ ವಿರುದ್ಧ ಖರೀದಿದಾರರಾದ ನಾವುಗಳು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಸದರಿ ಅಸಲು ದಾವೆ 207/2016 ಮತ್ತು ಎಫ್.ಡಿ.ಪಿ 52/2018ರಲ್ಲಿ ಆದ ತೀರ್ಪನ್ನು ಪ್ರಶ್ನಿಸಿ ಅಪೀಲನ್ನು ಸಲ್ಲಿಸಿರುತ್ತೇವೆ.

ವಂಶವೃಕ್ಷಕ್ಕೆ ಸಂಬಂಧಪಟ್ಟಂತೆ, ಅವರ ಅಜ್ಜನಾದ ಬಸಪ್ಪನ ಮಕ್ಕಳಾದ ಪಕ್ಕೀರಪ್ಪ ಮತ್ತು ಶಿವಾನಂದಪ್ಪನ ಜಮೀನಿನಲ್ಲಿ ಪಾಲು ಪಡೆಯಲು ದಾವೆಯನ್ನು ಸಲ್ಲಿಸಿದೆ ಪೂಜಾರಿ ಬಸಪ್ಪ ತಂದೆ ಬಡಕ ಹನುಮಪ್ಪ @ ಹನುಮಂತಪ್ಪ ಇವರಿಗೆ ಮಂಜೂರಾದ 13 ಎಕರೆ 15 ಗುಂಟೆ ಜಮೀನು ಕೇಸಿನಲ್ಲಿ ಸೇರಿಸಿ ತೀರ್ಪು ಮತ್ತು ಡಿಕ್ರಿಯನ್ನು ಪಡೆದಿರುತ್ತಾರೆ.

ದಾವೆ 207/2016ರಲ್ಲಿ ದಾವೆಯನ್ನು ಸಲ್ಲಿಸುವಾಗ ಹಳೆಯ ಪಹಣಿಯನ್ನು ನೀಡಿದ್ದು, ಹೊಸ ಪಹಣಿಗಳು ಯಾರ ಹೆಸರಿನಲ್ಲಿ ಇವೆ ಎಂಬುದನ್ನು ನ್ಯಾಯಾಲಯಕ್ಕೆ ತಿಳಿಸಿರುವುದಿಲ್ಲ ಮತ್ತು ಹಾಜರು ಪಡಿಸಿರುವುದಿಲ್ಲ ಹಾಗೂ ಸದರಿ ಪಾರ್ವತಮ್ಮ ತಮ್ಮ ವಂಶಕ್ಕೆ ಸೇರಿದ ಪಹಣಿಗಳನ್ನು ಸದರಿ ದಾವೆಯಲ್ಲಿ ಹಾಕಿದ್ದು, ಆದರೆ, ಪೂಜಾರಿ ಬಸಪ್ಪ ತಂದೆ ಹನುಮಪ್ಪನ ಜಮೀನಿಗೆ ಡಿಕ್ರಿಯನ್ನು ತೆಗೆದುಕೊಂಡಿರುತ್ತಾರೆ.

ಅಸಲು ದಾವೆ 52/2016ರ ಪಾರ್ವತಮ್ಮ ಮತ್ತು ಇತರರು ಪೂಜಾರಿ ಬಸಪ್ಪ ತಂದೆ ಪೂಜಾರಿ ಹನುಮಪ್ಪ @ ಬಡಕ ಹನುಮಪ್ಪ ಇವರ ವಂಶಕ್ಕೆ ಸೇರಿದವರಲ್ಲ. ಪೂಜಾರಿ ಬಸಪ್ಪ ತಂದೆ ಹನುಮಪ್ಪ ಯಾನೆ ಬಡಕ ಹನುಮಪ್ಪನಿಗೆ ರಾಮಕ್ಕ ಮತ್ತು ಪಾರ್ವತಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದು, ಅವರಿಗೆ ಪೂಜಾರಿ ಬಸಪ್ಪ ತಂದೆ ಹನುಮಪ್ಪ ತನಗೆ ರಿ.ಸರ್ವೆ ನಂ. 220ರ ಪಶ್ಚಿಮ ಭಾಗದ 13 ಎಕರೆ 15 ಗುಂಟೆ ಜಮೀನನ್ನು ಬಸಪ್ಪ ಜೀವಂತವಾಗಿರುವಾಗಲೇ ತನ್ನ ಹೆಣ್ಣು ಮಕ್ಕಳಿಗೆ ವಿಲ್ ಮೂಲಕ ಕೊಟ್ಟಿದ್ದಾನೆ ಮತ್ತು ಬಸಪ್ಪ ಹೆಣ್ಣು ಮಕ್ಕಳು ಅವರ ಭಾಗಕ್ಕೆ ಬಂದ ಜಮೀನನ್ನು ಈ ಕೇಸಿನ ದೂರುದಾರರಿಗೆ ಬಹಳ ಹಿಂದೆಯೇ ಮಾರಾಟ ಮಾಡಿದ್ದು, ನಮ್ಮಗಳ ಹೆಸರಿಗೆ ಕ್ರಯಪತ್ರಗಳು, ಪಹಣಿಗಳು ಇರುತ್ತವೆ. ಹಾಗೂ ನಾವುಗಳು ಈಗಾಗಲೇ ಕೆಲವರು ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಜಮೀನನ್ನು ಪರಿವರ್ತನೆ ಮಾಡಿ ಸೈಟುಗಳನ್ನಾಗಿ ವಿಂಗಡಿಸಿ, ಮಾರಾಟ ಮಾಡಿದ್ದು, ಅದರಲ್ಲಿ ಕ್ರಯಕ್ಕೆ ಪಡೆದ ಕೆಲವರು ಮನೆಗಳನ್ನು ಸಹ ನಿರ್ಮಿಸಿಕೊಂಡು ವಾಸವಾಗಿದ್ದಾರೆ. ಈ ಎಲ್ಲಾ ಸತ್ಯಾಂಶಗಳ ಸದರಿ ಪಾರ್ವತಮ್ಮ ಮತ್ತು ಇತರರಿಗೆ ಗೊತ್ತಿದ್ದರೂ ಸಹ ದೂರುದಾರರಾದ ನಮ್ಮಗಳಿಗೆ ತೊಂದರೆ ಕೊಟ್ಟು, ನಮ್ಮ ಜಮೀನಿಗೆ ಸುಳ್ಳು ತೀರ್ಪನ್ನು ಪಡೆದಿದ್ದು, ಸದರಿ ಜಮೀನನ್ನು ಈಗಾಗಲೇ ಮಾರಾಟ ಮಾಡಲು ಪ್ರಯತ್ನ ಮಾಡಿದ್ದಾರೆ.

ಆದ್ದರಿಂದ ಸದರಿ ಅಸಲು ದಾವೆ ನಂ.207/2016ರಲ್ಲಿ ಇರುವ ಪಾರ್ಟಿಗಳು ರಿ.ಸರ್ವೆ ನಂ. 220ರ ಪಶ್ಚಿಮ ಭಾಗದ 13 ಎಕರೆ 15 ಗುಂಟೆ ಜಮೀನನ್ನು ಮಾರಾಟ ಮಾಡಲು ಪ್ರಯತ್ನ ಪಟ್ಟಿರುವುದು ನಮ್ಮಗಳ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ ನಾವುಗಳು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸದರಿ ಅಸಲು ದಾವೆ ನಂ.207/2016ರಲ್ಲಿರುವ ಪಕ್ಷಗಾರರಿಗೆ ಪಶ್ಚಿಮ ಭಾಗದ 13 ಎಕರೆ 15 ಗುಂಟೆ ಜಮೀನನ್ನು ಮಾರಾಟ ಮಾಡಲು ಯಾವುದೇ ಅಧಿಕಾರ ಮತ್ತು ಹಕ್ಕು ಇರುವುದಿಲ್ಲ ಹಾಗೂ ಉಚ್ಚನ್ಯಾಯಾಲಯದಲ್ಲಿ ಸದರಿ ಅಸಲು ದಾವಾ 207/2016 ಮತ್ತು ಎಫ್.ಡಿ.ಪಿ. ನಂ.52/2018ರಲ್ಲಿ ಆದ ತೀರ್ಪಿನ ವಿರುದ್ಧ ಅಪೀಲು ಪೆಂಡಿಂಗ್ ಇದ್ದು, ಸದರಿ ಜಮೀನಿನ ಬಗ್ಗೆ ಯಾರು, ಯಾವುದೇ ರೀತಿಯ ಕ್ರಯ ಅಥವಾ ಕ್ರಯದ ಕರಾರು ಮತ್ತು ಇನ್ನಿತರೆ ರೀತಿಯ ಪರಭಾರೆಯನ್ನು ಮಾಡಬಾರದು ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ದಿನಾಂಕ 18-07-2023
ದಾವಣಗೆರೆ

ಸಹಿ /-
**ಎನ್. ಶಿವಲಿಂಗಪ್ಪ,** ಬಿಎ., ಎಲ್‌ಎಲ್‌ಬಿ., ವಕೀಲರು,
#1663/46, 10ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ,
ದಾವಣಗೆರೆ -577004.

# ಬಡವರ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ಕಾನೂನು ಜಾರಿ

## ವಾಲ್ಮೀಕಿ ಗುರುಪೀಠದಲ್ಲಿ ಸಚಿವ ಹೆಚ್.ಕೆ. ಪಾಟೀಲ್



ಮಲೇಬೆನ್ನೂರು, ಜು.18- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠಕ್ಕೆ ಶನಿವಾರ ಬೆಳಿಗ್ಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್ ಅವರು ಭೇಟಿ ನೀಡಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಆಶೀರ್ವಾದ ಪಡೆದುಕೊಂಡರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಹೆಚ್.ಕೆ. ಪಾಟೀಲ್ ಅವರು, ಸರ್ಕಾರಿ ವ್ಯಾಜ್ಯಗಳ ನಿರ್ವಹಣೆ ಮತ್ತು ಬಡವರ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ರಾಜ್ಯ ಸರ್ಕಾರ ಕಾನೂನು ರೂಪಿಸಲಿದೆ, ಬಡವರ ಪ್ರಕರಣಗಳು ಇತ್ಯರ್ಥವಾಗುವ ಪ್ರಕ್ರಿಯೆಯಿಂದ ವಿಳಂಬದಿಂದ ಅನೇಕ ತೊಂದರೆಗಳು ಎದುರಾಗುತ್ತಿವೆ. ಇದನ್ನು ಗಮನಿಸಿಯೇ ಹೊಸ ಕಾನೂನು ಜಾರಿಗೆ ತರಲಿದ್ದೇವೆ ಎಂದರು.

ಅಗತ್ಯ ವಸ್ತುಗಳ ಬೆಲೆಗಳ ನಿಯಂತ್ರಣ ಮಾಡುವ ಸಾಮರ್ಥ್ಯ ಕೇಂದ್ರ ಸರ್ಕಾರಕ್ಕಿದೆಯೇ ಹೊರತು, ರಾಜ್ಯ ಸರ್ಕಾರಕ್ಕಿಲ್ಲ. ಆದರೂ ರಾಜ್ಯ ಸರ್ಕಾರಕ್ಕೆ ದರ ಇಳಿಸುವ ಅಧಿಕಾರ ಇಲ್ಲ. ದರ ಏರಿಕೆಯಿಂದ ಜನರಿಗಾಗಿರುವ ತೊಂದರೆಯ ಭಾರವನ್ನು ಇಳಿಸುವ ಸಲುವಾಗಿಯೇ ಗೃಹಲಕ್ಷ್ಮಿ ಯೋಜನೆ ಜಾರಿ ಮಾಡಲಾಗಿದೆ. ಜನರ ಬದುಕಿಗೆ ಭದ್ರತೆ ಒದಗಿಸುವ ನಿಟ್ಟಿನಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರ ಜನರ ಯೋಜನೆಗಳನ್ನು ಜಾರಿ ಮಾಡುತ್ತಿದೆ ಎಂದರು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ನಡುವೆ ಹೊಂದಾಣಿಕೆ ಅಸಾಧ್ಯ. ಉಭಯ ಪಕ್ಷಗಳೂ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸುತ್ತಿವೆ ಎಂಬುದು ಊಹಾ-ಪೋಹವಷ್ಟೆ ಎಂದು ಪಾಟೀಲ್ ಹೇಳಿದರು.

ಕಾಂಗ್ರೆಸ್ ಮುಖಂಡ ಟಿ. ಈಶ್ವರ್, ಜಿ.ಪಂ. ಮಾಜಿ ಸದಸ್ಯ ಎಂ.ನಾಗೇಂದ್ರಪ್ಪ, ಮಠದ ಧರ್ಮದರ್ಶಿ ಕೆ.ಬಿ. ಮಂಜುನಾಥ್, ಹರಿಹರದ ಸಮಾಜ ಸೇವಕ ಸನಾವುಲ್ಲಾ, ರಾಜನಹಳ್ಳಿ ಗ್ರಾ.ಪಂ. ಸದಸ್ಯ ನಾಗೇಂದ್ರಪ್ಪ, ಗದಗ ಜಿಲ್ಲೆಯ ಮುಖಂಡ ರಾಮಣ್ಣ ಪಲದಡ್ಡಿ ಸೇರಿದಂತೆ ಇತರರು ಈ ವೇಳೆ ಹಾಜರಿದ್ದರು.

## ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿಗೆ ಸನ್ಮಾನ



ದಾವಣಗೆರೆ, ಜು. 18- ಚಿತ್ರದುರ್ಗದಲ್ಲಿ ಭೋವಿ ಗುರುಪೀಠದ ಆಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ ರಾಷ್ಟ್ರೀಯ ಭೋವಿ ಜನೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಯವರನ್ನು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಸನ್ಮಾನಿಸಿದರು.

25ನೇ ಲಾಂಛನ ದೀಕ್ಷಾ ಮಹೋತ್ಸವ, 14ನೇ ಪಟ್ಟಾಭಿಷೇಕ ಮಹೋತ್ಸವ, ಶ್ರೀಗಳ 38ನೇ ವಸಂತೋತ್ಸವ, ಭೋವಿ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ, ಭೋವಿ ಸಮಾಜದ ವಧು-ವರರ ಸಮಾಗಮ ಸೇರಿದಂತೆ, ವಿವಿಧ ಕಾರ್ಯಕ್ರಮಗಳನ್ನು ಶ್ರೀಮಠದಿಂದ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಭೋವಿ ಸಮಾಜದ ಮುಖಂಡರಾದ ಟಿ.ವೈ. ಕುಮಾರ್, ಬಿ.ಎನ್. ವಿನಾಯಕ, ಹೆಚ್. ಜಯಣ್ಣ, ಶಿಲ್ಪಿ ಶ್ರೀನಿವಾಸ್, ವಿ.ಗೋಪಾಲ್, ಎ.ಬಿ. ನಾಗರಾಜ್ ಸೇರಿದಂತೆ ಇತರರು ಹಾಜರಿದ್ದರು.

## ನಂದಗೋಕುಲ ಶಾಲೆಯಲ್ಲಿ ಹಳದಿ ಬಣ್ಣದ ದಿನಾಚರಣೆ




ದಾವಣಗೆರೆ, ಜು. 18 - ನಗರದ ದೇವರಾಜ ಅರಸು ಬಡಾವಣೆಯಲ್ಲಿರುವ ನಂದಗೋಕುಲ ಶಾಲೆಯಲ್ಲಿ ಶನಿವಾರದಂದು ಹಳದಿ ಬಣ್ಣದ ದಿನಾಚರಣೆಯನ್ನು ಆಚರಿಸಲಾಯಿತು. ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಹಳದಿ ಉಡುಪುಗಳನ್ನು ಧರಿಸುವ ಮೂಲಕ ಸಂಭ್ರಮದ ಶನಿವಾರವನ್ನು ಆಚರಿಸಿದರು. ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಶ್ರೀಮತಿ ಬಿ. ಅನಸೂಯ, ಮುಖ್ಯ ಶಿಕ್ಷಕಿ ರೆಹನಾಬಾನು ನಾಸಿಕ ಮತ್ತು ಇತರರು ಭಾಗವಹಿಸಿದ್ದರು.

## ಜಿಲ್ಲಾ ಮಟ್ಟದ ಕವಿಗೋಷ್ಠಿಗೆ ಆಹ್ವಾನ

ದಾವಣಗೆರೆ, ಜು.18- ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಜಿಲ್ಲಾ ಸಮಿತಿ ವತಿಯಿಂದ 'ತುಂಗಭದ್ರೆ' ವಿಷಯ ಕುರಿತಂತೆ ಜಿಲ್ಲಾ ಮಟ್ಟದ ಕವಿಗೋಷ್ಟಿಗೆ ಸ್ವರಚಿತ ಕವನಗಳನ್ನು ಆಹ್ವಾನಿಸಲಾಗಿದೆ. 18 ವರ್ಷದೊಳಗಿನ ಕಿರಿಯ ವಿಭಾಗ ಮತ್ತು ನಂತರದ ಹಿರಿಯ ವಿಭಾಗವಾಗಿ ವಿಂಗಡಿಸಲಾಗಿದೆ. ಕವನಗಳನ್ನು, ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕಿನವರು - ಪಂಚಾಕ್ಷರಯ್ಯ (99166 46805), ಹರಿಹರ ತಾ.- ಸುನಿಲ್ (90603 11822), ದಾವಣಗೆರೆ ತಾ.-ವೀಣಾ ಕೃಷ್ಣಮೂರ್ತಿ (94834 81491), ಚನ್ನಗಿರಿ ತಾ.-ಪ್ರಶಾಂತ್ ಕೋಲ್ಕುಂಟೆ (97425 47792) ಮತ್ತು ಜಗಳೂರು ತಾ.- ಅಮರೇಶ್ (9663059636) ಇವರುಗಳಿಗೆ ಕೈಬರಹ, ಫೋಟೋ ಅಥವಾ ಪಿಡಿಎಫ್ ರೂಪದಲ್ಲಿ ಕಳುಹಿಸಬಹುದು. ಜುಲೈ 25 ಕಡೇ ದಿನವಾಗಿದೆ.

# ಸಿರಿಧಾನ್ಯಗಳ ಮೌಲ್ಯವರ್ಧನೆಗೆ ಒತ್ತು ಕೊಡಿ



ಕೃಷಿ ವಿಜ್ಞಾನಿ ಡಾ. ಟಿ.ಎನ್. ದೇವರಾಜು ಕರೆ

ದಾವಣಗೆರೆ, ಜು. 18- ಪ್ರಸ್ತುತ ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಬೇಕೆಂದರೆ ಸಿರಿಧಾನ್ಯ ಬೆಳೆಗಳ ರೈತರು ಗಮನ ಹರಿಸಬೇಕು. ಪ್ರಸ್ತುತ ಮುಂಗಾರು ಮಳೆ ತಡವಾಗಿರುವುದರಿಂದ ಸಿರಿಧಾನ್ಯ ಬೆಳೆಗಳಾದ ನವಣೆ, ಸಜ್ಜೆ, ಆರಕ, ಊದಲು ಮುಂತಾದವುಗಳನ್ನು ಬೆಳೆಯಬಹುದು ಎಂದು ಹಿರಿಯ ವಿಜ್ಞಾನಿ ಹಾಗೂ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಟಿ.ಎನ್. ದೇವರಾಜು ತಿಳಿಸಿದರು.

ನಗರದ ಐಸಿಎಆರ್ - ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿದ್ದ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ 95ನೇ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, 2020 ರ ಹೊಸ ಶಿಕ್ಷಣ ನೀತಿಯಲ್ಲಿ ಕೃಷಿ ಶಿಕ್ಷಣ ಪ್ರತಿಯೊಬ್ಬರಿಗೂ ದೊರೆಯಬೇಕೆನ್ನುವ ಆಶಯವಿದೆ. ಹಾಗಾಗಿ ವಿದ್ಯಾರ್ಥಿ ದೆಸೆಯಲ್ಲಿ ಈ ಪರಿಚಯ ಪ್ರಮುಖವಾಗುತ್ತದೆ ಎಂದರು.

ಅಡುಗೆ ಎಣ್ಣೆಯ ಕಲಬೆರಕೆಯ ಅಪಾಯವನ್ನು ಮುಂದೆ ಶಿಕ್ಷಕರಾಗಲಿರುವ ಪ್ರಶಿಕ್ಷಣಾರ್ಥಿಗಳಿಗೆ ವಿವರಿಸಿದರು. ಬಾಳೆಕಾಯಿಯಿಂದ ಪೌಡರ್ ಮಾಡಿ ಅನೇಕ ತಿಂಡಿ ತಿನಿಸುಗಳನ್ನು ಮಾಡುವ ತಾಂತ್ರಿಕತೆಗಳನ್ನು ಅವರು ತಿಳಿಸಿದರು.

ಕೇಂದ್ರದ ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ ಮಾತನಾಡಿ, ಸಿರಿಧಾನ್ಯ ಬೆಳೆಗಳು ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ ಅಧಿಕ ಇಳುವರಿ ಕೊಡುವ ಗುಣಗಳನ್ನು ಹೊಂದಿದ್ದು, ನವಣೆಯ ನವೀನ ತಳಿಗಳಾದ HMT-100-1 & DHFT 109-3 ಗಳನ್ನು ಎಕರೆಗೆ 4 ಕೆಜಿ ಯಂತೆ ಬಿತ್ತನೆ ಮಾಡಬೇಕು.

ಪ್ರಸ್ತುತ ಭಾರತ ದೇಶ ಸಿರಿಧಾನ್ಯ ಉತ್ಪಾದನೆಯಲ್ಲಿ ಪ್ರಥಮ ಸ್ಥಾನ ಹೊಂದಿದ್ದು, ಶೇ. 83 ರಷ್ಟು ಉತ್ಪಾದನೆಯನ್ನು ಕರ್ನಾಟಕ, ತಮಿಳನಾಡು, ಆಂಧ್ರಪ್ರದೇಶ, ಗುಜರಾತ್ ರಾಜ್ಯಗಳು ಮಾಡುತ್ತವೆ ತಿಳಿಸಿದರು.

ಕೃಷಿ ಮಾಹಿತಿ ತಂತ್ರಜ್ಞಾನ ಸಪ್ತಾಹದ ಮೂರನೇ ದಿನದ ಕಾರ್ಯಕ್ರಮದಲ್ಲಿ ಎಫ್.ಪಿ.ಓ ಗಳ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ, ವಿವಿಧ ತಾಂತ್ರಿಕ ಪ್ರಾತ್ಯಕ್ಷಿಕಾ ಘಟಕಗಳಿಗೆ ಸಂದರ್ಶನ, ಕ್ಷೇತ್ರ ಭೇಟಿಗಳನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ವಿಷಯ ತಜ್ಞ (ಸಸ್ಯ ಸಂರಕ್ಷಣೆ) ಡಾ. ಟಿ.ಜಿ. ಅವಿನಾಶ್, ಕೃಷಿಯಲ್ಲಿ ಪೀಡೆ ನಾಶಕಗಳ ಬಳಕೆ ಹೆಚ್ಚಾಗುತ್ತಿದ್ದು, ಇದರಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತದೆ. ಕೀಟ ಮತ್ತು ರೋಗ ತಡೆಗಟ್ಟಲು ರಾಸಾಯನಿಕ ಪೀಡೆ ನಾಶಕಗಳ ಬದಲಿಗೆ ಜೈವಿಕ ಕೀಟ ಮತ್ತು ರೋಗನಾಶಕಗಳ ಬಳಕೆಗೆ ಒತ್ತು ಕೊಡುವ ಅವಶ್ಯಕತೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅನುಭವ ಮಂಟಪ ಎಂ.ಎಂ. ಕಾಲೇಜಿನ ಪ್ರಾಂಶುಪಾಲ ನಾಗರಾಜನಾಯ್ಕ್ ಕಾರ್ಯಕ್ರಮ ಉದ್ಘಾಟಿಸಿದರು. ಕೇಂದ್ರದ ಕೃಷಿ ವಿಸ್ತರಣಾ ತಜ್ಞ ಜೆ. ರಘುರಾಜ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳಾದ ಡಾ. ಜಿ.ಕೆ. ಜಯದೇವಪ್ಪ, ಹೆಚ್.ಎಂ. ಸಣ್ಣಗೌಡ ಮತ್ತು ಇತರರು ಭಾಗವಹಿಸಿದ್ದರು.



## ಬನಶಂಕರಿ ಬಡಾವಣೆಯಲ್ಲಿ ವನಮಹೋತ್ಸವಕ್ಕೆ ಚಾಲನೆ

ದಾವಣಗೆರೆ, ಜು.18- ಪರಿಸರ ಜಾಗೃತಿ ಸಮುದಾಯ ಹಾಗೂ ಬನಶಂಕರಿ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವನಮಹೋತ್ಸವ ಕಾರ್ಯಕ್ರಮಕ್ಕೆ ಮೇಯರ್ ವಿನಾಯಕ ಪೈಲ್ವಾನ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾಜಿ ಮೇಯರ್ ಎಸ್.ಟಿ. ವೀರೇಶ್, ನಾಗರಿಕರ ಹಿತರಕ್ಷಣಾ ಸಮಿತಿ ಅಧ್ಯಕ್ಷ ಚಂದ್ರಪ್ಪ, ಪದಾಧಿಕಾರಿಗಳಾದ ಡಾ. ಹೆಚ್.ಜಿ. ಶೇಖರಪ್ಪ, ಡಾ.ಎಸ್.ಆರ್. ಹೆಗಡೆ, ಡಾ. ತವಣೆ, ವಸಂತ್, ಭರಮಪ್ಪ, ಕೊಟ್ರೇಶ್, ಉದಯ್, ಸಿ.ಜಿ. ದಿನೇಶ್ ಮತ್ತಿತರರು ಉಪಸ್ಥಿತರಿದ್ದರು.

## ಹರಪನಹಳ್ಳಿ : ಶಾಸಕರಾದ ಲತಾ ದಂಪತಿಗೆ ಸನ್ಮಾನ



ಹರಪನಹಳ್ಳಿ, ಜು.18- ಪಟ್ಟಣದ ಕಾಶಿ ಬಡಾವಣೆಯ ಲ್ಲಿರುವ ಶಾಸಕರ ನಿವಾಸದಲ್ಲಿ ಮೈದೂರು ಪ್ರಾಥಮಿಕ ಪತ್ತಿನ ಸಂಘಕ್ಕೆ ನೂತನವಾಗಿ ಆಯ್ಕೆಯಾಗಿರುವ ನಿರ್ದೇಶಕರು ಮುಖಂಡರಾದ ಬಿ.ಕೆ.ಪ್ರಕಾಶ್ ಹಾಗೂ ಕುಬೇರಗೌಡ ಅವರ ನೇತೃತ್ವದಲ್ಲಿ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ ದಂಪತಿಗಳಿಗೆ ಸನ್ಮಾನಿಸಿದರು. ಎಂ.ವಿ.ಅಂಜಿನಪ್ಪ, ಮೈದೂರು ರಾಮಣ್ಣ, ಲಾಟಿ ದಾದಾಪೀರ್, ತಿಪ್ಪೇನಾಯಕನಹಳ್ಳಿ ಚನ್ನಪ್ಪ ಹಾಗೂ ಇತರರಿದ್ದರು.

## ಮುರುಘಾಮಠದ ಆಡಳಿತಾಧಿಕಾರಿ ನೇಮಕದ ಆದೇಶ ವಿಸ್ತರಣೆ

(1ನೇ ಪುಟದಿಂದ) ಪಡೆದಿದ್ದಾರೆ ಎಂದರು. ಕುಟುಂಬದ ಹಿರಿಯರು ಬಂಧನಕ್ಕೊಳಗಾದ ಮಾತ್ರಕ್ಕೆ, ಹೊರಗಿನವರು ಸಾರಥ್ಯ ವಹಿಸಿಕೊಳ್ಳಲಾಗದು. ಕುಟುಂಬದ ಒಳಗಿನವರನ್ನೇ ಉತ್ತರಾಧಿಕಾರಿ ಮಾಡುವುದು ನಿಯಮ. ಆ ನಿಯಮವನ್ನೇ ಮಠದಲ್ಲಿ ಪಾಲಿಸಲಾಗಿದೆ. ಇದೇ ವೇಳೆ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ ಅವರು ವಾದ ಮಂಡಿಸಿ, ಈಗಾಗಲೇ ಹೈಕೋರ್ಟ್ ಜಿಲ್ಲಾ ಪ್ರಧಾನ ನ್ಯಾಯಾಧೀಶರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿರುವ ಕಾರಣ ಸರ್ಕಾರದ ಪಾತ್ರ ಸೀಮಿತವಾಗಿದೆ ಎಂದರು.

ಆದರೆ, ಉಸ್ತುವಾರಿ ನೇಮಕದಲ್ಲಿ ನಿಯಮ ಪಾಲನೆ ಹಾಗೂ ಮಠಾಧೀಶರ ನೇಮಕ ವಿಚಾರ ದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆ ಅನುಸರಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಬೇಕಿದೆ ಎಂದು ನ್ಯಾಯಾಲಯ ತಿಳಿಸಿತು.

ಹಿಂದಿನ ಸ್ವಾಮೀಜಿ ಕ್ರಿಮಿನಲ್ ಅಪರಾಧದಡಿ ಬಂಧನಕ್ಕೆ ಒಳಗಾಗಿರುವ ಕಾರಣ ದೈನಂದಿನ ವ್ಯವಹಾರ ಮತ್ತು ಮಠದ ಎಲ್ಲ ಆಗುಹೋಗುಗಳನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡುವುದು ಕಷ್ಟದ ಕೆಲಸ. ಈ ಕಾರಣಕ್ಕಾಗಿಯೇ ಜಿಲ್ಲಾ ಪ್ರಧಾನ ಸೆಷನ್ಸ್ ನ್ಯಾಯಾಧೀಶರನ್ನು ಆಡಳಿತಾಧಿಕಾರಿಯಾಗಿ ನೇಮಕ ಮಾಡಲಾಗಿದೆ ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

ಉಸ್ತುವಾರಿ ನೇಮಕ ಕುರಿತಂತೆ ಈ ಹಿಂದೆ ಪಾಲಿಸಿರುವ ಪದ್ಧತಿ ತಿಳಿಯಬೇಕಿದೆ. ವಾದಗಳನ್ನು ಆಲಿಸಬೇಕಿದೆ. ಆ ಕಾರಣ, ಸದ್ಯಕ್ಕೆ ಈ ಹಿಂದಿನ ಆದೇಶ ಮುಂದುವರೆಯುವ ಅಗತ್ಯವಿದೆ ಎಂದು ತಿಳಿಸಿರುವ ನ್ಯಾಯಾಲಯ, ಪ್ರಕರಣದ ವಿಚಾರಣೆಯನ್ನು ಆಗಸ್ಟ್ 8ಕ್ಕೆ ಮುಂದೂಡಿದೆ.

## 3 ಜ್ಯೋತಿಗಳು ಗೃಹ ಜ್ಯೋತಿಗೆ ವಿಲೀನ

(1ನೇ ಪುಟದಿಂದ) ವಿದ್ಯುತ್ ನೀಡುವುದಾಗಿ ಘೋಷಿಸಲಾಗಿದೆ. ಹಾಗೆಯೇ ಅಮೃತ ಜ್ಯೋತಿಗೆ 75 ಯೂನಿಟ್ ಇತ್ತು ಈಗ ಅದನ್ನು 75 ಯೂನಿಟ್ ಜತೆಗೆ ಶೇ. 10 ಹೆಚ್ಚಿಸಿದ್ದಾರೆ.

ಈಗ ಎಲ್ಲರೂ ಗೃಹ ಜ್ಯೋತಿ ವ್ಯಾಪ್ತಿಗೆ ಬರುತ್ತಾರೆ ಅವರಿಗೆ ಹೆಚ್ಚುವರಿ ಯೂನಿಟ್ ಗಳನ್ನು ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

**ಅಪಾರ್ಟ್‌ಮೆಂಟ್‌ನಲ್ಲಿ ಎರಡು ಮನೆಗಳು ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೆಯರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು ಹಾಗೂ ಎಲ್ಲಾ ಸೌಕರ್ಯವಿರುವ ಅಪಾರ್ಟ್‌ಮೆಂಟ್‌ನಲ್ಲಿ ಎರಡು ಮನೆಗಳು ಭೋಗ್ಯಕ್ಕಿವೆ. - ಬಿ.ಎಸ್. ಸಂತೋಷ್
96322 67555

**ಸೈಟು, ಮನೆ ಮಾರಾಟಕ್ಕಿವೆ**
ಶಿವಕುಮಾರ ಸ್ವಾಮಿ ಬಡಾವಣೆ 2ನೇ ಹಂತದಲ್ಲಿ ಉತ್ತರ 30x40 ಮನೆ, ಮೇಲೆ - ಕೆಳಗೆ. ಶಿವಕುಮಾರ ಸ್ವಾಮಿ ಬಡಾವಣೆ 1ನೇ ಹಂತದಲ್ಲಿ 30x40 ದಕ್ಷಿಣ, 50x60 ಉತ್ತರ ಸೈಟುಗಳು.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**ಬೇಕಾಗಿದ್ದಾರೆ**
ತಕ್ಷಣ ಸೇಲ್ಸ್ ಗರ್ಲ್ಸ್, ಸೇಲ್ಸ್ ಬಾಯ್ಸ್ ಹಾಗೂ ಹೆಲ್ಪರ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ಸ್ ಸ್ಯಾರಿ ಸೆಂಟರ್, ಬಿನ್ನಿ ಕಂಪನಿ ರೋಡ್, ದಾವಣಗೆರೆ -1.

**ಬೇಕಾಗಿದ್ದಾರೆ**
ಅಶೋಕ್ ಲೇಲ್ಯಾಂಡ್ ಓಡಿಸಬಲ್ಲ ಬ್ಯಾಡ್ಜ್ ವುಳ್ಳ ಡ್ರೈವರ್, ಸೇಲ್ಸ್ ಮನ್, ಡಿಲೇವರಿ ಬಾಯ್ಸ್ ಬೇಕಾಗಿದ್ದಾರೆ. ಅನುಭವವುಳ್ಳವರು ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್ ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**EC / ಇಸಿ, E-swathu, Khatha Change Building Licence & Other Property Documents**
96118-66449

**WANTED**
Accountant for Electronics Shop
BHERAV DISTRIBUTOR
Jaydev Circle Davangere
Minimum 2 year experience in Account handling. Boys only
Qualification : B.Com or MBA
94480 84144

**ಹಾಲ್‌ಗಳು ಬಾಡಿಗೆಗೆ ಇವೆ**
ವಿದ್ಯಾನಗರ ಮೇನ್ ರೋಡ್, 2000 ಚ.ಅಡಿ, 1ನೇ ಮತ್ತು 2ನೇ ಮಹಡಿಯಲ್ಲಿ ಬ್ಯಾಂಕ್, ಹಣಕಾಸು ಸಂಸ್ಥೆ, ಸರ್ಕಾರಿ ಕಛೇರಿ ಹಾಗೂ ಸಾಫ್ಟ್‌ವೇರ್ ಕಂಪನಿಗಳಿಗೆ ಸೂಕ್ತವಾಗಿರುವ ಹಾಲ್‌ಗಳು ಬಾಡಿಗೆಗಿವೆ.
94484 28371

**ಬಾಡಿಗೆಗಿದೆ**
ಬಸಾಪುರ ರಸ್ತೆಯಲ್ಲಿ ಬಂಬೂಬಜಾರ್ ಹಿಂಭಾಗ ಸುತ್ತಲೂ ಕಾಂಪೌಂಡ್‌ವುಳ್ಳ 1,00,000 ಚ.ಅಡಿ ಇಂಡಸ್ಟ್ರೀಯಲ್ ಪರ್ಪೋಸ್ (1 ಲಕ್ಷ) ಜಾಗ, 2 ಬೋರ್‌ವೆಲ್, ಗೋಡೌನ್ 30x40 ಮತ್ತು ಆಫೀಸ್ ರೂಂ ಬಾಡಿಗೆಗಿದೆ. ಸಂಪರ್ಕಿಸಿ.
94480 28103

**ಸೈಟ್ ಮಾರಾಟಕ್ಕಿದೆ**
APMC ಮಾರುಕಟ್ಟೆ ಹಿಂಭಾಗದ KSR ಲೇಔಟ್‌ನಲ್ಲಿ ರುವ ಪಶ್ಚಿಮ ದಿಕ್ಕಿನ 30x50 ಆಳತೆಯ 40 ಅಡಿ ರಸ್ತೆ ಗೆ ಲಗತ್ತಾಗಿರುವ KSRTC ಬಸ್ ಸ್ಟ್ಯಾಂಡ್‌ಗೆ ಹತ್ತಿರ ಇರುವ ಸೈಟ್ ಮಾರಾಟಕ್ಕಿದೆ. ದರ 2500/-
ಮೊ : 86602 35013

**ಬೇಕಾಗಿದ್ದಾರೆ**
ಕನ್ನಡ & English Typing ಕ್ರಯ ಪತ್ರ, ಪಾಲುವಿಭಾಗ & Rent Agreement ಮಾಡಿ ಅನುಭವ ಇರುವವರಿಗೆ ಆದ್ಯತೆ
96118 66449

**ಬೇಕಾಗಿದ್ದಾರೆ**
ಬ್ಯಾಂಕಿಂಗ್ ಸೆಕ್ಟರ್ ಅಲ್ಲಿ ಕೆಲಸ ಮಾಡಲು ಟೆಲಿ ಕಾಲರ್ಸ್ ಬೇಕಾಗಿದ್ದಾರೆ. ಉತ್ತಮ ವೇತನ ಮತ್ತು ಇನ್‌ಸೆಂಟಿವ್ಸ್ ಕೊಡಲಾಗುತ್ತದೆ.
80886 33171

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಬೇಕಾಗಿದ್ದಾರೆ**
ಕಾಡಜ್ಜಿ ಗ್ರಾಮದಲ್ಲಿರುವ ಇಂಗ್ಲಿಷ್ ಮೀಡಿಯಂ ಶಾಲೆಗೆ ಅನುಭವವುಳ್ಳ ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ, NTC, B.A B.Ed, Bsc B.Ed, Part time teachers: Computer, ಸಂಗೀತ, Spoken English, ದಾವಣಗೆರೆಯಿಂದ ಕಾಡಜ್ಜಿಗೆ ಉಚಿತ ಬಸ್ ಸೌಲಭ್ಯ ಇರುತ್ತದೆ.
89045 21879

**ಆತಿಥ್ಯ ರೆಸ್ಟೋರೆಂಟ್**
ಶುದ್ಧ ತಾಜಾ ಮಸಾಲಾ ದೋಸೆ ಹಿಟ್ಟು ದೊರೆಯುತ್ತದೆ
6366104640

**ಮನೆ ಬಾಡಿಗೆಗೆ ಇದೆ**
3BHK ಕಾರ್ ಪಾರ್ಕಿಂಗ್, ಬೋರ್ ಮುನ್ಸಿಪಲ್ ನೀರಿನ ಸೌಲಭ್ಯವಿದೆ. ವಿವೇಕಾನಂದ ಬಡಾವಣೆ, 2ನೇ ಮುಖ್ಯ ರಸ್ತೆ, ಪುಷ್ಪಾ ಮಹಾಲಿಂಗಪ್ಪ ಕಾಲೇಜು ಬಳಿ (ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ.
88806 99986, 98455 30663

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಅಶೋಕ ಲೇಲ್ಯಾಂಡ್ ಮೊಬೈಲ್ ಕ್ಯಾಂಟೀನ್‌ಗೆ ವಾಹನ ಬಾಡಿಗೆಗಿದೆ**
ಅಶೋಕ್ ಲೇಲ್ಯಾಂಡ್ ಓಪನ್ ಡೋರ್ ಮೊಬೈಲ್ ಕ್ಯಾಂಟೀನ್‌ಗೆ ವಾಹನ ಬಾಡಿಗೆಗೆ ಇದೆ. ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
90358 88939

**ಬೇಕರಿ ಮಾರಾಟಕ್ಕಿದೆ**
ಹಂಸ ಬೇಕರಿ
ಆರ್.ಹೆಚ್. ಕಾಂಪ್ಲೆಕ್ಸ್, ಹದಡಿ ರೋಡ್, ದಾವಣಗೆರೆ. ಬೇಕರಿ ಐಟಮ್ಸ್ ಮತ್ತು ಕೌಂಟರ್ಸ್ ಸೇಲ್‌ಗಿದೆ. 10 ದಿನಗಳೊಳಗಾಗಿ ಸಂಪರ್ಕಿಸಿ.
90085 25052

**ಬಾಡಿಗೆಗೆ ಇವೆ**
ಕೆ.ಆರ್. ಮಾರ್ಕೆಟ್ ಹತ್ತಿರ, ಬೆಳ್ಳೂಡಿ ಗಲ್ಲಿಯಲ್ಲಿ, ಗ್ರೌಂಡ್ ಫ್ಲೋರ್, ಫಸ್ಟ್ ಫ್ಲೋರ್, ಮತ್ತು ಸೆಕೆಂಡ್ ಫ್ಲೋರ್‌ನಲ್ಲಿ , ಕಾರ್ಪೋರೇಷನ್ ವಾಟರ್, ಮತ್ತು ಬೋರ್ ವಾಟರ್, ಸೌಲಭ್ಯ ಹೊಂದಿರುವ, ಕಮರ್ಷಿಯಲ್‌ಗೂ, ವಾಸಕ್ಕೂ ಹೊಂದುವಂತಹ ಡಬಲ್ ಬೆಡ್ ರೂಮ್ ಮನೆಗಳು ಬಾಡಿಗೆಗೆ ಇವೆ. ಹಾಗೂ ಹದಡಿ. ರೋಡ್‌ನ ಮೋರ್ ಎದುರು ಇರುವ ಬಿಲ್ಡಿಂಗ್‌ನ, ಎರಡನೇ ಫ್ಲೋರ್ ನಲ್ಲಿ , ಹೋಟೆಲ್, ಜಿಮ್, ಬ್ಯೂಟಿ ಪಾರ್ಲರ್, ಟ್ಯೂಷನ್, ಇತರೆ ಆಫೀಸ್‌ಗೆ, ಹೊಂದುವಂತಹ ಹೊಸದಾದ ದೊಡ್ಡದಾದ ಹಾಲ್ ಬಾಡಿಗೆಗೆ ಇದೆ.
ವಿಚಾರಿಸಿ. 99865 44132

**ನಮ್ಮಲ್ಲಿ ಅಡಮಾನದ ಲೋನ್ ಲಭ್ಯತೆ, ಮನೆ ಸಾಲ ಸೌಲಭ್ಯ**
ಮನೆ ಕಟ್ಟಲು ಮನೆ ಖರೀದಿ ಮಾಡಲು ಬೇರೆ ಬ್ಯಾಂಕ್ ಅಥವಾ ಫೈನಾನ್ಸ್ ಕಂಪನಿಯಿಂದ ಇರುವ ಸಾಲ ತೀರುವಳಿ ಹಾಗೂ ಹೆಚ್ಚಿನ ಸಾಲ ವಾಸದ ಮನೆ ಸಾಲ.
(ಕಡಿಮೆ ದಾಖಲಾತಿ, ತ್ವರಿತ ಸಾಲ ಸೌಲಭ್ಯ)
77603 47247

**ಬೇಕಾಗಿದ್ದಾರೆ**
ಅಕೌಂಟ್ ಬಿಲ್ಲಿಂಗ್, ಜಿಎಸ್‌ಟಿ ರಿಟರ್ನ್ಸ್ ಮತ್ತು ಟ್ಯಾಲಿ ಅನುಭವವುಳ್ಳ ಮಹಿಳಾ ಅಥವಾ ಪುರುಷ ಕೆಲಸಗಾರರು ಬೇಕಾಗಿದ್ದಾರೆ.
ಆಕರ್ಷಕ ಸಂಬಳವಿರುತ್ತದೆ. ಸಂಪರ್ಕಿಸಿ :
9036611313, 9632757065

**CHANGE OF NAME**
I.N. Chandrashekhar, Residing at # 25, Main Road, Kashipura, DVG Tq. I have Changed my Minor Son Name from **Veganth Nag N.** To **VEGANTH NAG NEKKANTI** Vide affidavit dt. 24.5.2023 sworn before notary P. Bhramakumar Davangere.

**DENTIST REQUIRED**
Full time Dentist with good communication and patient handling skills.
Languages Preferred : *English , Kannada, Hindi*
*Interview Date : 19.7.2023 till 3 PM*
Send resume to vishwaslifecare@gmail.com
Dr Kiran D.N. VISHWAS LIFE CARE
#298, Vidyarthi Bhavan Circle, Hadadi Road, Davangere - 577 002.
Mob : 99961 84345

**ಜಮೀನು ಮಾರಾಟಕ್ಕಿದೆ**
ದಾವಣಗೆರೆ, ಹರಪನಹಳ್ಳಿ ಮುಖ್ಯ ರಸ್ತೆಯಲ್ಲಿ ಮಾಗಾನಹಳ್ಳಿ ಹತ್ತಿರ 10 ಗುಂಟೆ ಜಮೀನು ಹಾಗೂ ಕಂಚಿಕೇರಿ ಹತ್ತಿರ ಜಮೀನು ಮಾರಾಟಕ್ಕಿದೆ.
99726 75759

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ
(ಕೋರಿಯರ್ ಸೌಲಭ್ಯವಿದೆ)
91487 33213

**ಅದ್ಭುತವಾದ ಹೊಸ ಮನೆ ಮಾರಾಟಕ್ಕಿದೆ**
30x40 ಉತ್ತರ ದಿಕ್ಕಿನಲ್ಲಿ ವಾಸ್ತು ಪ್ರಕಾರ ಕಟ್ಟಿರುವ 2 BHK ಮನೆ ಮಾರಾಟಕ್ಕಿದೆ. ಸಿದ್ದಗಂಗಾ ಬಡಾವಣೆ, ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಹಿಂಭಾಗದ, ದಾವಣಗೆರೆ.
95384 86666, 63605 94165

**ಕೆಲಸ ಖಾಲಿ ಇವೆ**
ITI ಆದವರಿಗೆ ಫೀಲ್ಡ್ (Field work) ಕೆಲಸ ಖಾಲಿ ಇವೆ. ಬೈಕ್ ಇದ್ದವರಿಗೆ ಆದ್ಯತೆ
ಸಂಪರ್ಕಿಸಿ :
ಮೊ. : 94817 74321

**ಬೇಕಾಗಿದ್ದಾರೆ**
ಫೀಲ್ಡ್ ವರ್ಕ್ ಮಾಡಲು ITI/Diploma ಆದಂತಹ ಯುವಕರು ಬೇಕಾಗಿದ್ದಾರೆ.
ಸಂಪರ್ಕಿಸಿ. ಜ್ಯೋತಿ ಗ್ಯಾಸ್ ಏಜೆನ್ಸಿ, ಲಾಯರ್ ರೋಡ್, ದಾವಣಗೆರೆ.
99645 96070

**ಬೇಕಾಗಿದ್ದಾರೆ**
ಪಾರ್ಟ್ ಟೈಮ್/ಫುಲ್ ಟೈಮ್ ಜಾಬ್ SSLC/PUC/ITI/DIPLOMA ಪಾಸ್/ಫೇಲ್ ಆದ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ : ಜ್ಯೋತಿ ಮೆಟಲ್ಸ್, ಹಳೇ ಬಸ್ಟ್ಯಾಂಡ್, ಗಣಪತಿ ಗುಡಿ ಪಕ್ಕ, ದಾವಣಗೆರೆ.
98800 34643

**ಕಂಪನಿಗಳಿಗೆ ತಕ್ಷಣ ಬೇಕಾಗಿದ್ದಾರೆ**
SSLC, PUC, ITI, Diploma, Degree, ಪಾಸ್ / ಫೇಲ್.
ನೇರ ನೇಮಕಾತಿ.
ಸಂಬಳ : 17000/- ದಿಂದ 70000/-.
ವಸತಿ, ಊಟದ ವ್ಯವಸ್ಥೆ ಇದೆ.
96862 20858

**WANTED TEACHER**
B.Sc / M.Sc or Any Degree
99641 10736

**ರೈತ ಬಾಂಧವರೇ**
ಅಡಿಕೆ ತೋಟದ ಕಳೆಗೆ ಸ್ಪ್ರೇ ಮಾಡುವ ಸಾವಯುವ ಕಳೆನಾಶಕ ದೊರೆಯುತ್ತದೆ.
ಫೋ. : 98451 04109

**AVOID MOSQUITOES**
Mosquito Nets For Doors & Windows
SRI GOWRI ENTERPRISES
#7C2, 4th Cross, Near, Shaneshwara Temple Karur Industrial-Area, P.B. Road, DVG-6.
72049 94628

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**2 BHK HOUSE FOR LEASE / RENT**
Near Podar International School in J.H. Patel Badavane, Davanagere.
95358 41058
88617 11072

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**CHANGE OF NAME**
I.N. Chandrashekhar, Residing at # 25, Main Road, Kashipura, DVG Tq. I have Changed my Minor Daughter Name from **Rupashree Valli N. to RUPASHREEVALLI NEKKANTI** Vide affidavit dt. 24.5.2023 sworn before notary P. Bhramakumar Davangere.

**ಲೋನ್ ಕೊಡಲಾಗುವುದು**
ಪರ್ಸನಲ್ ಲೋನ್. ಬಿಸಿನೆಸ್ ಲೋನ್.ಹೋಂ ಲೋನ್, ಮನೆ ರಿಪೇರಿ, ಮನೆ ಕಟ್ಟಲು, ಸೈಟ್ ಖರೀದಿ ಗೆ ಸಾಲ ಸೌಲಭ್ಯವಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ.
74835 24662

**ಹಣಗೆರೆ ಕಟ್ಟೆ ಜ್ಯೋತಿಷ್ಯ ಫಲಂ**
ಶ್ರೀ ಚೌಡೇಶ್ವರಿ ದೇವಿ ಮತ್ತು ಭೂತರಾಯನ ಪ್ರಯೋಗದಿಂದ ಹಿಂದೂ & ಮುಸ್ಲಿಂ ಪದ್ಧತಿಯಲ್ಲಿ ಪೂಜೆ ಸಲ್ಲಿಸಲಾಗುತ್ತದೆ. ಪ|| ಎ.ಕೆ. ರಾವ್, ನಂ 1 ವಶೀಕರಣ ಸ್ಪೆಷಲಿಸ್ಟ್, ವಿ.ಸೂ : ಸ್ತ್ರೀ ಪುರುಷ ವಶೀಕರಣಕ್ಕೆ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ, ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಪೋನಿನ ಮೂಲಕ ಸಂಪರ್ಕಿಸಿ. ಸಮಸ್ಯ ಪರಿಹರಿಸಿಕೊಳ್ಳಿ.
99644 84508

**WANTED**
Sales Executive - 2
BHOSLE TELECOM
Near Old Bus Stand
98868 08412

**ಬೇಕಾಗಿದ್ದಾರೆ PUC /DEGREE**
ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಮಹಿಳೆಯರು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ: 6-30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000ರೂ ವರೆಗೆ. ಸಂಪರ್ಕಿಸಿ
ಸ್ಕಂದ ಚಿಟ್ ಫಂಡ್ಸ್ (ರಿ.)
78997 75159

**ಕೋಚಿಂಗ್**
LKG to 9th
SSLC & PUC
PCMB, Arts, Commerce.
ಸಿಂಚನ ಅಕಾಡೆಮಿ
ರಾಮ್ ಅಂಡ್ ಕೋ ಸರ್ಕಲ್ ದಾವಣಗೆರೆ.
90195 80600

# ಪ್ರಕೃತಿ ವಿಕೋಪ ಎದುರಿಸಲು ಎಸ್‌ಡಿಆರ್‌ಎಫ್ ಸದಾ ಸಿದ್ಧ

ದಾವಣಗೆರೆ, ಜು. 18- ಪ್ರಕೃತಿ ವಿಕೋಪ ಸೇರಿದಂತೆ ಅನೇಕ ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರನ್ನು ಆಪತ್ತಿನಿಂದ ಕಾಪಾಡಲು ರಾಜ್ಯ ವಿಪತ್ತು ಸ್ಪಂದನಾ ಪಡೆ (ಎಸ್‌ಡಿಆರ್‌ಎಫ್) ಸದಾ ಸಿದ್ಧವಾಗಿರುತ್ತದೆ ಎಂದು ಎಸ್‌ಡಿಆರ್‌ಎಫ್‌ನ ಸರ್ಕಲ್ ಇನ್ಸ್‌ಪೆಕ್ಟರ್ ಎಸ್.ಎಸ್. ಕಿರಣಕುಮಾರ್ ತಿಳಿಸಿದರು.

ನಗರದ ಸೇಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ಶನಿವಾರ ಆಯೋಜಿಸಿದ್ದ ಪ್ರಕೃತಿ ವಿಕೋಪ ನಿರ್ವಹಣೆ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಪತ್ತುಗಳನ್ನು ಎದುರಿಸಲು ಸರ್ಕಾರವು ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ತಂಡಗಳನ್ನು ತಯಾರು ಮಾಡಿ, ತರಬೇತಿ, ಅವಶ್ಯಕವಾದ ಅಸ್ತ್ರಗಳನ್ನು ನೀಡಿದೆ. ಇದರಿಂದ ಸಾವು-ನೋವುಗಳನ್ನು ತಡೆಯುವಲ್ಲಿ ಶ್ರಮಿಸಬಹುದಾಗಿದೆ.

ನಮ್ಮ ಕರ್ನಾಟಕದ 5 ಪ್ರಮುಖ ಭಾಗಗಳಾದ ಬೆಂಗಳೂರು, ಮಂಗಳೂರು, ಬೆಳಗಾವಿ, ಕಲ್ಬುರ್ಗಿ ಸೇರಿ ದಾವಣಗೆರೆಯಲ್ಲಿ ಈ ಎಸ್‌ಡಿಆರ್‌ಎಫ್ ತಂಡವನ್ನು ಆರಂಭಿಸಿದೆ.

ಸರ್ಕಾರ ಪ್ರತಿಯೊಂದು ಶಾಲೆಗಳ ಮಕ್ಕಳಿಗೆ ಪ್ರಕೃತಿ ವಿಕೋಪಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಜಾಗೃತಿ ಕಾರ್ಯಕ್ರಮಗಳ ಮೂಲಕ ಮಾಹಿತಿ ನೀಡಲು ಅವಕಾಶ ಮಾಡಿಕೊಟ್ಟಿದೆ. ಸಿಡಿಲು ಬಡಿಯುವ ಸಂದರ್ಭ, ಮಳೆಯಿಂದ ಪ್ರವಾಹ ಬಂದ ಸಂದರ್ಭ, ವಿದ್ಯುತ್ ಅವಘಡ, ಅಪಘಾತವಾದ ಸಂದರ್ಭ ಸೇರಿದಂತೆ ಯಾವುದೇ ಪ್ರಕೃತಿ ವಿಕೋಪಗಳು ಬಂದಾಗ ಹೇಗೆ ಎದುರಿಸಬೇಕು ಎಂಬ ಬಗ್ಗೆ ಮಾಹಿತಿ



**ಸೇಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿನ ಕಾರ್ಯಕ್ರಮದಲ್ಲಿ ಎಸ್‌ಡಿಆರ್‌ಎಫ್‌ನ ಸರ್ಕಲ್ ಇನ್ಸ್‌ಪೆಕ್ಟರ್ ಎಸ್.ಎಸ್. ಕಿರಣಕುಮಾರ್**

ನೀಡಿದರು. ಇದರ ಬಗ್ಗೆ ನೀವುಗಳೂ ಸಹಾ ನಿಮ್ಮ ತಂದೆ-ತಾಯಿಯರಿಗೆ, ಪೋಷಕರಿಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ಶಾಲೆಯ ವ್ಯವಸ್ಥಾಪಕರಾದ ಸಿಸ್ಟರ್ ಮಾರ್ಜರಿ ಮಾತನಾಡಿ, ಪ್ರಕೃತಿ ವಿಕೋಪ ಬಂದಾಗ ಎದುರಿಸುವುದು ಬಹಳ ಕಷ್ಟಕರ. ಅಂತಹದರಲ್ಲಿ ಈ ತಂಡದವರು ತಮ್ಮ ಜೀವವನ್ನೂ ಲೆಕ್ಕಿಸದೇ ಇಂತಹ ಸಮಾಜಮುಖಿ ಕಾರ್ಯ ಮಾಡುತ್ತಾರೆ. ಪ್ರತಿಯೊಬ್ಬ ಮಕ್ಕಳೂ ಸಹಾ ತಮ್ಮ ಓದಿನ ಜೊತೆಯಲ್ಲಿ ಇಂತಹ ತರಬೇತಿಗಳನ್ನು ಪಡೆದು ಮುಂದೆ ನೀವೂ ಸಹಾ ಇಂತಹ ಕಾರ್ಯಗಳಲ್ಲಿ ಭಾಗವಹಿಸುವಂತಾಗಿರಿ ಎಂದು ಕರೆ ನೀಡಿದರು.

ಎಸ್‌ಡಿಆರ್‌ಎಫ್ ಸಬ್ ಇನ್ಸ್‌ಪೆಕ್ಟರ್ ವೆಂಕಟರಾಯ ನಾಯಕ್, ಸಿಬ್ಬಂದಿ ವರ್ಗ, ಹೈಸ್ಕೂಲ್ ವಿಭಾಗದ ಮುಖ್ಯ ಶಿಕ್ಷಕರಾದ ಎಂ.ಕೆ. ಮಂಜುಳಾ, ವೈಲೆಟ್, ಕ್ಲಮೆನ್ಸಿಯಾ, ಸ್ಕೌಟ್ ಮಾಸ್ಟರ್ ರವೀಂದ್ರ ಸ್ವಾಮಿ, ಗೈಡ್ ಕ್ಯಾಪ್ಟನ್ ನಯನ ಏಸುಪ್ರಿಯ, ಎಚ್. ಎಂ.ರಜನಿ ಹಾಗೂ ಶಾಲಾ ಶಿಕ್ಷಕರು, ಮಕ್ಕಳು ಭಾಗವಹಿಸಿದ್ದರು.

# ನೈರುತ್ಯ ರೈಲ್ವೆ : ರೈಲುಗಳ ಸೇವೆ ವಿಸ್ತರಣೆ

**➥ ರೈಲುಗಳ ಸೇವೆ ವಿಸ್ತರಣೆ :** ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ತೆರವುಗೊಳಿಸುವ ಸಲುವಾಗಿ ಈ ಕೆಳಗಿನ ರೈಲುಗಳ ಸೇವೆಯ ಸಮಯ, ನಿಲುಗಡೆ, ಬೋಗಿಗಳ ಸಂಯೋಜನೆ, ದರದಲ್ಲಿ ಯಾವುದೇ ಬದಲಾವಣೆ ಮಾಡದೆ ವಿಸ್ತರಣೆ ಮಾಡಲಾಗುತ್ತಿದೆ. ಅವುಗಳ ವಿವರ.



ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಪ್ರಾರಂಭವಾಗುವ ರೈಲು ಸಂಖ್ಯೆ 07325 ಎಸ್.ಎಸ್.ಎಸ್ ಹುಬ್ಬಳ್ಳಿ - ತಂಜಾವೂರು ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲನ್ನು ಈ ಮೊದಲು ಜುಲೈ 31 ರವರೆಗೆ ಓಡಿಸಲು ಸೂಚಿಸಲಾಗಿತ್ತು. ಈ ರೈಲನ್ನು ಆಗಸ್ಟ್ 07 ರಿಂದ ಸೆಪ್ಟಂಬರ್ 25 ರವರೆಗೆ ವಿಸ್ತರಿಸಲಾಗುತ್ತಿದೆ.

ಪ್ರತಿ ಮಂಗಳವಾರ ತಂಜಾವೂರಿನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 07326 ತಂಜಾವೂರು - ಎಸ್.ಎಸ್.ಎಸ್ ಹುಬ್ಬಳ್ಳಿ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲನ್ನು ಈ ಮೊದಲು ಆಗಸ್ಟ್ 01 ರವರೆಗೆ ಓಡಿಸಲು ಸೂಚಿಸಲಾಗಿತ್ತು. ಈ ರೈಲನ್ನು ಆಗಸ್ಟ್ 08 ರಿಂದ ಸೆಪ್ಟಂಬರ್ 26 ರವರೆಗೆ ವಿಸ್ತರಿಸಲಾಗುತ್ತಿದೆ.

**➥ ರೈಲುಗಳ ಮಾರ್ಗ ಬದಲಾವಣೆ :** ದೌಂಡ್ – ಮನ್ಮಾಡ್ ವಿಭಾಗಗಳ ವ್ಯಾಪ್ತಿಯ ಬೇಲಾಪುರ - ಪಡೆಗಾಂವ್ ನಿಲ್ದಾಣಗಳಲ್ಲಿ ಜೋಡಿ ಮಾರ್ಗದ ಕಾಮಗಾರಿ ಸಲುವಾಗಿ ಈ ಕೆಳಗಿನ ಕೆಲವು ರೈಲುಗಳ ಮಾರ್ಗ ಬದಲಾವಣೆ ಮತ್ತು ನಿಯಂತ್ರಿಸಲಾಗುತ್ತಿದೆ. ಅವುಗಳ ಮಾಹಿತಿ.

ಜುಲೈ 20 ಮತ್ತು 21 ರಂದು ಕೆ. ಎಸ್.ಆರ್ ಬೆಂಗಳೂರಿನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 12627 ಕೆ.ಎಸ್.ಆರ್ ಬೆಂಗಳೂರು- ನವದೆಹಲಿ ಕರ್ನಾಟಕ ಎಕ್ಸ್‌ಪ್ರೆಸ್ ರೈಲು ವಾಡಿ, ದೌಂಡ್, ಪುಣೆ, ಲೋನಾವಾಲಾ, ಕರ್ಜತ್, ಪನ್ವೆಲ್, ಕಲ್ಯಾಣ್, ಇಗತ್‌ಪುರಿ ಮತ್ತು ಮನ್ಮಾಡ ನಿಲ್ದಾಣಗಳ ಮೂಲಕ ಸಂಚರಿಸಲಿದೆ.

ಜುಲೈ 20 ಮತ್ತು 21 ರಂದು ಹಜರತ್ ನಿಜಾಮುದ್ದೀನ್‌ನಿಂದ ಪ್ರಾರಂಭವಾಗುವ ರೈಲು ಸಂಖ್ಯೆ 12780 ಹಜರತ್ ನಿಜಾಮುದ್ದೀನ್ - ವಾಸ್ಕೋ ಡ- ಗಾಮಾ ಎಕ್ಸ್‌ಪ್ರೆಸ್ ರೈಲು ಮನ್ಮಾಡ, ಇಗತ್‌ಪುರಿ, ಕಲ್ಯಾಣ್, ಪನ್ವೆಲ್, ಕರ್ಜತ್, ಲೋನಾವಾಲಾ ಮತ್ತು ಪುಣೆ ನಿಲ್ದಾಣಗಳ ಮೂಲಕ ಸಂಚರಿಸಲಿದೆ.

ಜುಲೈ 20 ರಂದು ಯಶವಂತಪುರದಿಂದ ಪ್ರಾರಂಭವಾಗುವ ರೈಲು ಸಂಖ್ಯೆ 12629 ಯಶವಂತಪುರ- ಹಜರತ್ ನಿಜಾಮುದ್ದೀನ್ ಎಕ್ಸ್‌ಪ್ರೆಸ್ ರೈಲು ಲೋನಾವಾಲಾ, ಕರ್ಜತ್, ಪನ್ವೆಲ್, ಕಲ್ಯಾಣ್ ಮತ್ತು ಮನ್ಮಾಡ ನಿಲ್ದಾಣಗಳ ಮೂಲಕ ಸಂಚರಿಸಲಿದೆ.

ಜುಲೈ 21 ರಂದು ಹುಬ್ಬಳ್ಳಿಯಿಂದ ಪ್ರಾರಂಭವಾಗುವ ರೈಲು ಸಂಖ್ಯೆ 20657 ಹುಬ್ಬಳ್ಳಿ – ಹಜರತ್ ನಿಜಾಮುದ್ದೀನ್ ಎಕ್ಸ್‌ಪ್ರೆಸ್ ರೈಲು ಪುಣೆ, ಲೋನಾವಾಲಾ, ಕರ್ಜತ್, ಪನ್ವೆಲ್, ಕಲ್ಯಾಣ್, ಇಗತ್‌ಪುರಿ ಮತ್ತು ಮನ್ಮಾಡ ನಿಲ್ದಾಣಗಳ ಮೂಲಕ ಸಂಚರಿಸಲಿದೆ.

**➥ ರೈಲು ನಿಯಂತ್ರಣ :** ಜುಲೈ 20 ಮತ್ತು 21 ರಂದು ನವ ದೆಹಲಿಯಿಂದ ಪ್ರಾರಂಭವಾಗುವ ರೈಲು ಸಂಖ್ಯೆ 12628 ನವ ದೆಹಲಿ – ಕೆ.ಎಸ್. ಆರ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲನ್ನು ಕೇಂದ್ರ ರೈಲ್ವೆ ವ್ಯಾಪ್ತಿಯಲ್ಲಿ 55 ನಿಮಿಷ ಕಾಲ ನಿಯಂತ್ರಿಸಲಾಗುತ್ತಿದೆ.

**➥ ರೈಲುಗಳ ಸಮಯ ವಿಸ್ತರಣೆ :** ಈ ಕೆಳಗಿನ ಕೆಲವು ರೈಲುಗಳ ನಿಲುಗಡೆಯ ಸಮಯವನ್ನು ಹೆಚ್ಚಿಸಲು ದಕ್ಷಿಣ ರೈಲ್ವೆಯು ನಿರ್ಧರಿಸಿದೆ.

ಜುಲೈ 20 ರಿಂದ ಕೊಯಮತ್ತೂರು ರೈಲು ಸಂಖ್ಯೆ 11014 ಕೊಯಮತ್ತೂರು - ಲೋಕಮಾನ್ಯ ತಿಲಕ್ ಟರ್ಮಿನಸ್ ಎಕ್ಸ್‌ಪ್ರೆಸ್ ರೈಲು ತಿರುಪ್ಪೂರ್ ನಿಲ್ದಾಣದ ನಿಲುಗಡೆ ಸಮಯವನ್ನು 3 ನಿಮಿಷ ಕಾಲ ಹೆಚ್ಚಿಸಲಾಗುತ್ತಿದೆ. ಈ ರೈಲು 09:33/09:35AM ಬದಲು 09:30/09:35AM ಗೆ ಆಗಮಿಸಿ/ನಿರ್ಗಮಿಸಲಿದೆ.

ಜುಲೈ 20 ರಿಂದ ತಿರುನೆಲ್ವೇಲಿ ನಿಲ್ದಾಣದಿಂದ ಪ್ರಾರಂಭಿಸುವ ರೈಲು ಸಂಖ್ಯೆ 11022 ತಿರುನೆಲ್ವೇಲಿ - ದಾದರ್ ಎಕ್ಸ್‌ಪ್ರೆಸ್‌ನ ರೈಲು ಕರೂರ್ ನಿಲ್ದಾಣದ ನಿಲುಗಡೆ ಸಮಯವನ್ನು 3 ನಿಮಿಷ ಕಾಲ ಹೆಚ್ಚಿಸಲಾಗುತ್ತಿದೆ. ಈ ರೈಲು 08:08/08:10PM ಬದಲು 08:05/08:10PMಗೆ ಆಗಮಿಸಿ/ ನಿರ್ಗಮಿಸಲಿದೆ.

ಜುಲೈ 20 ರಿಂದ ಕನ್ಯಾಕುಮಾರಿ ನಿಲ್ದಾಣದಿಂದ ಪ್ರಾರಂಭಿಸುವ ರೈಲು ಸಂಖ್ಯೆ 16525 ಕನ್ಯಾಕುಮಾರಿ – ಕೆ.ಎಸ್.ಆರ್ ಬೆಂಗಳೂರು ಎಕ್ಸ್‌ಪ್ರೆಸ್‌ನ ರೈಲು ಕೊಟ್ಟಾಯಂ ನಿಲ್ದಾಣದ ನಿಲುಗಡೆ ಸಮಯವನ್ನು 2 ನಿಮಿಷ ಕಾಲ ಹೆಚ್ಚಿಸಲಾಗುತ್ತಿದೆ. ಈ ರೈಲು 04:20/04:23PM ಬದಲು 04:20/04:25PM ಗೆ ಆಗಮಿಸಿ/ ನಿರ್ಗಮಿಸಲಿದೆ.

**➥ ನಿಲುಗಡೆ ಅವಧಿಯ ವಿಸ್ತರಣೆ :** ರೈಲುಗಳ ಸಂಖ್ಯೆ 16209/16210 ಮೈಸೂರು - ಅಜ್ಮೀರ್ - ಮೈಸೂರು ಎಕ್ಸ್‌ಪ್ರೆಸ್ ರೈಲುಗಳನ್ನು ಪಾಲ್ಘರ್ ನಿಲ್ದಾಣದ ಪ್ರಾಯೋಗಿಕ ನಿಲುಗಡೆಯನ್ನು ಆರು ತಿಂಗಳವರೆಗೆ ಈ ಹಿಂದೆ ಮಾರ್ಚ್ 31 ರಿಂದ ಜಾರಿಗೆ ಬರುವಂತೆ ಸೂಚಿಸಲಾಗಿತ್ತು.

ಈ ನಿಲುಗಡೆ ಅವಧಿಯನ್ನು ಮುಂದಿನ ಆದೇಶ ಬರುವರೆಗೂ ವಿಸ್ತರಿಸಲಾಗುತ್ತಿದೆ.

# ಶ್ರೀ ಶಿವಾನಂದತೀರ್ಥರ ಜಯಂತ್ಯೋತ್ಸವ



ದಾವಣಗೆರೆ, ಜು. 18 - ನಗರದ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಅಧ್ಯಾತ್ಮ ಮಂದಿರದಲ್ಲಿ ಶ್ರೀ ಶಿವಾನಂದ ತೀರ್ಥ ಗುರುಗಳವರ ಜಯಂತ್ಯೋತ್ಸವವು ಸಾಂಪ್ರದಾಯಿಕ ಶ್ರದ್ಧಾಭಕ್ತಿಗಳಿಂದ ನೆರವೇರಿತು. ಗುರುಗಳ ತೊಟ್ಟಿಲ ಸೇವೆಯಲ್ಲಿ ಅಧ್ಯಾತ್ಮ ಮಂದಿರದ ಅಧ್ಯಕ್ಷ ಆರ್. ಎಸ್. ನಾರಾಯಣಸ್ವಾಮಿ, ಉಪಾಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್, ಕಾರ್ಯದರ್ಶಿಗಳಾದ ಶ್ರೀಧರ ಶೆಟ್ರು, ಆರ್. ಎಲ್. ಬದ್ರಿ, ದತ್ತಾತ್ರೇಯ, ಶ್ರೀಮತಿಯರಾದ ವೈದೇಹಿ, ಗೀತಾಶ್ರೀಧರ್, ಆರ್ ಹೆಚ್ ಶಿವರತ್ನ, ನಂದಿನಿ, ನಯನ, ಪದ್ಮ, ಗಿರಿಜಾ, ಸೃಜನ ಮುಂತಾದವರು ಭಾಗವಹಿಸಿದ್ದರು. ದಿ. ಸಿ.ವಿ. ಸುನಂದಮ್ಮ, ದಿ. ಬ್ಯಾಡಗಿ ಜಯಲಕ್ಷ್ಮಮ್ಮ ವಿರೂಪಾಕ್ಷಪ್ಪ ಶ್ರೇಷ್ಠಿ, ರಾಜನಹಳ್ಳಿ ಕಾಂತ ಲಕ್ಷ್ಮಮ್ಮ ಹಾಗೂ ರಾಜನಹಳ್ಳಿ ಹರಿಹರಪ್ಪ ಟ್ರಸ್ಟ್ ವತಿಯಿಂದ ಕಾರ್ಯಕ್ರಮ ಏರ್ಪಾಡಾಗಿತ್ತು.

## 'ಹರಿಹರ ಶ್ರೀ' ಪ್ರಶಸ್ತಿಗಾಗಿ ಕವನ ಸಂಕಲನ ಆಹ್ವಾನ

ಹರಿಹರ, ಜು, 18 - ಇಲ್ಲಿನ ಸಾಹಿತ್ಯ ಸಂಗಮ ಸಂಸ್ಥೆಯಿಂದ ಕೊಡ ಮಾಡುವ ಹರಿಹರಶ್ರೀ ಪ್ರಶಸ್ತಿಗಾಗಿ 2021 ಹಾಗೂ 2022 ನೇ ಸಾಲಿನಲ್ಲಿ ಪ್ರಕಟಣೆಯಾದ ಕವನ ಸಂಕಲನಗಳಿಗೆ ಪ್ರತ್ಯೇಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ಆಗಸ್ಟ್ 10 ರೊಳಗಾಗಿ ಕವನ ಸಂಕಲನ ಕಳಿಸಬೇಕಿದೆ. ವಿವರಗಳಿಗಾಗಿ ಸಂಸ್ಥೆಯ ಅಧ್ಯಕ್ಷ ವಿ.ಬಿ. ಕೊಟ್ರೇಶಪ್ಪ (9844969723), ಕಾರ್ಯದರ್ಶಿ ಎನ್.ಇ. ಸುರೇಶ್ (7795120617) ಅವರನ್ನು ಸಂಪರ್ಕಿಸಬಹುದು.

# ದೇವಾಂಗ ಸಂಘದಿಂದ ಪ್ರತಿಭಾ ಪುರಸ್ಕಾರ



ದಾವಣಗೆರೆ, ಜು. 18- ನಗರದ ದೇವಾಂಗ ಸಂಘದ ವತಿಯಿಂದ ಎಸ್ಸೆಸ್ಸೆಲ್ಸಿಯಲ್ಲಿ ಶೇ. 85 ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ 5ನೇ ವರ್ಷದ ದೇವಾಂಗ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಸ್ಥಳೀಯ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಯಾದಗಿರಿ ಜಿಲ್ಲೆಯ ಶ್ರೀ ಕ್ಷೇತ್ರ ಮುದನೂರು ಮಹಾಸಂಸ್ಥಾನ ಮಠದ ಡಾ. ಈಶ್ವರನಾಂದ ಸ್ವಾಮೀಜಿಯವರು ನೀವು ಉತ್ತಮ ವಿದ್ಯಾಭ್ಯಾಸ ಮಾಡುವುದರಿಂದ ಮುಂಬರುವ ದಿನಗಳಲ್ಲಿ ಸಮಾಜಕ್ಕೆ ಉತ್ತಮ ಪ್ರಜೆಗಳಾಗಿ ಜೀವನದಲ್ಲಿ ಉತ್ತಮ ಸ್ಥಾನ ಪಡೆಯಲಿದ್ದೀರಿ ಎಂದು ತಿಳಿಸಿದರು.

ಜಿಲ್ಲಾ ದೇವಾಂಗ ಸಂಘದ ಗೌರವಾಧ್ಯಕ್ಷ ಡಾ. ಎಸ್. ರಂಗನಾಥ್, ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಟಿ. ಅಂಬಣ್ಣ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಗರ ದೇವಾಂಗ ಸಂಘದ ಅಧ್ಯಕ್ಷ ಟಿ. ಅಜ್ಜೇಶಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ದೇವಾಂಗ ವಿದ್ಯಾರ್ಥಿ ನಿಲಯದ ಅಧ್ಯಕ್ಷ ಎಂ.ಹೆಚ್. ಕೃಷ್ಣಮೂರ್ತಿ, ಸಹಾಯಕ ಔಷಧ ನಿಯಂತ್ರಣ ಅಧಿಕಾರಿ ಸಿ.ಹೆಚ್. ಗಿರೀಶ್, ಎಸ್. ಜಿ. ಪುನೀತ್ ಶಂಕರ, ಮಹಾನಗರ ಪಾಲಿಕೆ ಸದಸ್ಯ ಎಲ್. ಡಿ. ಗೋಣೆಪ್ಪ ಆಗಮಿಸಿದ್ದರು.

ಗೌರವಾಧ್ಯಕ್ಷ ಜಿ.ಹೆಚ್. ರಾಘವೇಂದ್ರ, ಗೌರವ ಸಲಹೆಗಾರರಾದ ವೆಂಕಟೇಶ್ ಕೆ., ಉಪಾಧ್ಯಕ್ಷ ಬಿ.ಎನ್. ಬಾಬು, ಖಜಾಂಚಿ ಎಸ್.ಡಿ. ರಂಗನಾಥ, ನಿರ್ದೇಶಕರುಗಳಾದ ಗಿರಿರಾಜ್, ಎಸ್. ಮಾಲತೇಶ್, ಹೆಚ್.ಡಿ. ಶ್ರೀನಿವಾಸ್ ಅವರುಗಳು ನಿರೂಪಿಸಿದರು.

# ದೇವಸ್ಥಾನದಲ್ಲಿ ಗಂಟೆ ಹೊಡೆಯಲು ಸಿದ್ಧ

## ದಿನೇಶ್ ಶೆಟ್ಟಿ ಸವಾಲು ಸ್ವೀಕರಿಸಿದ್ದೇನೆ: ಯಶವಂತರಾವ್ ಜಾಧವ್

ದಾವಣಗೆರೆ, ಜು. 18- ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ನನ್ನ ಮೇಲೆ ಆರೋಪ ಮಾಡಿರುವ ದಿನೇಶ್ ಶೆಟ್ಟಿ ಅವರ ಸವಾಲನ್ನು ಗಂಭೀರವಾಗಿ ಸ್ವೀಕರಿಸಿದ್ದೇವೆ. 'ಅವರು ಹೇಳಿರುವುದು ಸುಳ್ಳು, ನಾನು ಯಾರಿಂದಲೂ ಲಂಚ ಪಡೆದಿಲ್ಲ' ಎಂದು ದುರ್ಗಾಂಬಿಕಾ ದೇವಸ್ಥಾನದಲ್ಲಿ ಗಂಟೆ ಹೊಡೆಯಲು ಸಂಸದರು ಹಾಗೂ ನಾನು ಸಿದ್ಧರಿದ್ದೇವೆ ಎಂದು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತ ನಾಡಿದ ಅವರು, ಮೊದಲು ನಾವೇ ಗಂಟೆ ಹೊಡೆಯಲು ಸಿದ್ಧರಿದ್ದೇವೆ. ದಿನಾಂಕ ಹಾಗೂ ಸಮಯ ಅವರೇ ನಿರ್ಧರಿಸಲಿ. ಅಂದು ಶಿವಶಂಕರಪ್ಪ ಹಾಗೂ ಎಸ್. ಎಸ್. ಮಲ್ಲಿಕಾರ್ಜುನ್ ಇಬ್ಬರೂ ಬರಬೇಕು ಎಂದರು. ನಾನು ಶಾಮನೂರು ಕುಟುಂಬದವರ ಮೇಲೆ ದಾಖಲೆ ಸಹಿತ ಆರೋಪ ಮಾಡಿದ್ದೆ. ಈ ಆರೋಪ ಸುಳ್ಳು ಎಂದು ಶಿವಶಂಕರಪ್ಪ ಹಾಗೂ ಮಲ್ಲಿಕಾರ್ಜುನ್ ಸಹ ಗಂಟೆ ಹೊಡೆಯಲಿ ಎಂದು ಹೇಳಿದರು.

ಈ ಹಿಂದೆ ನಾನು ಸಾಕ್ಷಿ ಸಹಿತ ರುಜುವಾತು ಮಾಡಲು ಪಾಲಿಕೆ ಆವರಣದ ರಂಗಮಂದಿರದಲ್ಲಿ ಅರ್ಧ ದಿನ ಕಾದಿದ್ದರೂ ಸಹ ಶಾಮನೂರು ಕುಟುಂಬದವರು ಅಥವಾ ಕಾಂಗ್ರೆಸ್‌ನ ಒಬ್ಬ ಪಾಲಿಕೆ ಸದಸ್ಯನೂ ಬರಲಿಲ್ಲವೇಕೆ? ಎಂದು ಪ್ರಶ್ನಿಸಿದ ಜಾಧವ್, ಮೊದಲು ಶಾಮನೂರು ಕುಟುಂಬದವರ ಕಡೆಯಿಂದ ದಿನೇಶ್ ಶೆಟ್ಟಿ ಗಂಟೆ ಹೊಡೆಸುವ ಕೆಲಸ ಮಾಡಲಿ ಎಂದರು.


ನನ್ನ ಮೇಲೆ ಆರೋಪ ಮಾಡಿರುವ ದಿನೇಶ್ ಶೆಟ್ಟಿ ಪಾಲಿಕೆ ಸದಸ್ಯರಾಗಿದ್ದಾಗ ಪಿ.ಜೆ. ಬಡಾವಣೆಯ ಫುಟ್‌ಪಾತ್ ಅಂಗಡಿಗಳಿಂದ ಚಂದಾ ವಸೂಲಿ ಮಾಡಿದ್ದರು. ಚಂದಾ ಕೊಟ್ಟಿರುವ ಅಂಗಡಿಯವರು ಈ ಬಗ್ಗೆ ಬಹಿರಂಗ ಹೇಳಿಕೆ ನೀಡಲು ಸಿದ್ಧರಿದ್ದಾರೆ. ಈ ಬಗ್ಗೆ ಶೆಟ್ಟಿ ಗಂಟೆ ಹೊಡೆಯಲು ಸಿದ್ಧರಿದ್ದಾರೆಯೇ? ಎಂದು ಪ್ರಶ್ನಿಸಿದರು.

ನಗರ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದರೂ, ಟಿವಿ ಸ್ಟೇಷನ್ ಕೆರೆಯಿಂದ ಎಸ್. ಎಸ್. ಹೈಟೆಕ್ ಆಸ್ಪತ್ರೆಗೆ ನೀರು ತೆಗೆದುಕೊಂಡು ಹೋಗುವ ಮೂಲಕ ಹಗಲು ದರೋಡೆ ಮಾಡಲಾಗುತ್ತಿದೆ ಎಂದು ಇದೇ ವೇಳೆ ಜಾಧವ್ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಲೋಕಿಕೆರೆ ನಾಗರಾಜ್, ಕೊಂಡಜ್ಜಿ ಜಯಪ್ರಕಾಶ್, ರಾಜನಹಳ್ಳಿ ಶಿವಕುಮಾರ್, ಸೋಗಿ ಶಾಂತಕುಮಾರ್, ಪಿ.ಸಿ. ಶ್ರೀನಿವಾಸ್, ನಜೀರ್ ಅಹ್ಮದ್, ರಮೇಶ್ ನಾಯ್ಕ, ಕಿಶೋರ್ ಕುಮಾರ್ ಇತರರು ಉಪಸ್ಥಿತರಿದ್ದರು.

# ಬರ ಘೋಷಣೆ ಮಾಡಿ

## ಪ್ರತಿ ಕ್ಷೇತ್ರಕ್ಕೂ ಕೋಟಿ ರೂ. ಅನುದಾನ ಕೊಡಿ : ಬೊಮ್ಮಾಯಿ ಆಗ್ರಹ



ಬೆಂಗಳೂರು, ಜು.18 - ರಾಜ್ಯದಲ್ಲಿ ಮಳೆ ಅಭಾವ ಉಂಟಾಗಿ ರೈತರು ಬಿತ್ತಿದ ಬೀಜ ಮೊಳಕೆಯೊಡೆದಿಲ್ಲ. ಬರಗಾಲ ಘೋಷಣೆ ಮಾಡಿ, ಪ್ರತಿ ಕ್ಷೇತ್ರಕ್ಕೂ ಒಂದು ಕೋಟಿ ರೂ.ಅನುದಾನ ನೀಡಬೇಕು ಎಂದು ರಾಜ್ಯ ಸರ್ಕಾರವನ್ನು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ವಿಧಾನಸಭೆಯಲ್ಲಿ ನಿಲುವಳಿ ಸೂಚನೆ ಮೇಲೆ ಪ್ರಾಸ್ತಾವಿಕ ಮಾತನಾಡಿದ ಅವರು, ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಸೇರಿ ಹಲವೆಡೆ ಮಳೆಯ ಅಭಾವ ಉಂಟಾಗಿದೆ ಎಂದರು. ನಿಗದಿತ ಸಮಯಕ್ಕೂ ಮಳೆ ಬಂದಿಲ್ಲ. ಮಳೆ ಬಾರದ ಕಾರಣ ರೈತರು ಬಿತ್ತನೆ ಬೀಜಗಳನ್ನು ಹಾಕಿಲ್ಲ. ಜುಲೈ ಅಂತ್ಯದಲ್ಲಿ ಸ್ವಲ್ಪ ಮಳೆಯಾಗಿದೆ. ಆದರೂ ಎಲ್ಲ ಕಡೆಯೂ ಮಳೆಯಾಗಿಲ್ಲ. ಬಹಳಷ್ಟು ಜನರು ಮೊದಲ ಸಾರಿ ಬಿತ್ತನೆ ಮಾಡಿದ್ದಾರೆ. ನಂತರ ಎರಡನೇ ಬಾರಿಗೂ ಬಿತ್ತನೆ ಮಾಡಿದ್ದಾರೆ. ಮೊಳಕೆ ಬಂದಿಲ್ಲ. ಇದುವರೆಗೂ 7 ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಬೇಕಿತ್ತು. ಆದರೆ ಮಳೆ ಇಲ್ಲದೇ ಬರೀ 1 ಲಕ್ಷ ಹೆಕ್ಟೇರ್ ನಲ್ಲಿ ಮಾತ್ರ ಬಿತ್ತನೆ ಮಾಡಲಾಗಿದೆ. ಸರ್ಕಾರ ಇದನ್ನು ಬರಗಾಲ ಎಂದು ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಕುಡಿಯುವ ನೀರಿಗಾಗಿ ಸರ್ಕಾರ ಸಿಇಒ ಗಳಿಗೆ ಕೊಟ್ಟ ಹಣ ಸಾಲುವುದಿಲ್ಲ. ಪ್ರತಿ ಕ್ಷೇತ್ರಗಳಿಗೂ ಒಂದೊಂದು ಕೋಟಿ ಅನುದಾನ ಕೊಡಬೇಕು ಎಂದರು.

ರೈತರ ಆತ್ಮಹತ್ಯೆ ಬಗ್ಗೆ ಕೃಷಿ ಸಚಿವರು ಲಘುವಾಗಿ ಮಾತನಾಡಿದ್ದಾರೆ. ಹಿಂದಿನ ವರ್ಷ ರೈತರ ಸಾವು ಇಷ್ಟಾಯಿತು, ಅಷ್ಟಾಯಿತು ಅನ್ನುವುದು ಸರಿಯಲ್ಲ. ಅಂಕಿ-ಅಂಶಗಳ ಮೂಲಕ ರೈತರ ಆತ್ಮಹತ್ಯೆ ಬಗ್ಗೆ ಮಾತನಾಡುವುದು ಸರೀನಾ? ನಿರ್ಲಕ್ಷ್ಯವಾಗಿ, ಬೇಜವಾಬ್ದಾರಿಯ ಹೇಳಿಕೆ ಸರಿಯಲ್ಲ. ಇದರ ಬಗ್ಗೆ ಸದನದಲ್ಲಿ ಚರ್ಚೆಗೆ ಅವಕಾಶ ಕೊಡುವಂತೆ ಆಗ್ರಹಿಸಿದರು.

## ಕುರಿ, ಮೇಕೆ ಸಾಕಾಣಿಕೆ ತರಬೇತಿ ಶಿಬಿರ

ದಾವಣಗೆರೆ, ಜು.18- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ನಾಡಿದ್ದು ದಿನಾಂಕ 20 ಮತ್ತು 21 ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯನ್ನು ಆಯೋಜಿಸಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

## 21ರಂದು ನಗರದಲ್ಲಿ ಉದ್ಯೋಗ ಮೇಳ

ದಾವಣಗೆರೆ, ಜು.18- ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಾದರಿ ವೃತ್ತಿ ಕೇಂದ್ರದ ವತಿಯಿಂದ ಇದೇ ದಿನಾಂಕ 21 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾಡಳಿತ ಭವನದ ಕೊಠಡಿ ಸಂಖ್ಯೆ 51 ರ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ.

ಉದ್ಯೋಗ ಮೇಳದಲ್ಲಿ ಹಲವು ಖಾಸಗಿ ಕಂಪನಿಗಳು ಭಾಗವಹಿಸುತ್ತಿದ್ದು, ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಬಿ.ಎಸ್ಸಿ (ನರ್ಸಿಂಗ್) ಎ.ಎನ್.ಎಮ್, ಜಿ.ಎನ್.ಎಮ್ ಹಾಗೂ ಪದವಿ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗುವುದು.

ಆಸಕ್ತ ಅಭ್ಯರ್ಥಿಗಳು ನಿಗದಿತ ಸಮಯಕ್ಕೆ ಕನಿಷ್ಟ 10 ಸೆಟ್ ಬಯೋಡಾಟಾ ಮತ್ತು ಆಧಾರ್ ಕಾರ್ಡ್‌ನೊಂದಿಗೆ ಜಿಲ್ಲಾ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ : 08192-259446, ಮೊಬೈಲ್ 6361550016 ಗೆ ಸಂಪರ್ಕಿಸಲು ಜಿಲ್ಲಾ ಉದ್ಯೋಗಾಧಿಕಾರಿ ರವೀಂದ್ರ ಡಿ ತಿಳಿಸಿದ್ದಾರೆ.

## ವಿದ್ಯಾರ್ಥಿ ನಿಲಯಕ್ಕೆ ಅರ್ಜಿ

ದಾವಣಗೆರೆ, ಜು.18- ನಗರದಲ್ಲಿರುವ ದೇವಾಂಗ ವಿದ್ಯಾರ್ಥಿ ನಿಲಯಕ್ಕೆ ಉಚಿತ ವಸತಿ ಮತ್ತು ವ್ಯಾಸಂಗಕ್ಕಾಗಿ ಪ್ರಸಕ್ತ ಸಾಲಿಗೆ ಅರ್ಜಿ ಆಹ್ವಾನಿಸಲಾಗಿದೆ.

ವೈದ್ಯಕೀಯ, ಇಂಜಿನಿಯರಿಂಗ್, ಪದವೀಧರ, ಬಿ.ಪಿಇಡಿ, ನರ್ಸಿಂಗ್, ಪಿಯುಸಿ ಇತರೆ ಎಲ್ಲಾ ರೀತಿಯ ಶಿಕ್ಷಣ ವ್ಯವಸ್ಥೆ ಇರುವುದರಿಂದ ಉತ್ತಮ ಕೋರ್ಸ್ ಗಳನ್ನು ಮಾಡಲು ಅನುಕೂಲವಿ ರುವುದರಿಂದ ಉಚಿತ ವಸತಿಗಾಗಿ ಅರ್ಜಿಗಳನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗೆ ವಿದ್ಯಾರ್ಥಿ ನಿಲಯದ ಅಧ್ಯಕ್ಷ ಎಂ.ಹೆಚ್. ಕೃಷ್ಣಮೂರ್ತಿ (8618106178), ಕಾರ್ಯದರ್ಶಿ ಏಕಾಂಬರಪ್ಪ (9448812703) ಅವರನ್ನು ಸಂಪರ್ಕಿಸಬಹುದಾಗಿದೆ.

## ನಗರದಲ್ಲಿ ಇಂದು ಶಾಲೆಗಳ ಗುಣಾತ್ಮಕತೆ ಕುರಿತು ಕಾರ್ಯಾಗಾರ

ದಾವಣಗೆರೆ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಆಶ್ರಯದಲ್ಲಿ ಡಯಟ್‌ನಲ್ಲಿ ಶಾಲೆಗಳ ಗುಣಾತ್ಮಕತೆ ಕುರಿತು ಕಾರ್ಯಾಗಾರವು ಇಂದು ನಡೆಯಲಿದೆ. ನಿವೃತ್ತ ಜಂಟಿ ನಿರ್ದೇಶಕ ಹೆಚ್.ಕೆ. ಲಿಂಗರಾಜು ಗುಣಾತ್ಮಕ ಶಿಕ್ಷಣ ಕುರಿತು ಉಪನ್ಯಾಸ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ಹೆಚ್.ಕೆ. ಲಿಂಗರಾಜು ರಚಿಸಿರುವ 'ನಹಿ ಜ್ಞಾನೇನ ಸದೃಶಂ' ಕಿರು ಪುಸ್ತಕ ಬಿಡುಗಡೆ ಮಾಡಲಾಗುವುದು.

## ಸೋನಿಯಾ, ರಾಹುಲ್ ಇದ್ದ ವಿಮಾನ ತುರ್ತು ಭೂಸ್ಪರ್ಷ

ನವದೆಹಲಿ, ಜು. 18 - ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿದ್ದ ವಿಮಾನ ಮಧ್ಯ ಪ್ರದೇಶದ ಭೂಪಾಲದಲ್ಲಿ ತುರ್ತು ಭೂಸ್ಪರ್ಷ ಮಾಡಿದೆ.

ಹವಾಮಾನ ವೈಪರೀತ್ಯದ ಕಾರಣದಿಂದಾಗಿ ವಿಮಾನ ತುರ್ತು ಭೂಸ್ಪರ್ಷ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ನಡೆದ ಪ್ರತಿಪಕ್ಷಗಳ ಸಭೆಯಲ್ಲಿ ಉಭಯ ನಾಯಕರು ಪಾಲ್ಗೊಂಡಿದ್ದರು. ಸಭೆಯ ನಂತರ ದೆಹಲಿಗೆ ಮರಳುವಾಗ ಈ ಘಟನೆ ನಡೆದಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ


ನಿಟ್ಟುವಳ್ಳಿ, ಶ್ರೀ ರಾಮ್ ಬಡಾವಣೆ, ಡಿಸಿಎಂ ಟೌನ್‌ಶಿಪ್, ಜಯನಗರ 'ಸಿ' ಬ್ಲಾಕ್, ಶಕ್ತಿನಗರ, ಎಸ್.ಎಸ್. ಹೈಟೆಕ್ ಲೇಔಟ್, ಭೂಮಿಕಾ ನಗರ, ಅಂಬಿಕಾ ಬಡಾವಣೆ, ಭಗತ್‌ಸಿಂಗ್ ನಗರ, ಕೊಟ್ಟೂರೇಶ್ವರ ಬಡಾವಣೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು ಎಂ.ಸಿ.ಸಿ 'ಎ' ಬ್ಲಾಕ್ 2, 3, 4, 5ನೇ ಕ್ರಾಸ್ ಮತ್ತು ಸೂಪರ್ ಮಾರ್ಕೆಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಪಾಲಿಕೆಯಿಂದ ಕಚೇರಿ ಹಸ್ತಾಂತರ

ದಾವಣಗೆರೆ,ಜು.18- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆ ಜಿಲ್ಲಾ ಘಟಕದ ಪತ್ರಿಕಾ ಭವನಕ್ಕೆ ಮಹಾನಗರ ಪಾಲಿಕೆಯು ನಗರ ಪಾಲಿಕೆ ಆವರಣದಲ್ಲಿ ಕಟ್ಟಡವೊಂದನ್ನು ನೀಡಿದೆ.

ಪಾಲಿಕೆ ಆವರಣದಲ್ಲಿದ್ದ ಈ ಸಂಘಕ್ಕೆ ಸೇರಿದ ಪತ್ರಿಕಾ ಭವನಕ್ಕೆ ಪರ್ಯಾಯವಾಗಿ ರಂಗ ಮಂದಿರದ ಪಕ್ಕದಲ್ಲಿ ಕಟ್ಟಡವನ್ನು ಕೊಡಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ತಿಳಿಸಿದ್ದಾರೆ.





ಮಹಾನಗರ ಪಾಲಿಕೆಯು ಈ ಹಿಂದೆ ನಗರಸಭೆ ಇದ್ದ ಸಂದರ್ಭದಲ್ಲಿ ತಮ್ಮ ಸಂಘಕ್ಕೆ ಪತ್ರಿಕಾ ಭವನವನ್ನು ನಿರ್ಮಿಸಿಕೊಟ್ಟಿತ್ತು. ಅದನ್ನು 1996ರಲ್ಲಿ ಅಂದಿನ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಅಧ್ಯಕ್ಷತೆಯಲ್ಲಿ ಅಂದಿನ ಮುಖ್ಯಮಂತ್ರಿ ಹೆಚ್.ಡಿ. ದೇವೇಗೌಡ ಅವರು ಉದ್ಘಾಟಿಸಿದ್ದರು. ನಂತರದ ದಿನಗಳಲ್ಲಿ ಕಾರಣಾಂತರಗಳಿಂದ ಆ ಕಚೇರಿ ಕೈಬಿಟ್ಟು ಹೋಗಿತ್ತು. ಅದನ್ನೀಗ ತಮ್ಮ ಸಂಘದ ವಶಕ್ಕೊಪ್ಪಿಸುವಂತೆ ಮಾಡಿಕೊಂಡಿದ್ದ ಮನವಿಯನ್ನು ಪುರಸ್ಕರಿಸಿ ನಗರಪಾಲಿಕೆಯು ಪರ್ಯಾಯ ಕಟ್ಟಡವನ್ನು ನೀಡಿದೆ ಎಂದು ಅವರು ವಿವರಿಸಿದ್ದಾರೆ.

ಪಾಲಿಕೆ ಮಹಾಪೌರರಾದ ವಿನಾಯಕ ಪೈಲ್ವಾನ್ ಅವರು ಕಟ್ಟಡದ ಬೀಗದ ಕೈಯನ್ನು ಹಾಗೂ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಅವರು ಆದೇಶದ ಪ್ರತಿಯನ್ನು ಸಂಘದ ಅಧ್ಯಕ್ಷ ಮಂಜುನಾಥ ಅವರಿಗೆ ಇಂದು ಹಸ್ತಾಂತರಿಸಿದರು.

ತಮ್ಮ ಸಂಘದ ಮನವಿಯನ್ನು ಪುರಸ್ಕರಿಸಿ ಕಟ್ಟಡವನ್ನು ನೀಡಿದ ಮೇಯರ್ ಮತ್ತು ಆಯುಕ್ತರಿಗೆ ಸಂಘದ ಪ್ರಧಾನ ಕಾರ್ಯದರ್ಶಿ ಎ. ಫಕ್ರುದ್ದೀನ್ ಅವರು ಕೃತಜ್ಞತೆ ಸಲ್ಲಿಸಿದರು.

ಸಂಘದ ಖಜಾಂಚಿ ಎನ್.ವಿ. ಬದರಿನಾಥ್, ಉಪಾಧ್ಯಕ್ಷರುಗಳಾದ ಹೆಚ್. ಎನ್. ಪ್ರಕಾಶ್, ಆರ್.ಎಸ್. ತಿಪ್ಪೇಸ್ವಾಮಿ, ಕಾರ್ಯದರ್ಶಿಗಳಾದ ಜೆ.ಎಸ್.ವೀರೇಶ್, ನಿಂಗೋಜಿರಾವ್, ನಿರ್ದೇಶಕರುಗಳಾದ ಸಿ. ವೇದಮೂರ್ತಿ, ಎನ್.ಆರ್. ರವಿ, ಬಿ.ಎಸ್. ಮುದ್ದಯ್ಯ, ಕೆ.ಸಿ. ಮಂಜುನಾಥ್, ಗುರುಮೂರ್ತಿ, ಎನ್. ಕೃಷ್ಣೋಜಿರಾವ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಇಂದು ಉದ್ಘಾಟನೆ :** ನಾಳೆ ದಿನಾಂಕ 19ರ ಬುಧವಾರ ಬೆಳಿಗ್ಗೆ 9.30ಕ್ಕೆ ಏರ್ಪಾಡಾಗಿರುವ ಸರಳ ಸಮಾರಂಭದಲ್ಲಿ ನೂತನ ಪತ್ರಿಕಾ ಭವನವನ್ನು ಸಂಘದ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಉದ್ಘಾಟಿಸುವರು. ಮಹಾನಗರ ಪಾಲಿಕೆ ಮಹಾಪೌರರಾದ ವಿನಾಯಕ ಪೈಲ್ವಾನ್ ಅವರು ನಾಮಫಲಕವನ್ನು ಅನಾವರಣಗೊಳಿಸುವರು. ಆಯುಕ್ತರಾದ ಶ್ರೀಮತಿ ರೇಣುಕಾ ಅವರು ಜ್ಯೋತಿ ಬೆಳಗಿಸುವರು.

ಪಾಲಿಕೆ ಉಪ ಮಹಾಪೌರರಾದ ಶ್ರೀಮತಿ ಯಶೋಧ, ಜಿಲ್ಲಾ ವಾರ್ತಾಧಿಕಾರಿ ಧನಂಜಯ್, ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ, ಪಾಲಿಕೆ ಸದಸ್ಯರುಗಳಾದ ಗಡಿಗುಡಾಳ್ ಮಂಜುನಾಥ್, ಎ. ನಾಗರಾಜ್, ಕೆ. ಚಮನ್ ಸಾಬ್, ಉದಯ ಕುಮಾರ್, ಎಸ್.ಟಿ. ವೀರೇಶ್, ಶ್ರೀಮತಿ ಸವಿತಾ ಹುಲ್ಲುಮನೆ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.


## ಸಾರ್ವಜನಿಕ ಪ್ರಕಟಣೆ

ನಾನು ನಾಗರಾಜ್ ಎಂ. ಬಿನ್ ತಿಪ್ಪಣ್ಣ ಬಸವೇಶ್ವರ ಬಡಾವಣೆ, ಕಕ್ಕರಗೊಳ್ಳ ಗ್ರಾಮ, ತಾಲ್ಲೂಕು ದಾವಣಗೆರೆ. ಈ ಮೂಲಕ ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ, ನಾನು ದಾವಣಗೆರೆ ವಾಸಿ ಇದ್ದು, ದಿನಾಂಕ : 15.02.2023 ರಂದು ಜೈನ್ ಲೇ ಔಟ್ ಮಧ್ಯ ಭಾಗದಲ್ಲಿ ಬರತಕ್ಕ ನಿವೇಶನ ಸಂಖ್ಯೆ 21 ಮತ್ತು 22ಗಳನ್ನು ಶುದ್ಧ ಕ್ರಯಕ್ಕೆ ತೆಗೆದುಕೊಂಡಿರುತ್ತೇನೆ, ಸದರಿ ನಿವೇಶನದ ಮೇಲೆ ಕೆನರಾ ಬ್ಯಾಂಕ್‌ನಲ್ಲಿ ಮನೆ ಕಟ್ಟಲು ಸಾಲವನ್ನು ಪಡೆದುಕೊಳ್ಳಲು ವಿಚಾರ-ವಿನಿಮಯ ಮಾಡಿ ನಿವೇಶನಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ನೀಡಿದ್ದೆನು, ಸದರಿ ಬ್ಯಾಂಕ್‌ನವರು ದಿನಾಂಕ : 14.04.1988ನೇ ಇಸವಿ ಮೂಲ ಕ್ರಯ ಪತ್ರವನ್ನು ತರಲು ತಿಳಿಸಿದ್ದರು.

ನಾನು ದಿನಾಂಕ : 30.06.2023 ರಂದು ರೈಲ್ವೆ ಸ್ಟೇಷನ್, ಬಿ.ಎಸ್.ಎನ್.ಎಲ್ ಹತ್ತಿರ ರಾಮನಗರಕ್ಕೆ ಹೋಗುವ ಪ್ಯಾಸೆಂಜರ್ ಆಟೋದಲ್ಲಿ ಹೋಗುವಾಗ ಮೂಲ ಕ್ರಯಪತ್ರವು ಕಳೆದುಹೋಗಿರುತ್ತದೆ, ಆದ್ದರಿಂದ ಸದರಿ ದಿನಾಂಕ : 14.04.1988ನೇ ಇಸವಿ ಮೂಲ ಕ್ರಯಪತ್ರವು ಸಿಕ್ಕಿದ್ದಲ್ಲಿ ನನ್ನ ವಿಳಾಸಕ್ಕೆ ತಲುಪಿಸಬೇಕಾಗಿ ಪ್ರಾರ್ಥನೆ.

**ಸ್ಥಳ : ದಾವಣಗೆರೆ** **ಸಹಿ/- ವಿಳಾಸ : ಎಂ. ನಾಗರಾಜ್ ಬಿನ್ ತಿಪ್ಪಣ್ಣ ಬಸವೇಶ್ವರ ಬಡಾವಣೆ,**
**ದಿನಾಂಕ : 19.07.2023** **ಕಕ್ಕರಗೊಳ್ಳ ಗ್ರಾಮ ತಾ||, ದಾವಣಗೆರೆ.**

## ತಿರುಪತಿ ತಿಮ್ಮಪ್ಪನಿಗೆ ಬಂಗಾರದ ಶಂಖ ನೀಡಿದ ನಾರಾಯಣಮೂರ್ತಿ ದಂಪತಿ



ಬೆಂಗಳೂರು, ಜು. 18 - ಇನ್ಫೋಸಿಸ್ ಸಂಸ್ಥೆ ಮುಖ್ಯಸ್ಥರಾದ ನಾರಾಯಣಮೂರ್ತಿ ಹಾಗೂ ಸುಧಾಮೂರ್ತಿ ದಂಪತಿ ತಿರುಪತಿ ಗಿರಿ ವಾಸನಾದ ಶಂಖಚಕ್ರಧಾರಿ ತಿಮ್ಮಪ್ಪನಿಗೆ ಬಂಗಾರದ ಶಂಖವನ್ನು ಕಾಣಿಕೆ ನೀಡಿದ್ದಾರೆ.

ಇನ್ಫೋಸಿಸ್ ಫೌಂಡೇಶನ್ ಮೂಲಕ ಸುಧಾಮೂರ್ತಿ ಅವರು ಸಾಕಷ್ಟು ಸಾಮಾಜಿಕ ಹಾಗೂ ಧಾರ್ಮಿಕ ಕೆಲಸಗಳನ್ನು ಮಾಡುತ್ತಾ ಬಂದಿದ್ದಾರೆ. ನಾರಾಯಣ ಮೂರ್ತಿ ಹಾಗೂ ಸುಧಾಮೂರ್ತಿ ದಂಪತಿ ಮೊದಲಿನಿಂದಲೂ ಸರಳ ಜೀವನ ನಡೆಸುತ್ತಾ ಅನೇಕರಿಗೆ ಮಾದರಿಯಾಗಿದ್ದಾರೆ. ಅವರ ದಾಂಪತ್ಯ ಜೀವನಕ್ಕೆ ಈಗ ನಲವತ್ತೈದು ವರ್ಷ. ಈ ನಲವತ್ತೈದು ವರ್ಷಗಳಲ್ಲಿ ತಮ್ಮ ಬಳಿಯಿದ್ದ ಕೆಲವೇ ಕೆಲವು ಆಭರಣಗಳಿಂದ ಈ ಬಂಗಾರದ ಶಂಖವನ್ನು ಮಾಡಿಸಿ ತಿಮ್ಮಪ್ಪನಿಗೆ ನೀಡಿದ್ದಾರೆ.

## ಎನ್‌ಡಿಎ ಪ್ರಾಂತೀಯ ಆಶಯ ಈಡೇರಿಸುತ್ತಿದೆ : ಪ್ರಧಾನಿ ಮೋದಿ



ನವದೆಹಲಿ, ಜು. 18 - ಎನ್.ಡಿ.ಎ. ಒಕ್ಕೂಟ ಸಮಯದ ಸವಾಲನ್ನು ಮೀರಿ ನಿಂತಿದೆ. ಈ ಒಕ್ಕೂಟ ಪ್ರಾಂತೀಯ ಆಶಯಗಳನ್ನು ಈಡೇರಿಸುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಎನ್.ಡಿ.ಎ. ಮಿತ್ರಪಕ್ಷಗಳ ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ದೇಶಾದ್ಯಂತದ ಎನ್.ಡಿ.ಎ. ಸಹಭಾಗಿಗಳು ಜೊತೆಯಾಗಿ ಸಭೆಯಲ್ಲಿ ಪಾಲ್ಗೊಂಡಿರುವುದು ಸಂತೋಷದ ವಿಷಯ ಎಂದಿದ್ದಾರೆ.

ಮೋದಿ ಸರ್ಕಾರದ ಎರಡನೇ ಅವಧಿಯಲ್ಲಿ ಎನ್.ಡಿ.ಎ. ಸಭೆ ನಡೆಸುತ್ತಿರುವುದು ಇದೇ ಮೊದಲು. ಬೆಂಗಳೂರಿನಲ್ಲಿ ವಿಪಕ್ಷಗಳ ಸಭೆ ನಡೆಯುವಾಗಲೇ ಎನ್.ಡಿ.ಎ. ಸಭೆ ನಡೆದಿದೆ.

## ಅಧಿವೇಶನ : ಇಂದು ಸರ್ವಪಕ್ಷಗಳ ಸಭೆ

ನವದೆಹಲಿ, ಜು. 18 - ಮುಂಬರುವ ಮುಂಗಾರು ಅಧಿವೇಶನದ ಹಿನ್ನೆಲೆಯಲ್ಲಿ ನಾಳೆ ಬುಧವಾರದಂದು ಸರ್ವಪಕ್ಷಗಳ ಸಭೆಯನ್ನು ಕರೆಯಲಾಗಿದೆ. ಜುಲೈ 20ರಿಂದ ಅಧಿವೇಶನ ಆರಂಭವಾಗಲಿದೆ.

ಅಧಿವೇಶನ ಆರಂಭವಾಗುವ ಮುನ್ನಾ ದಿನ ಸರ್ವಪಕ್ಷಗಳ ಸಭೆ ಕರೆಯುವುದು ಸಂಪ್ರದಾಯವಾಗಿದೆ. ಬಹುತೇಕ ಪ್ರತಿಪಕ್ಷಗಳು ಬೆಂಗಳೂರಿನ ಸಭೆಯಲ್ಲಿ ಪಾಲ್ಗೊಂಡಿದ್ದ ಕಾರಣ, ಮಂಗಳವಾರದಂದು ರಾಜ್ಯಸಭಾಧ್ಯಕ್ಷ ಜಗದೀಪ್ ಧನಕರ್ ಕರೆದಿದ್ದ ಸಭೆಯನ್ನು ಮುಂದೂಡಲಾಗಿತ್ತು.

## ಸಾಮಾಜಿಕ ಜಾಲತಾಣದ ಪೋಸ್ಟ್ : ಗುಜರಾತ್‌ನಲ್ಲಿ ಕೋಮು ಸಂಘರ್ಷ

ಪಟನ್, ಜು. 18 - ಸಾಮಾಜಿಕ ಜಾಲತಾಣವೊಂದರಲ್ಲಿ ಮಾಡಲಾದ ಪೋಸ್ಟ್ ನಂತರ ಗುಜರಾತಿನ ಪಟನ್ ಜಿಲ್ಲೆಯಲ್ಲಿ ಕೋಮು ಸಂಘರ್ಷ ಉಂಟಾಗಿದ್ದು, ಎಂಟು ಜನರಿಗೆ ಗಾಯಗಳಾಗಿವೆ. ಈ ಘಟನೆಗೆ ಸಂಬಂಧಿಸಿದಂತೆ ಹತ್ತು ಜನರನ್ನು ಬಂಧಿಸಲಾಗಿದೆ.

ಬಾಲಿವುಡ್ ಚಿತ್ರವಾದ 'ದಿ ಕೇರಳ ಸ್ಟೋರಿ'ಗೆ ಸಂಬಂಧಿಸಿದಂತೆ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದೇ ಈ ಘಟನೆಗೆ ಎನ್ನಲಾಗಿದೆ. ಎರಡು ಕೋಮುಗಳಿಗೆ ಸೇರಿದ ಜನರನ್ನು ಬಂಧಿಸಲಾಗಿದೆ.

## ರಾಣೇಬೆನ್ನೂರಿನಲ್ಲಿ ಗುಡ್ಡಾಪುರ ಶ್ರೀ ದಾನಮ್ಮದೇವಿ ಪುರಾಣ



ವಾಗೀಶ ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಅಧಿಕ ಮಾಸದ ನಿಮಿತ್ಯ ಗುಡ್ಡಾಪುರ ಶ್ರೀ ದಾನಮ್ಮದೇವಿಯ ಪುರಾಣವಿದೆ. ಇಂದಿನಿಂದ ಬರುವ ಆಗಸ್ಟ್ 15 ರವರೆಗೆ ನಡೆಯಲಿದೆ. ಪ್ರತಿದಿನ ಸಂಜೆ 6 ರಿಂದ ರಾತ್ರಿ 8 ರವರೆಗೆ ಪುರಾಣವನ್ನು ನೆಗಳೂರಿನ ಗದಿಗೆಯ್ಯ ಹಿರೇಮಠ ಶಾಸ್ತ್ರಿಗಳು ನಡೆಸಿ ಕೊಡುವರು.

## ಜ್ಯುವೆಲರಿ ಅಂಗಡಿಯಲ್ಲಿ ಕಳ್ಳತನ

ದಾವಣಗೆರೆ, ಜು. 18- ನಗರದ ಮಂಡಿಪೇಟೆಯ ಕುಮಾರ ಜ್ಯುವೆಲರ್ಸ್ ಅಂಗಡಿಗೆ ಗ್ರಾಹಕರ ಸೋಗಿನಲ್ಲಿ ಇಬ್ಬರು ಮಹಿಳೆಯರು 1.70 ಲಕ್ಷ ರೂ. ಮೌಲ್ಯದ ಕಿವಿ ಓಲೆ ಹಾಗೂ ಜುಮಕಿಯನ್ನು ಕಳ್ಳತನ ಮಾಡಿದ್ದಾರೆ.

ಕುಮಾರ ಜ್ಯುವೆಲರ್ಸ್ ವ್ಯವಸ್ಥಾಪಕ ಹರೀಶ್ ಈ ಕುರಿತು ಬಸವನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಆಭರಣಗಳ ಟ್ರೈ ಚೆಕ್ ಮಾಡುವಾಗ ಅನುಮಾನ ಬಂದು ನೋಡಿದಾಗ ಆಭರಣವನ್ನು ವಂಚಿಸಿ ತೆಗೆದುಕೊಂಡು ಹೋಗಿರುವುದು ಕಂಡು ಬಂದಿದೆ. ಈ ಬಗ್ಗೆ ಅಂಗಡಿ ಸಿಬ್ಬಂದಿಗಳನ್ನು ವಿಚಾರಿಸಿದಾಗ ದಿ.12ರಂದು 55 ಹಾಗೂ 35 ವರ್ಷದ ಇಬ್ಬರು ಮಹಿಳೆಯರು ಬಂದು ಮಾತನಾಡುತ್ತಾ ಆಭರಣ ತೆಗೆದುಕೊಂಡು ಹೋಗಿದ್ದು ತಿಳಿದು ಬಂದಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

## ಚುಡಾಯಿಸುತ್ತಿದ್ದವನ ಬಂಧನ

ದಾವಣಗೆರೆ, ಜು.18- ನಗರದಲ್ಲಿ ವಿದ್ಯಾರ್ಥಿನಿಯರಿಗೆ ಚುಡಾಯಿಸುವುದು, ಹಿಂಬಾಲಿಸುವುದು ಮತ್ತು ಅಸಭ್ಯವಾಗಿ ವರ್ತಿಸುವುದು, ಲೈಂಗಿಕ ಕಿರುಕುಳ ನೀಡುತ್ತಿದ್ದ ವ್ಯಕ್ತಿಯನ್ನು ಬಂಧಿಸಲಾಗಿದೆ.

ಖಾದೀರ್ ಖಾನ್ ಬಂಧಿತ ವ್ಯಕ್ತಿ. ಈತ ನಗರದ ಎಂ.ಸಿ.ಸಿ ಬಿ ಬ್ಲಾಕ್ ನಲ್ಲಿ ಯುವತಿಯೊಬ್ಬಳನ್ನು ಹಿಂಬಾಲಿಸಿಕೊಂಡು ಬಂದು ಅಶ್ಲೀಲ ಪದಗಳಿಂದ ಮಾತನಾಡಿ ಸುತ್ತಿದ್ದ. ಕಾಡಿಸುತ್ತಿದ್ದ ಎಂದು ಯುವತಿ ಜು.16ರಂದು ದೂರು ನೀಡಿದ್ದರು. ಆರೋಪಿ ಪತ್ತೆಗೆ ತಂಡ ರಚಿಸಿ, ವಿವರ ಗುರುತಿಸಿ ಅವನ ವಾಹನ ಸಂಖ್ಯೆ ಪತ್ತೆ ಮಾಡಿ ಸೋಮವಾರ ಆರೋಪಿ ಹಾಗೂ ಕೃತ್ಯಕ್ಕೆ ಬಳಸಿದ ಬೈಕ್ ಅನ್ನು ವಶಕ್ಕೆ ಪಡೆಯಲಾಗಿದೆ. ಈ ಆರೋಪಿ ಹಲವು ದಿನಗಳಿಂದ ಬೇರೆ-ಬೇರೆ ವಿದ್ಯಾರ್ಥಿನಿಯರುಗಳಿಗೆ ಚುಡಾಯಿಸುವುದು, ಬೈಕ್‌ನಲ್ಲಿ ಹಿಂಬದಿಯಿಂದ ಮೈ-ಕೈ ಮುಟ್ಟಿ ಲೈಂಗಿಕ ಕಿರುಕುಳ ನೀಡುತ್ತಿದ್ದುದ್ದಾಗಿ ತಿಳಿದು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಸೇಂಟ್ ಜಾನ್ಸ್ ಶಾಲೆಯಲ್ಲಿ ಮಿಲ್ಕ್ ಡೇ



ದಾವಣಗೆರೆ, ಜು. 18- ನಗರದ ಸೇಂಟ್ ಜಾನ್ಸ್ ಶಾಲೆಯಲ್ಲಿ ನರ್ಸರಿ ವಿಭಾಗದ ಮಕ್ಕಳಿಗೆ ಬಿಳಿ ಬಣ್ಣದ ವಸ್ತ್ರ ಧರಿಸಿ, ಮಿಲ್ಕ್ ಡೇ ಆಚರಿಸಲಾಯಿತು.

ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್. ಅನಿಲ್ ಕುಮಾರ್, ಕಾರ್ಯದರ್ಶಿ ಉಮಾಪತಯ್ಯ, ಖಜಾಂಚಿ ಪ್ರವೀಣ್ ಹುಲ್ಲುಮನಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರಾಂಶುಪಾಲರಾದ ಸೈಯದ್ ಆರೀಫ್, ಶ್ರೀಮತಿ ಪ್ರೀತಾ ಟಿ. ರೈ, ಉಪ ಪ್ರಾಂಶುಪಾಲರಾದ ಶ್ರೀಮತಿ ನೇತ್ರಾವತಿ, ಶಿಕ್ಷಕ ವೃಂದದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಜೀವನ ಮೌಲ್ಯ ಅಳವಡಿಸಿಕೊಂಡರೆ ಉತ್ತಮ ಭವಿಷ್ಯ : ಪ್ರಭಾ ಎಸ್ಸೆಸ್ಸೆಂ

ದಾವಣಗೆರೆ, ಜು. 18- ಪ್ರತಿಯೊಬ್ಬ ವಿದ್ಯಾರ್ಥಿ ಕೂಡ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡರೆ ಭವಿಷ್ಯ ಉಜ್ವಲವಾಗಲಿದೆ. ವಿದ್ಯಾರ್ಥಿ ಸಮೂಹ ಶಿಕ್ಷಕರು, ಪೋಷಕರೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಬೇಕೆಂದು ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಕರೆ ನೀಡಿದರು.



ನಗರದ ಕುವೆಂಪು ಕನ್ನಡ ಭವನದಲ್ಲಿ ಡಿ.ಆರ್. ಆರ್. ಸರ್ಕಾರಿ ಪಾಲಿಟೆಕ್ನಿಕ್ ಕರ್ನಾಟಕ ತಾಂತ್ರಿಕ ನಿರಂತರ ಶಿಕ್ಷಣ ಘಟಕದ ವತಿಯಿಂದ 2023-24 ನೇ ಸಾಲಿನ ಪ್ರಥಮ ವರ್ಷದ ಹಾಗೂ ಲ್ಯಾಟರಲ್ ಎಂಟ್ರಿ ವಿದ್ಯಾರ್ಥಿಗಳಿಗೆ ಇಂದು ಹಮ್ಮಿಕೊಂಡಿದ್ದ ಶೈಕ್ಷಣಿಕ ಪೀಠಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಸಾಮಾಜಿಕ ಪ್ರಜ್ಞೆ, ಆರೋಗ್ಯ ಕಾಳಜಿ, ಶೈಕ್ಷಣಿಕ ಹಂತ ಆಧಾರ ಸ್ತಂಭಗಳು. ಜೀವನದಲ್ಲಿ ಇಡುವ ಹೆಜ್ಜೆಗಳೇ ಭವಿಷ್ಯದ ಜೀವನಕ್ಕೆ ಸಹಕಾರಿಯಾಗಲಿವೆ ಎಂದರು.

ಒತ್ತಡದ ಸಂದರ್ಭದಲ್ಲಿ ಯಾವುದೇ ಅವಸರದ ನಿರ್ಧಾರಗಳನ್ನು ಕೈಗೊಳ್ಳುವ ಮುನ್ನ ಯೋಚಿಸಿ ಮುಂದಡಿ ಇಡಬೇಕು. ಕ್ರೀಡೆ, ಯೋಗ, ಧ್ಯಾನ, ಶಿಸ್ತು, ಸಮಯ ಪಾಲನೆ ರೂಢಿಸಿಕೊಳ್ಳಬೇಕು. ದುಶ್ಚಟಗಳಿಗೆ ಬಲಿಯಾಗದೇ ಇದ್ದರೆ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯವಿದೆ ಎಂದು ಹೇಳಿದರು.

ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕ ಮಾತನಾಡಿ ಪ್ರಾಥಮಿಕ, ಪ್ರೌಢಶಾಲಾ ಹಂತಕ್ಕಿಂತ ಕಾಲೇಜು ಶಿಕ್ಷಣ ಜೀವನದ ಪ್ರಮುಖ ಘಟ್ಟವಾಗಿದೆ. ನಾವು ಪಡೆಯುವ ತರಬೇತಿ ಆಧಾರದ ಮೇಲೆ ನಾವು ರೂಪುಗೊಳ್ಳುತ್ತೇವೆ ಎಂದರು.


ವಿದ್ಯಾರ್ಥಿಗಳು ಮೊಬೈಲ್ ಬಳಕೆ ಕಡಿಮೆ ಮಾಡಿ, ಓದಿನಲ್ಲಿ ಆಸಕ್ತಿ, ಶ್ರದ್ಧೆ, ಸತತ ಪರಿಶ್ರಮ ಇಚ್ಛಾಶಕ್ತಿ ಇದ್ದರೆ ಸಾಧನೆ ಸುಲಭ ಸಾಧ್ಯ. ಜೀವನದಲ್ಲಿ ಗುರಿ-ಛಲ ಇದ್ದರೆ ಸರ್ಕಾರದ ಉನ್ನತ ಹುದ್ದೆಗಳನ್ನು ಅಲಂಕರಿಸಬಹುದು ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಡಾ. ಎ.ಎಂ. ರವಿ ಅಧ್ಯಕ್ಷತೆ ವಹಿಸಿದ್ದರು. ಮ್ಯಾನೇಜರ್ ಎಡ್ವರ್ಡ್ ಸ್ಟ್ಯಾನ್ಲಿ, ವಿಭಾಗಾಧಿಕಾರಿ ಹೆಚ್. ಜಗದೀಶ್, ಟಿ. ಜ್ಯೋತಿಶ್ರೀ, ನಿರಂಜನ್, ಉದಯಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಇ ಅಂಡ್ ಇ ವಿಭಾಗದ ವಿಭಾಗಾಧಿಕಾರಿ ಹೆಚ್.ಕೆ. ಮಂಜಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಜ್ಞಾನ ವಿಭಾಗದ ಉಪನ್ಯಾಸಕರಾದ ಸ್ವಪ್ನ ಸ್ವಾಗತಿಸಿದರು, ಸಿ. ಎಸ್. ವಿಭಾಗದ ಮುಖಸ್ಥರಾದ ಶಾಹಿನ್ ಬಾನು, ಉಪನ್ಯಾಸಕರಾದ ಆಶಾ ನಿರೂಪಿಸಿದರು. ಸಿ.ಪಿ. ವಿಭಾಗದ ಹಿರಿಯ ಶ್ರೇಣಿ ವಿಭಾಗದ ಉಪನ್ಯಾಸಕರಾದ ಡಾ. ವಿ.ಎಂ. ಸುನಂದ ವಂದಿಸಿದರು.

# ಕಲಬುರ್ಗಿ : 51 ಅಡಿ ಎತ್ತರದ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುತ್ಥಳಿ ಅನಾವರಣ

ಕಲಬುರ್ಗಿ, ಜು.18- ಬದುಕಿ ಬಾಳುವ ಜೀವಾತ್ಮರಿಗೆ ಅಧ್ಯಾತ್ಮದ ಅರಿವು ಮುಖ್ಯ. ಮಾನವ ಜೀವನ ಉಜ್ವಲಗೊಳ್ಳಲು ಧರ್ಮ ಪರಿಪಾಲನೆಯ ಅವಶ್ಯಕತೆಯಿದೆ. ಶ್ರೀ ಜಗದ್ಗುರು ರೇವಣಸಿದ್ಧೇಶ್ವರರಿಗೆ ಧಾರ್ಮಿಕ ಮತ್ತು ಜನ ಹಿತಾತ್ಮಕ ಕಾರ್ಯಗೈದ ಕೀರ್ತಿ ಸಲ್ಲುತ್ತದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರ ಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.



ಕಾಳಗಿ ತಾಲ್ಲೂಕಿನ ರಟಕಲ್ಲ ಶ್ರೀ ಜಗದ್ಗುರು ರೇವಣಸಿದ್ಧೇಶ್ವರ ಕ್ಷೇತ್ರದಲ್ಲಿ ನಿನ್ನೆ ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ 51 ಅಡಿ ಎತ್ತರದ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುತ್ಥಳಿ ಅನಾವರಣ ಮಾಡಿದ ನಂತರ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಮನುಷ್ಯನಿಗೆ ಸುಖ-ದುಃಖ ಇರುವುದು ಸಹಜ. ಸುಖವೇ ಬರಲಿ. ಕಷ್ಟವೇ ಬರಲಿ, ಯಾವಾಗಲೂ ತಾಳ್ಮೆಯಿಂದ ಬಾಳಿ ಬದುಕುವುದೇ ನೆಮ್ಮದಿಯ ಜೀವನಕ್ಕೆ ಕಾರಣವಾಗುತ್ತದೆ. ಶ್ರೀ ಜಗದ್ಗುರು ರೇವಣಸಿದ್ಧೇಶ್ವರರು ಅಣಿಮಾದಿ ಅಷ್ಟಸಿದ್ಧಿ ಹೊಂದಿ ಭಕ್ತರ ಸಂಕಷ್ಟಗಳಿಗೆ ಸ್ಪಂದಿಸಿ, ಪರಿಹಾರ ಮಾರ್ಗವನ್ನು ಉಂಟು ಮಾಡಿದ್ದನ್ನು ಮರೆಯಲಾಗದು. ದುರ್ಬಲರ ಏಳಿಗೆ ಅಭ್ಯುದಯಕ್ಕಾಗಿ ನಿರಂತರ ಶ್ರಮಿಸಿದ್ದಾರೆ. ಹಸಿರು ಕ್ರಾಂತಿಯ ಹರಿಕಾರರಾಗಿ ಜೀವ ಜಗತ್ತಿಗೆ ಅನ್ನದ ಮಹತ್ವ ಮತ್ತು ಕಾಯಕದ ಹಿರಿಮೆಯನ್ನು ಬೋಧಿಸಿದ್ದಾರೆ ಎಂದು ಶ್ರೀಗಳು ತಿಳಿಸಿದರು.

ಚಿಂಚೋಳಿ ಕ್ಷೇತ್ರದ ಶಾಸಕ ಡಾ. ಅವಿನಾಶ ಜಾಧವ್ ಸಮಾರಂಭವನ್ನು ಉದ್ಘಾಟಿಸಿದರು. ಸೇಡಂ ವಿಭಾಗಾಧಿಕಾರಿಗಳು ಹಾಗೂ ಕ್ಷೇತ್ರದ ಆಡಳಿತಾಧಿಕಾರಿ ಆಶಪ್ಪ ಅವರು ಪೂಜಾ ಕಾರ್ಯಗಳನ್ನು ನೆರವೇರಿಸಿದರು.

ಹೊನ್ನಕಿರಣಗಿ ಶ್ರೀ ಚಂದ್ರಗುಂಡ ಶಿವಾಚಾರ್ಯ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿದರು.

# ರಾಣೇಬೆನ್ನೂರು ಕೃಷ್ಣ ಮೃಗಗಳ ಸಂರಕ್ಷಣೆಗೂ ಅನುದಾನ ಕೊಡಿ : ಶಾಸಕ ಪ್ರಕಾಶ ಕೋಳಿವಾಡ

ಬೆಂಗಳೂರು, ಜು.18- ಬಜೆಟ್‌ನಲ್ಲಿ ಬೀದರ್ ಕಾಡುಗಳ ಕೃಷ್ಣ ಮೃಗ ರಕ್ಷಣೆಗೆ 2 ಕೋಟಿ ಅನುದಾನ ನೀಡಿದ್ದು, ಅದರಂತೆ ರಾಣೇಬೆನ್ನೂರು ಅಭಯಾರಣ್ಯದಲ್ಲಿನ ಕೃಷ್ಣ ಮೃಗಗಳ ಸಂರಕ್ಷಣೆಗೂ ಅನುದಾನ ಕೊಡುವಂತೆ ಇಂದು ನಡೆದ ವಿಧಾನಸಭೆ ಅಧಿವೇಶನದಲ್ಲಿ ಶಾಸಕ ಪ್ರಕಾಶ ಕೋಳಿವಾಡ ಅವರು ಸಭಾಪತಿ ಯು.ಟಿ. ಖಾದರ್ ಮೂಲಕ ಸರ್ಕಾರಕ್ಕೆ ಒತ್ತಾಯಿಸಿದರು.



**ತಂದೆ ಹುಡುಕಿದ ಕೆರೆ... ತುಂಬಿಸಲು ಮಗನ ಪ್ರಯತ್ನ!**

ಚುನಾವಣೆ ಸಂದರ್ಭದಲ್ಲಿ ಜನತೆಗೆ ನೀಡಿದ ಗ್ಯಾರಂಟಿಗಳನ್ನು ಸರ್ವ ಜನರಿಗೂ ಕೊಡಲು ಅತ್ಯುತ್ತಮ ಬಜೆಟ್ ನೀಡಿದ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಿ ಮಾತನಾಡುತ್ತಿದ್ದ ಶಾಸಕ ಪ್ರಕಾಶ ಕೋಳಿವಾಡ ಅವರು, ರಾಣೇಬೆನ್ನೂರು ಅರಣ್ಯದಲ್ಲಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಇದ್ದ ಕೃಷ್ಣ ಮೃಗಗಳು ಸಂರಕ್ಷಣೆ ಇಲ್ಲದೆ ಪಾರ್ಟಿಗಳ ಪಾಲಾಗುತ್ತಿರುವುದು ತಿಳಿದುಬಂದಿದೆ.

ಈಗ ಆರು ಸಾವಿರದಷ್ಟು ಉಳಿದಿವೆ ಎಂದು ಹೇಳಲಾಗುತ್ತಿದೆ. ಕಾರಣ ಸರ್ಕಾರ ತೀವ್ರ ನಿಗಾವಹಿಸಿ ಅವುಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕಿದೆ ಎಂದು ಅವರು ಒತ್ತಾಯಿಸಿದರು.

ಕೇವಲ ಆರು ನೂರರಷ್ಟಿರುವ ಬೀದರ್ ಅರಣ್ಯದ ಕೃಷ್ಣ ಮೃಗಗಳ ಸಂರಕ್ಷಣೆಗೆ ಅನುದಾನ ನೀಡಿದ್ದು, ಸ್ವಾಗತಾರ್ಹವಾದುದೇ, ಆದರೆ ಅದಕ್ಕಿಂತಲೂ ಹೆಚ್ಚು ಇರುವ ರಾಣೇಬೆನ್ನೂರು ಅಭಯಾರಣ್ಯದ ಕೃಷ್ಣ ಮೃಗಗಳ ಸಂತತಿ ನಶಿಸುವುದರೊಳಗೆ ಅವುಗಳನ್ನು ರಕ್ಷಿಸುವ ಹೊಣೆಗಾರಿಕೆಯೂ ನಮ್ಮದಾಗಿದ್ದು, ಸರ್ಕಾರ ಇತ್ತ ಹೆಚ್ಚು ಗಮನಹರಿಸುವುದು ಅವಶ್ಯವಿದೆ ಎಂದು ಶಾಸಕ ಪ್ರಕಾಶ ಒತ್ತಾಯಿಸಿದರು.

**ತಂದೆ ಕೆರೆ... ಮಗ ಮೋಡ...**

ಹಾಲಿ ಶಾಸಕರ ತಂದೆ ಕೆ.ಬಿ. ಕೋಳಿವಾಡರು ಅಧಿಕಾರದಲ್ಲಿ ಇದ್ದಾಗ, ಎಲ್ಲೆಲ್ಲಿ ಕೆರೆಗಳ ಒತ್ತುವರಿಯಾಗಿದೆ. ಎಲ್ಲೆಲ್ಲಿ ಸಂಪೂರ್ಣ ಮಾಯವಾಗಿವೆ ಎನ್ನುವುದನ್ನು ಹೆಕ್ಕಿ ತೆಗೆದು ಬೃಹತ್ ವರದಿ ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದರು.

ವರುಣ ದೇವ ಕೈಕೊಟ್ಟು ರಾಜ್ಯದ ಜನ ಬರಗಾಲದ ಬವಣೆ ಅನುಭವಿಸಬಾರದು ಎಂದು ಕೃತಕ ಮಳೆ ತರಿಸಲು ಕೋಳಿವಾಡರ ಮಗ ಶಾಸಕ ಪ್ರಕಾಶ ಕೋಳಿವಾಡ ಅವರು, ಮೋಡ ಬಿತ್ತನೆಗೆ ಮೋಡಗಳನ್ನು ಹುಡುಕುವ ಕಾರ್ಯ ಮಾಡ ಹೊರಟಿದ್ದಾರೆ.

'ತಂದೆ ಹುಡುಕಿದ ಕೆರೆಗಳಿಗೆ ನೀರು ತುಂಬಿಸಲು ಮಗನ ಪ್ರಯತ್ನ' ಎಂದು ನಿನ್ನೆ ವಿಧಾನಸೌಧದ ಅಧಿವೇಶನದಲ್ಲಿ ಮೋಡ ಬಿತ್ತನೆ ಕುರಿತು ಶಾಸಕ ಪ್ರಕಾಶ ಮತ್ತು ಶಾಸಕ ಬಿ.ಆರ್.ಪಾಟೀಲ ಪರಸ್ಪರ ಚರ್ಚೆ ನಡೆಸುತ್ತಿದ್ದ ಸಂದರ್ಭದಲ್ಲಿ ರಾಣೇಬೆನ್ನೂರಿನ ಜನತಾವಾಣಿ ಓದುಗರೊಬ್ಬರು ವಾಟ್ಸಾಪ್ ಮೂಲಕ ಕಳಿಸಿದ ಸಂದೇಶ ಗಮನ ಸೆಳೆಯಿತು.

# ಮಹಿಳಾ ಕಾಲೇಜು, ಹಾಸ್ಟೆಲ್‌ಗಳಿಗೆ ಪೊಲೀಸ್ ಬೀಟ್ ವ್ಯವಸ್ಥೆ

ದಾವಣಗೆರೆ, ಜು. 18- ಜಿಲ್ಲಾ ಪೊಲೀಸ್ ವತಿಯಿಂದ ಮಹಿಳಾ ಸುರಕ್ಷತೆ ದೃಷ್ಟಿಯಿಂದ ಜಿಲ್ಲೆಯ ಎಲ್ಲಾ ಮಹಿಳಾ ಕಾಲೇಜುಗಳು ಹಾಗೂ ಹಾಸ್ಟೆಲ್‌ಗಳಿಗೆ ಪೊಲೀಸ್ ಸಿಬ್ಬಂದಿ ಬೀಟ್ ವ್ಯವಸ್ಥೆ ಮಾಡಲಾಗಿದೆ.

ಈ ಬೀಟ್ ವ್ಯವಸ್ಥೆಯಲ್ಲಿ ಪೊಲೀಸ್ ಬೀಟ್ ಸಿಬ್ಬಂದಿಗಳು ಪ್ರತಿದಿನ ಕಾಲೇಜುಗಳಲ್ಲಿ ಆರಂಭದ ಹಾಗೂ ಮುಕ್ತಾಯದ ಸಮಯದಲ್ಲಿ ಭೇಟಿ ನೀಡಿ ಕಾಲೇಜುಗಳ ಆಡಳಿತಾಧಿಕಾರಿ ಹಾಗೂ ಸಿಬ್ಬಂದಿಗಳನ್ನು ಭೇಟಿ ಮಾಡಲಿದ್ದಾರೆ. ಅಲ್ಲದೇ ವಿದ್ಯಾರ್ಥಿನಿಯರೊಂದಿಗೆ ಸಂವಹನ ನಡೆಸಲಿದ್ದಾರೆ.

ಕಾಲೇಜು ಆವರಣದಲ್ಲಿ ಕಿಡಿಗೇಡಿಗಳ ಕೀಟಲೆಗಳಿಗೆ, ಚುಡಾಯಿಸುವುದು ಮತ್ತು ಅನುಮಾನಾಸ್ಪದ ವ್ಯಕ್ತಿಗಳ ಓಡಾಟಗಳ ಮೇಲೆ ನಿಗಾವಹಿಸಲಾಗುತ್ತದೆ.

ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿ ಅವರಲ್ಲಿ ತುರ್ತು ಸಹಾಯವಾಣಿ 112 ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ..

ಮಹಿಳಾ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಹಾಸ್ಟೆಲ್ ನಿರ್ವಹಣೆ ಅಧಿಕಾರಿ, ಸಿಬ್ಬಂದಿಗಳ ಜೊತೆ ಹಾಗೂ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆಯಲಾಗುತ್ತದೆ.

# ಒಗ್ಗಟ್ಟಿನಿಂದ ಚುನಾವಣೆ ಎದುರಿಸಲು ನಿರ್ಧಾರ

ಬೆಂಗಳೂರು, ಜು.18- ರಾಷ್ಟ್ರ, ಸಂವಿಧಾನ ಮತ್ತು ಪ್ರಜಾ ಪ್ರಭುತ್ವ ವ್ಯವಸ್ಥೆಯನ್ನು ಉಳಿಸಲು ಬಿಜೆಪಿ ವಿರೋಧಿ ಪಕ್ಷಗಳು ಒಗ್ಗಟ್ಟಿನಿಂದ ಮುಂಬರುವ ಲೋಕಸಭಾ ಚುನಾವಣೆಯನ್ನು ಎದುರಿಸಲು ನಿರ್ಧರಿಸಿರುವುದಾಗಿ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಂದಿಲ್ಲಿ ಘೋಷಿಸಿದರು.



**26 ಪಕ್ಷಗಳ ಸಭೆಯ ನಂತರ ಖರ್ಗೆ ಘೋಷಣೆ**

ಇಪ್ಪತ್ತಾರು ಪಕ್ಷಗಳ ಎರಡು ದಿನಗಳ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಖರ್ಗೆ ಅವರು, ದೇಶ ಉಳಿಸಲು ನಾವು ಒಗ್ಗಟ್ಟಿನಿಂದ ಬಿಜೆಪಿ ವಿರುದ್ಧ ಹೋರಾಡುವ ತೀರ್ಮಾನ ಕೈಗೊಂಡಿದ್ದೇವೆ ಎಂದರು.

ವಿರೋಧ ಪಕ್ಷಗಳ ಹೊಸ ಒಕ್ಕೂಟಕ್ಕೆ ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲೂಸಿವ್ ಅಲಿಯನ್ಸ್ – ಐಎನ್‌ಡಿಇಎ (ಇಂಡಿಯಾ) ಎಂದು ನಾಮಕರಣ ಮಾಡಿದ್ದೇವೆ. ಒಕ್ಕೂಟದ ಕೇಂದ್ರ ಕಚೇರಿ ದೆಹಲಿಯಲ್ಲಿ ಇರಲಿದ್ದು, ಸಮನ್ವಯ ಕಾರ್ಯದರ್ಶಿ ಹಾಗೂ 11 ಸದಸ್ಯರನ್ನು ಒಳಗೊಂಡಿರುತ್ತದೆ.

ಮುಂದಿನ ಸಭೆಯನ್ನು ಮಹಾರಾಷ್ಟ್ರದ ಮುಂಬೈನಲ್ಲಿ ನಡೆಸಲು ನಿರ್ಧರಿಸಿದ್ದು, ಅಲ್ಲಿ ಹೋರಾಟದ ಮುಂದಿನ ರೂಪುರೇಷೆಗಳ ಕುರಿತು ಚರ್ಚಿಸಲಾಗುವುದು.

ಹಣದುಬ್ಬರ, ನಿರುದ್ಯೋಗ ಇಡೀ ದೇಶವನ್ನು ಕಾಡುತ್ತಿದೆ, ಜನತೆ ಕೇಂದ್ರದ ನೀತಿ-ನಿರ್ಧಾರಗಳಿಂದ ಬೇಸರಗೊಂಡಿದ್ದಾರೆ, ಅಷ್ಟೇ ಅಲ್ಲ, ವಿರೋಧ ಪಕ್ಷಗಳ ನಾಯಕರನ್ನು ದಮನ ಮಾಡುವ ಕೆಲಸವನ್ನು ಕೇಂದ್ರ ಮಾಡುತ್ತಿದೆ ಎಂದರು.

ಎನ್‌ಡಿಎ ವಿರುದ್ಧ 'ಇಂಡಿಯಾ' ಸಂಘಟನೆ ಹೋರಾಡಲಿದೆ, ವಿವಿಧ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ನಿಲುವುಗಳು ಬೇರೆ-ಬೇರೆಯಾಗಿದ್ದರೂ ರಾಷ್ಟ್ರ ಮತ್ತು ಸಂವಿಧಾನದ ಉಳಿವಿಗಾಗಿ ಸಂಘಟಿತರಾಗಿ ಹೋರಾಟ ಮಾಡಲಿದ್ದೇವೆ ಎಂದರು. ನಮ್ಮ ಹೋರಾಟವನ್ನು ಎನ್‌ಡಿಎದಿಂದ ತಡೆಯಲು ಸಾಧ್ಯವಿಲ್ಲ, ಚುನಾವಣೆಯನ್ನು ಸಂಘಟನೆಯ ಹೆಸರಿನಲ್ಲಿ ಎದುರಿಸಲಿದ್ದೇವೆ ಎಂದರು.

'ಇಂಡಿಯಾ' ಎದುರಿಸಲು ಎನ್‌ಡಿಎಗೆ ತಾಕತ್ತಿದೆಯೇ ಎಂದಿರುವ ಈ ನಾಯಕರು, ನಾವು ರೈತರು, ದಲಿತರು ಹಾಗೂ ದೇಶಕ್ಕಾಗಿ ಇದ್ದೇವೆ, ದೇಶವನ್ನು ಬಿಜೆಪಿ ಮಾರಾಟದ ವಸ್ತುವನ್ನಾಗಿ ಮಾಡಿಕೊಂಡಿದೆ. ಪ್ರಜಾಪ್ರಭುತ್ವವನ್ನು ಖರೀದಿಯ ವಸ್ತುವನ್ನಾಗಿಸಿದೆ, ಇಂಡಿಯಾ ಗೆಲ್ಲುತ್ತೆ ಎನ್‌ಡಿಎ ಸೋಲುತ್ತೆ ಎಂದು ಹೇಳಿದರು.

ಖರ್ಗೆ ಅವರ ಹೇಳಿಕೆಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಶಿವಸೇನೆ ನಾಯಕ ಉದ್ಧವ್ ಠಾಕ್ರೆ, ಕಾಂಗ್ರೆಸ್‌ನ ರಾಹುಲ್ ಗಾಂಧಿ ಸೇರಿದಂತೆ ಹಲವು ನಾಯಕರು ಧ್ವನಿಗೂಡಿಸಿದರು.

## ಸಹಾರಾ ಸಹಕಾರ ಸಂಸ್ಥೆಗಳ ಹಣ ವಾಪಸ್ ಪ್ರಕ್ರಿಯೆಗೆ ಚಾಲನೆ

ನವದೆಹಲಿ, ಜು. 18 - ಸಹಾರಾ ಸಮೂಹದ ನಾಲ್ಕು ಸಹಕಾರ ಸಂಸ್ಥೆಗಳಲ್ಲಿ ಸಿಲುಕಿದ್ದ 5 ಸಾವಿರ ಕೋಟಿ ರೂ.ಹಣವನ್ನು ಹೂಡಿಕೆದಾರರಿಗೆ ಮರಳಿಸುವ ಪ್ರಕ್ರಿಯೆಗೆ ಕೇಂದ್ರ ಸರ್ಕಾರ ಚಾಲನೆ ನೀಡಿದೆ. ಸಾವಿರಾರು ಹೂಡಿಕೆದಾರರಿಗೆ ಈ ಪ್ರಕ್ರಿಯೆಯಿಂದ ನೆರವಾಗಲಿದೆ.

**ಕೋಟ್ಯಂತರ ಹೂಡಿಕೆದಾರರ ಖಾತೆಗಳಿಗೆ 5,000 ಕೋಟಿ ರೂ. ಜಮಾ**

ನಾಲ್ಕು ಸಹಕಾರಿ ಸೊಸೈಟಿಗಳಲ್ಲಿ ಹೂಡಿಕೆ ಮಾಡಿದ್ದ ಕೋಟ್ಯಂತರ ಜನರಿಗೆ ಹಣ ಮರಳಿಸುವುದಾಗಿ ಕೇಂದ್ರ ಸರ್ಕಾರ ಕಳೆದ ಮಾರ್ಚ್ 29ರಂದು ತಿಳಿಸಿತ್ತು.

ಸಹಾರಾ - ಸೆಬಿ ಖಾತೆಯಲ್ಲಿರುವ 5 ಸಾವಿರ ಕೋಟಿ ರೂ. ಹಣವನ್ನು ಹೂಡಿಕೆದಾರರಿಗೆ ಮರಳಿಸಲು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹಣ ಮರಳಿಸುವ ಸಲುವಾಗಿ ಸಿ.ಆರ್.ಸಿ. ಎಸ್. - ಸಹಾರಾ ರೀಫಂಡ್ ಪೋರ್ಟಲ್ ಅನ್ನು ಆರಂಭಿಸಲಾಗುವುದು ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಷಾ ತಿಳಿಸಿದ್ದಾರೆ.

ಮಂಗಳವಾರದಿಂದ ಹಣ ಮರಳಿಸುವ ಪ್ರಕ್ರಿಯೆ ಆರಂಭವಾಗಿದೆ. ಪಾರದರ್ಶಕವಾಗಿ ಹಣ ಮರಳಿಸಲಾಗುವುದು ಎಂದಿದ್ದಾರೆ.

5 ಸಾವಿರ ಕೋಟಿ ರೂ. ಹಣ ಮರಳಿಸಿದ ನಂತರ, ಉಳಿದ ಹೂಡಿಕೆದಾರರಿಗೂ ಹಣ ವಾಪಸ್ ನೀಡುವ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಇನ್ನೊಂದು ಮನವಿ ಸಲ್ಲಿಸಲಾಗುವುದು. ಪ್ರಸಕ್ತ ಸರ್ಕಾರ ಸ್ಥಾಪಿಸಿರುವ ಪೋರ್ಟಲ್ ಒಂದು ಕೋಟಿ ಹೂಡಿಕೆದಾರರಿಗೆ ನೆರವಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ. ಸಹಾರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ, ಸಹಾರಾಯನ್ ಯುನಿವರ್ಸಲ್ ಮಲ್ಟಿಪರ್ಪಸ್ ಸೊಸೈಟಿ, ಹಮಾರಾ ಇಂಡಿಯಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಹಾಗೂ ಸ್ಟಾರ್ಸ್ ಮಲ್ಟಿಪರ್ಪಸ್ ಕೋ ಆಪರೇಟಿವ್ ಸೊಸೈಟಿಗಳ ಹಣವನ್ನು ಮರಳಿಸಲಾಗುತ್ತಿದೆ. 10 ಸಾವಿರ ರೂ.ಗಳಿಗೂ ಹೆಚ್ಚು ಹಣ ಠೇವಣಿ ಮಾಡಿರುವ ಹೂಡಿಕೆದಾರರಿಗೆ ಮೊದಲ ಕಂತಿನಲ್ಲಿ ಹಣ ಪಾವತಿಸಲಾಗುವುದು. ಈ ಹಣ ಪಡೆಯಲು ಹೂಡಿಕೆದಾರರು ತಮ್ಮ ಆಧಾರ್ ಕಾರ್ಡ್ ಅನ್ನು ಮೊಬೈಲ್ ಸಂಖ್ಯೆ ಹಾಗೂ ಬ್ಯಾಂಕ್ ಖಾತೆಗಳಿಗೆ ಜೋಡಣೆ ಮಾಡಬೇಕಿದೆ.

## ಆಸ್ಟ್ರೇಲಿಯ ಕಡಲ ತೀರದಲ್ಲಿ ರಾಕೆಟ್ ಪಳೆಯುಳಿಕೆ ಪತ್ತೆ

ಮೆಲ್ಬೋರ್ನ್, ಜು. 18- ಗುಮ್ಮಟಾಕಾರದ ನಿಗೂಢ ವಸ್ತುವೊಂದು ಆಸ್ಟ್ರೇಲಿಯಾದ ಕಡಲ ತೀರದಲ್ಲಿ ಕಂಡು ಬಂದಿದೆ. ಇದು 20 ವರ್ಷಗಳ ಹಿಂದೆ ಉಡಾವಣೆ ಮಾಡಲಾದ ಭಾರತದ ರಾಕೆಟ್ ಒಂದರ ಪಳೆಯುಳಿಕೆ ಇರಬಹುದು ಎಂದು ಹೇಳಲಾಗುತ್ತಿದೆ.

**20 ವರ್ಷಗಳ ಹಿಂದೆ ಇಸ್ರೋ ಉಡಾವಣೆ ಮಾಡಿದ್ದ ರಾಕೆಟ್‌ನ ಪಳೆಯುಳಿಕೆ ಎಂಬ ಶಂಕೆ**

ಪಶ್ಚಿಮ ಆಸ್ಟ್ರೇಲಿಯಾದ ಗ್ರೀನ್ ಹೆಡ್ ಎಂಬಲ್ಲಿನ ಕಡಲ ತೀರದಲ್ಲಿ ಈ ಲೋಹದ ಗುಮ್ಮಟ ಪತ್ತೆಯಾಗಿದೆ. ಈ ಬಗ್ಗೆ ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋಗೆ ಮಾಹಿತಿ ನೀಡಲಾಗಿದೆ. ವಿಚಿತ್ರವಾಗಿ ಕಾಣುವ ಬಾಹ್ಯಾಕಾಶದ ಲೋಹದ ತುಣುಕು ಸಾಕಷ್ಟು ಕುತೂಹಲಕ್ಕೆ ಕಾರಣವಾಗಿತ್ತು. ಈ ಬಗ್ಗೆ ಆಸ್ಟ್ರೇಲಿಯಾದ ಬಾಹ್ಯಾಕಾಶ ಸಂಸ್ಥೆ ಪರಿಶೀಲನೆ ನಡೆಸುತ್ತಿದೆ.

ಈ ಬಗ್ಗೆ ಮುಂದಿನ ನಿರ್ಧಾರವಾಗುವವರೆಗೆ ಲೋಹವನ್ನು ಕಾಯ್ದುಕೊಳ್ಳಲಾಗುವುದು ಎಂದು ಆಸ್ಟ್ರೇಲಿಯಾದ ಪೊಲೀಸರು ಹೇಳಿದ್ದಾರೆ.

ರಾಕೆಟ್ ಉಡಾವಣೆ ಮಾಡುವ ಸಂದರ್ಭದಲ್ಲಿ ಮೊದಲ ಹಾಗೂ ಎರಡನೇ ಹಂತದ ಇಂಜಿನ್‌ಗಳನ್ನು ಕಳಚಿ ಸಮುದ್ರಕ್ಕೆ ಬೀಳುವಂತೆ ಮಾಡಲಾಗುತ್ತದೆ. ಆಸ್ಟ್ರೇಲಿಯಾದಲ್ಲಿ ಪತ್ತೆಯಾಗಿರುವುದು ಅದೇ ರೀತಿಯ ಅವಶೇಷ ಎಂದು ಹಲವಾರು ಬಾಹ್ಯಾಕಾಶ ಪರಿಣಿತರು ಹೇಳಿದ್ದಾರೆ.

ಸವಿನೆನಪು



ಜನನ : 07.08 1945

ಮರಣ : 19.07.2018

ಶರಣ ಎನ್.ಕೆ. ಬಾನಪ್ಪ ಗೌಡ್ರು

ನಿವೃತ್ತ ಪ್ರಾಂಶುಪಾಲರು, ಎ.ವಿ.ಕೆ. ಕಾಲೇಜು, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು.

ಸದಾ ನಿಮ್ಮ ನೆನಪಿನಲ್ಲಿರುವ...

ಧರ್ಮಪತ್ನಿ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು

ಶ್ರೀ ನಂದಿ ಸ್ಪೋರ್ಟ್ಸ್

ಪಿ.ಜೆ ಬಡಾವಣೆ, 2ನೇ ಮುಖ್ಯ ರಸ್ತೆ ಎ.ವಿ.ಕೆ. ಕಾಲೇಜು ರಸ್ತೆ,

ದಾವಣಗೆರೆ. ಮೊ : 98860 79090, 78992 18181